ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 33 ಆಗಸ್ಟ್ 14, 2011 ರೂ. 5/- ಪುಟ 16





ಆಡಳಿತ ಪಕ್ಷದೊಳಗೊಂದು ವಿರೋಧ ಪಕ್ಷ !

ಎರಡು ಬಣಗಳ ನಡುವಿನ ಭಿನ್ನಾಭಿಪ್ರಾಯ ನಿವಾರಣೆಯಾಗುವ ಲಕ್ಷಣಗಳಿಲ್ಲ..
ರಾಜಕೀಯ ಅನಿಶ್ಚತತೆ ಆಡಳಿತದ ಮೇಲೆ....

▶ 9


ಬಿಜೆಪಿ ಎಂಬ ಕಳ್ಳರ ಕೂಟದ ದಶಾವತಾರಗಳು



... ಲೂಟಿಯಲ್ಲಿ ನವನವೀನ ಆವಿಷ್ಕಾರಗಳನ್ನೇ ಮಾಡಿರುವ
ಬಿಜೆಪಿಯ ಅಗ್ರಗಣ್ಯರಿಗೆ ಪ್ರಶಸ್ತಿಯನ್ನೇನಾ...

▶ 8

ಬೆಲೆ ಏರಿಕೆ - ನಿರ್ಣಯ : ಜನರ ರಕ್ತ ಹೀರಲು ಕಾಂಗ್ರೆಸ್-ಬಿಜೆಪಿ ಒಪ್ಪಂದ



ಆರ್ಥಿಕ ಧೋರಣೆಗಳ ವಿಷಯದಲ್ಲಿ
ಬಿಜೆಪಿ-ಕಾಂಗ್ರೆಸ್‌ನಡುವೆ ವ್ಯತ್ಯಾಸವೇನಿಲ್ಲ...

▶ 7



ನಾರ್ವೆ ಬಾಂಬ್ ಸ್ಫೋಟ : 'ಭಯೋತ್ಪಾದಕರೆಲ್ಲಾ ಮುಸ್ಲಿಮರಲ್ಲ....'

▶ 14

ಅತ ಉಗ್ರಗಾಮಿ... ಬಲಪಂಥೀಯ.
ಅತ ಅಮೆರಿಕನ್ ಟೀ ಪಾರ್ಟಿ, ಇಸ್ರೇಲಿ ಜಿಯೋನಿಸ್ಟ್‌ರ
ಮತ್ತು ಆರ್ ಎಸ್ ಎಸ್ ಬಗೆ ಮೆಚುಗೆ....



ರೇಷನ್ ಬೇಕಾ? ಹಾಂಗಿದ್ರೆ ಬನ್ನಿ್ರೀ....

... ಯವ್ವಾ ರೇಷನ್ ಎಲ್ಲಿ ಸಿಗುತ್ತೇ,
ಕೊಡ್ಸಿ ನನ್ಗೂ....

▶ 16

ಗ್ರಾಮ ಪಂಚಾಯತಕ್ಕೆ ಹೆಚ್ಚಿನ ಅನುದಾನಕ್ಕೆ ಎಂ.ಬಿ. ನಾಡಗೌಡ ಒತ್ತಾಯ

ಗ್ರಾಮ ಪಂಚಾಯತ ಒಂದು ಸ್ಥಳೀಯ ಸರ್ಕಾರ. ಈ ಸ್ಥಳೀಯ ಸರ್ಕಾರವನ್ನು ಬಲಪಡಿಸಿ ಚುನಾಯಿತ ಸದಸ್ಯರು ಜನರ ಬೇಡಿಕೆಗಳನ್ನು ಈಡೇರಿಸುವಂತೆ ಕ್ರಮ ಕೈಗೊಳ್ಳುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ. ರಾಜ್ಯದಲ್ಲಿ ಗ್ರಾಮ ಪಂಚಾಯತ ಸದಸ್ಯರಾಗಿ 91 ಸಾವಿರ ಜನ ಚುನಾಯಿತರಾಗಿದ್ದಾರೆ. ಗ್ರಾಮ ಪಂಚಾಯತಗಳಲ್ಲಿ ಹಣಕಾಸು ಇಲ್ಲದೆ, ಅಧಿಕಾರವೂ ಇಲ್ಲದೇ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ. ಏನೇ ಕೆಲಸವಿದ್ದರೂ ತಾಲೂಕು, ಜಿಲ್ಲಾ ಕಛೇರಿಗಳಿಗೆ ಅಲೆದಾಡುವುದೇ ನಿತ್ಯದ ಕೆಲಸವಾಗಿದೆ. ತೀವ್ರ ಹಣಕಾಸಿನ ಕೊರತೆಯಿಂದ ದಿನನಿತ್ಯದ ಕೆಲಸವನ್ನು ನಿರ್ವಹಿಸುವುದು ಪಂಚಾಯತಗಳಿಗೆ ಕಷ್ಟವಾಗಿದೆ. ಈಗ ದೊರಕುತ್ತಿರುವ ಅನುದಾನದಲ್ಲಿ ಬಹುಪಾಲು ವಿದ್ಯುತ್ ಬಿಲ್‌ಗಳಿಗಾಗಿ ಕಡಿತ ಮಾಡಲಾಗುತ್ತಿದೆ. ಚೆಕ್‌ಗೆ ಸಹಿ ಮಾಡುವ ಅಧಿಕಾರವಿದ್ದರೂ ಹಣವಿಲ್ಲದೇ ಗ್ರಾಮ ಪಂಚಾಯತ ಚುನಾಯಿತ ಸದಸ್ಯರು ಕಷ್ಟದಲ್ಲಿದ್ದಾರೆ. ತಾಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳೇ ಗ್ರಾಮ ಪಂಚಾಯತ ಅಧಿಕಾರವನ್ನು ನಿರ್ವಹಿಸುತ್ತಿರುವುದರಿಂದ ಗ್ರಾಮ ಪಂಚಾಯತ ಸದಸ್ಯರು 'ಡಮ್ಮಿ' ಮಾಡಲ್ಪಟ್ಟಿದ್ದಾರೆ. ಮೂರನೇ ಹಣಕಾಸು ಆಯೋಗವು ನಾಲ್ಕು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿದ ಗ್ರಾ.ಪಂ.ಗಳಿಗೆ 9 ಲಕ್ಷ, 4 ರಿಂದ 8 ಸಾವಿರ ಜನಸಂಖ್ಯೆ ಹೊಂದಿದ್ದರೆ 12 ಲಕ್ಷ, 8 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ್ದರೆ 15 ಲಕ್ಷ ಶಾಸನ ಬದ್ಧ ಹಣವನ್ನು ನೀಡಲು ಶಿಫಾರಸ್ಸು ಮಾಡಲಾಗಿದೆ. ಇದನ್ನು ಜಾರಿಮಾಡದೇ ಕೇವಲ 2 ಲಕ್ಷ ಹೆಚ್ಚಿಗೆ ಮಾಡಿರುವುದು ಯಾವುದಕ್ಕೂ ಸಾಕಾಗುವುದಿಲ್ಲ. ಆದ್ದರಿಂದ ಮೂರನೇ ಹಣಕಾಸು ಆಯೋಗದ ಶಿಫಾರಸ್ಸನ್ನು ಸಂಪೂರ್ಣ ಜಾರಿಮಾಡಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಒಕ್ಕೂಟದ ಸಹ ಸಂಚಾಲಕ ಎಂ.ಬಿ.ನಾಡಗೌಡ ಆಗ್ರಹಿಸಿದರು.

ಅವರು ಆಗಸ್ಟ್ 2 ರಂದು ಅಂಕೋಲಾದ ತಾಲೂಕಾ ಪಂಚಾಯತ ಸಭಾಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರ ಒಕ್ಕೂಟದ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ನೈಜ ಅಧಿಕಾರ ವಿಕೇಂದ್ರಿಕರಣ ಆಗಬೇಕೆಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಹೊನ್ನಾವರ ಮಾವಿನಕುರ್ವಾ ಗ್ರಾ.ಪಂ. ಅಧ್ಯಕ್ಷ ತಿಲಕ ಗೌಡ ವಹಿಸಿದ್ದರು. ವೇದಿಕೆಯ ಮೇಲೆ ಮೊಗಟಾ ಗ್ರಾ.ಪಂ. ಉಪಾಧ್ಯಕ್ಷ ಸುಭಾಶ ನಾಯಕ, ಕಾರವಾರ ಘಾಡಸಾಯಿ ಗ್ರಾ.ಪಂ. ಅಧ್ಯಕ್ಷೆ ಚಂದಾ ನಾಯ್ಕ, ಜೋಯಿಡಾ ನಾಗೋಡ ಗ್ರಾ.ಪಂ.ನ ದಿಗಂಬರ ದೇಸಾಯಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ ಹಾಜರಿದ್ದರು.

ಗ್ರಾ.ಪಂ. ಸದಸ್ಯರ ಪ್ರಮುಖ ಬೇಡಿಕೆಗಳೆಂದರೆ ದೇಶದ ಎಲ್ಲಾ ಗ್ರಾಮೀಣಾಭಿವೃದ್ಧಿ ಸಚಿವರು ನಡೆಸಿದ ದುಂಡು ಮೇಜಿನ ಸಭೆಯಲ್ಲಿ ಗುರುತಿಸಿದಂತೆ ನೈಜ ಅಧಿಕಾರ ವಿಕೇಂದ್ರೀಕರಣ ಆಗಲೇಬೇಕು. 9 ಇಲಾಖೆಗಳನ್ನು ಗ್ರಾ.ಪಂ. ಅಡಿಯಲ್ಲಿ ತರುವಂತಾಗಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗ ನೀಡುತ್ತಿರುವ ಅನುದಾನಗಳನ್ನು ಪ್ರತಿ ಗ್ರಾ.ಪಂ. 1 ಕೋಟಿ ರೂ.ಗೆ ಏರಿಸಬೇಕು. ತಾತ್ಕಾಲಿಕವಾಗಿ ಮೂರನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಗ್ರಾ.ಪಂ.ಗಳಿಗೆ ಅನುದಾನ ನೀಡಬೇಕು. ಗ್ರಾ.ಪಂ. ಸದಸ್ಯರ ಗೌರವ ಧನವನ್ನು 5000ಕ್ಕೆ ನಿಗದಿಗೊಳಿಸಬೇಕು. ಇತರೇ ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ನಿರ್ಣಯವು ಅಂಗೀಕರಿಸಲಾಯಿತು.

ಅಗಸ್ಟ್ 9 ರಂದು ಈ ಮೇಲಿನ ಬೇಡಿಕೆಗಳಿಗಾಗಿ ಮುಖ್ಯಮಂತ್ರಿಯುವರಿಗೆ ಮನವಿ ನೀಡಲು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಗ್ರಾ.ಪಂ. ಸದಸ್ಯರು ಬೆಂಗಳೂರಿನಲ್ಲಿ ಹಾಜರಾಗಲು ಕರೆ ನೀಡಲಾಯಿತು.

ಸಭೆಯ ಪ್ರಾರಂಭದಲ್ಲಿ ಅಚವೆ ಗ್ರಾ.ಪಂ. ಅಧ್ಯಕ್ಷ ಬಾಲಚಂದ್ರ ಶೆಟ್ಟಿ ಸ್ವಾಗತಿಸಿದರು. ಸುಭಾಶ ನಾಯಕ ವಂದಿಸಿದರು. ಗ್ರಾ.ಪಂ. ನೌಕರರ ಸಂಘದ ಕಾರ್ಯದರ್ಶಿ ಮುಕ್ತಾ ಪೂಜಾರಿ ಶಿರಸಿ ಕಾರ್ಯಕ್ರಮ ನಿರ್ವಹಿಸಿದರು.

ಸಮಿತಿಯ ಆಯ್ಕೆ : ಜಿಲ್ಲಾ ಮಟ್ಟದ ಸಂಘಟನಾ ಸಮಿತಿ ರಚಿಸಿದ್ದು, ಸಂಚಾಲಕರಾಗಿ ಹೊನ್ನಾವರದ ತಿಲಕ ಗೌಡ ಆಯ್ಕೆಯಾದರು, ಸದಸ್ಯರುಗಳಾಗಿ ಎಲ್ಲಾ ತಾಲೂಕುಗಳಿಂದ ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು.

ಸಭೆಯಲ್ಲಿ ಕಿರವತ್ತಿ ಪಂಚಾಯತ ಅಧ್ಯಕ್ಷೆ ನೂರ್ ಜಹಾನ್, ನಂದೊಳ್ಳಿ ಪಂಚಾಯತ ಉಪಾಧ್ಯಕ್ಷರಾದ ಡಿ.ಆರ್. ಹೆಗಡೆ, ಉದಯ ನಾಯಕ ಭಾವಿಕೇರಿ, ಲೀಲಾವತಿ ನಾಯ್ಕ ಮಂಜಗುಣಿ, ರಮೇಶ ನಾಯಕ ಹಿಲ್ಲೂರ, ಶಿವಶಂಕರ ಗೌಡ ಗುಡ್ನಾಪುರ, ಬಾಲಚಂದ್ರ ಹೆಗಡೆ ಕಡತೋಕ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಸಭೆಯಲ್ಲಿ ಅಗಸೂರು ಗ್ರಾಮ ಪಂಚಾಯತ ಅಧ್ಯಕ್ಷ ರಾಮಚಂದ್ರ ನಾಯ್ಕ, ಸುಂಕಸಾಳ ಗ್ರಾ.ಪಂ. ಉಪಾಧ್ಯಕ್ಷ ನಾರಾಯಣ ನಾಯ್ಕ, ಅಲಗೇರಿ ಗ್ರಾ.ಪಂ. ಉಪಾಧ್ಯಕ್ಷ ಮಂಗಲಾ ನಾಯ್ಕ, ಭಾವಿಕೇರಿ ಗ್ರಾ.ಪಂ. ಅಧ್ಯಕ್ಷೆ ದೀಪಾ ನಾಯಕ, ಬೇಲೆಕೇರಿ ಗ್ರಾ.ಪಂ. ಉಪಾಧ್ಯಕ್ಷ ಚಂದ್ರಹಾಸ ನಾಯ್ಕ, ಬೆಳಸೆ ಗ್ರಾ.ಪಂ. ಅಧ್ಯಕ್ಷ ಶಂಕರ ಗೌಡ ಮುಂತಾದ ಪಂಚಾಯತ ಪ್ರತಿನಿಧಿಗಳು ಹಾಜರಿದ್ದರು. □



ಗ್ರಾಮ ಪಂಚಾಯತ ಚುನಾಯಿತ ಪ್ರತಿನಿಧಿಗಳ ತಾಲೂಕಾ ಸಮಾವೇಶ

ದೇಶದಲ್ಲಿಯೇ ಕೇರಳ ರಾಜ್ಯ ಅಧಿಕಾರ ವಿಕೇಂದ್ರಿಕರಣ ಮಾಡಿ ಗ್ರಾಮ ಪಂಚಾಯತಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಪ್ರತಿವರ್ಷ ಬಜೆಟ್‌ನಲ್ಲಿ ಪ್ರತಿ ಪಂಚಾಯತಿಗೆ ರೂ. 5 ಕೋಟಿಗೂ ಹೆಚ್ಚು ಹಣ ಮೀಸಲಿಟ್ಟು ಪಂಚಾಯತ ವ್ಯವಸ್ಥೆ ಬಲಪಡಿಸಿದೆ. ನಮ್ಮ ರಾಜ್ಯದಲ್ಲಿ ಪಂಚಾಯತ ವ್ಯವಸ್ಥೆಯ ಗುಣಮಟ್ಟ ದುಸ್ಥಿತಿಯಲ್ಲಿದೆ. ಕೇರಳ ಮಾದರಿಯ ಪಂಚಾಯತ ವ್ಯವಸ್ಥೆ ಮಾಡಬೇಕಾದರೆ ನಮಗೆ ಸರಕಾರದಿಂದ ಹೆಚ್ಚಿನ ಅನುದಾನ ಬೇಕಾಗುತ್ತದೆ. ಅದಕ್ಕಾಗಿ ರಾಜ್ಯದ ಎಲ್ಲಾ ಚುನಾಯಿತ ಸದಸ್ಯರು ಒಂದಾಗಿ ರಾಜ್ಯ ಸರಕಾರದ ಮೇಲೆ ಒತ್ತಾಯ ತರಬೇಕಾಗುತ್ತದೆ. ಅದಕ್ಕಾಗಿ ರಾಮದುರ್ಗದಲ್ಲಿ ಚುನಾಯಿತ ಪ್ರತಿನಿಧಿಗಳ ಸಮಾವೇಶ ಕರೆಯಲಾಗಿದೆ. ಇದನ್ನು ಜಿಲ್ಲಾ ಮಟ್ಟದಲ್ಲಿ ಬೆಳೆಸಿ ಎಲ್ಲ ಸದಸ್ಯರನ್ನು ಸಂಘಟಿತರನ್ನಾಗಿ ಮಾಡಿ ಹೋರಾಟ ಮಾಡೋಣ ಎಂದು ಚುನಾಯಿತ ಗ್ರಾಮ ಪಂಚಾಯುತ್ ಪ್ರತಿನಿಧಿಗಳ ರಾಮದುರ್ಗಾ ತಾಲ್ಲೂಕು ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ರೈತ ಕಾರ್ಮಿಕ ಮುಖಂಡ ರಾದ ವ್ಹಿ. ಪಿ. ಕುಲಕರ್ಣಿರವರು ಮಾತ ನಾಡಿದರು.

ರಾಜ್ಯದಲ್ಲಿ 91 ಸಾವಿರ ಚುನಾಯಿತ ಪ್ರತಿನಿಧಿಗಳು ತಮ್ಮ ತಮ್ಮ ಗ್ರಾಮ ಮಟ್ಟಗಳಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ಏಕೆಂದರೆ ಪ್ರತಿದಿನ ಯಾವುದಾದರೊಂದು ತೊಂದರೆ ಇರುತ್ತದೆ. ಪ್ರತಿದಿನ ಜನರ ಕೈಗೆ ಸಿಗುವವರು ಗ್ರಾಮ ಪಂಚಾಯತ ಸದಸ್ಯರೆ ಹೊರತು ಎಂ.ಎಲ್.ಎ., ಎಂ.ಪಿ., ಜಿಲ್ಲಾ ಪಂಚಾಯತ ಸದಸ್ಯ ಸಿಗುವದಿಲ್ಲ. ಪಶ್ಚಿಮ ಬಂಗಾಳ ರಾಜ್ಯ ಸರಕಾರದ ಪಂಚಾಯತ ವ್ಯವಸ್ಥೆ ಅನುಸರಿಸಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಅಧ್ಯಯನ ನಡೆಸಿ ರಾಜ್ಯದಲ್ಲಿ ಪಂಚಾಯತ ವ್ಯವಸ್ಥೆ ಜಾರಿಗೆ ತಂದರು. ಆದರೆ ಪಂಚಾಯತಗಳಿಗೆ ಹೆಚ್ಚಿನ ಬಲವಿಲ್ಲದೆ, ಅನುದಾನವಿಲ್ಲದೆ ಸೊರಗುತ್ತಿವೆ. ಜನರಿಗೆ ಸರಿಯಾದ ನೀರಿನ ವ್ಯವಸ್ಥೆ ಕೊಡಲು ಆಗದೆ ಚುನಾಯಿತ ಪ್ರತಿನಿಧಿಗಳು ಬೇಸರಗೊಂಡಿದ್ದಾರೆ. ಗ್ರಾಮ ಪಂಚಾಯತಗಳ ಅಧಿಕಾರ ವಿಸ್ತಾರಗೊಳ್ಳಬೇಕಾಗಿದೆ. ಮನೆ ನಿವೇಶನ, ರೇಶನಕಾರ್ಡ, ಆಹಾರ ವಿತರಣೆ, ವಿಧವಾ ವೇತನ ಹೀಗೆ ನಾಡ ಕಛೇರಿಯ ಎಲ್ಲಾ ಕೆಲಸಗಳನ್ನು ಪಂಚಾಯತಿಗೆ ನಿರ್ವಹಿಸಲು ಕೊಟ್ಟರೆ ಪಂಚಾಯತಗಳು ಶಕ್ತಿಯುತವಾಗಿ ಜನರಿಗೆ ಸೌಕರ್ಯ ಲಭಿಸುತ್ತವೆ. ಈ ನಿಟ್ಟಿನಲ್ಲಿ ಇವತ್ತು ಪಕ್ಷಾತೀತವಾಗಿ ಚುನಾಯಿತ ಪ್ರತಿನಿಧಿಗಳ ಒಕ್ಕೂಟ ರಚಿಸಲು ಸಮಾವೇಶ ನಡೆಸಲಾಗುತ್ತದೆ ಎಂದು ಪ್ರಾಸ್ತಾವಿಕವಾಗಿ ತುರನೂರ ಪಂಚಾಯತ ಸದಸ್ಯರಾದ ಗೈಬು ಜೈನೆಖಾನ ಮಾತನಾಡಿದರು.

ತುರನೂರ ಪಂಚಾಯತ ಸದಸ್ಯರಾದ ನಾಗಪ್ಪ ಸಂಗೊಳ್ಳಿ, ಅವರಾದಿ ಪಂಚಾಯತಿಯ ಪಂಡಿತಗೌಡ ಪಾಟೀಲ, ಹೊಸಕೇರಿ ಗ್ರಾ.ಪಂ. ಅಧ್ಯಕ್ಷರಾದ ಎಸ್. ವಾಯ್. ಗೊಂದಿ, ಸುರೇಬಾನ ಗ್ರಾ.ಪಂ ಅಧ್ಯಕ್ಷರಾದ ಶ್ರೀಶೈಲಪ್ಪ ಮೆಳ್ಳಿಕೇರಿ ಹಾಗೂ ಸುಮಾರು 350 ಚುನಾಯಿತ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ○

ರಾಜ್ಯಮಟ್ಟದ ರ್‍ಯಾಲಿ

ಪಂಚಾಯ್ತಿಯ ಚುನಾಯಿತ ಅಧ್ಯಕ್ಷ, ಉಪಾಧ್ಯಕ್ಷರುಗಳಿಂದ ವಿವಿಧ ಬೇಡಿಕೆಗಳಿಗಾಗಿ ಆಗ್ರಹಿಸಿ ಆಗಸ್ಟ್ 9, 2011 ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ರ್‍ಯಾಲಿ ರೈಲ್ವೆ ನಿಲ್ದಾಣದಿಂದ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕರಿ ನೆರಳಿನ ಸರ್ಕಾರ

ಕರ್ನಾಟಕ ಹಿಂದೆಂದೂ ಕಂಡರಿಯದ ಅಕ್ರಮ–ಹಗರಣಗಳನ್ನು ಬಯಲಿಗೆಳೆದ ಲೋಕಾಯುಕ್ತರ ವರದಿ ಹಿನ್ನೆಲೆಯಲ್ಲಿ ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿರುವುದು. ಸಮರ್ಥನೀಯವೂ ಅಲ್ಲ. ಪರಿಹಾರವೂ ಅಲ್ಲ, ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅವರ ಸಂಪುಟದ 4 ಸಚಿವರು, 600 ರಷ್ಟು ಪ್ರಮುಖ ರಾಜಕೀಯ ವ್ಯಕ್ತಿಗಳು, ವಿವಿಧ ಹಂತಗಳ 787 ಅಧಿಕಾರಿಗಳು ನಡೆಸಿದ ಅಕ್ರಮ ಗಣಿಗಾರಿಕೆ, ಭ್ರಷ್ಟಾಚಾರದ ಪ್ರಕರಣದ ಸವಿವರವಾದ ವರದಿ ಹೊರಬಂದ ನಂತರ ಇಡೀ ಸರ್ಕಾರವೇ ರಾಜೀನಾಮೆ ನೀಡಿ, ಕಾನೂನಾತ್ಮಕ ಪ್ರಕ್ರಿಯೆಗೆ ಅನುವು ಮಾಡಿಕೊಡಬೇಕಿತ್ತು. ಆದರೆ ಅದಕ್ಕೆ ನಿರಾಕರಿಸಿದ ಯಡಿಯೂರಪ್ಪನವರು ಕಾನೂನು, ಸಂವಿಧಾನ, ಸಾರ್ವಜನಿಕ ಮೌಲ್ಯಗಳನ್ನು ತಿರಸ್ಕರಿಸಿದ್ದು, ಅಧಿಕಾರ ದಾಹ ಮತ್ತು ಆರೋಪಗಳನ್ನು ಮುಚ್ಚಿ ಹಾಕಿಕೊಳ್ಳುವ ಅಧಿಕಾರ ದುರ್ಬಳಕೆಯ ದುರುದ್ದೇಶದಿಂದಲೇ. ಇಂತಹ ಸಂದರ್ಭದಲ್ಲಿಯೂ ಮುಖ್ಯಮಂತ್ರಿ ರಾಜೀನಾಮೆ ಪಡೆಯಲು ಬಿಜೆಪಿ ಹೈಕಮಾಂಡ್ ಅಂಗಲಾಚುತ್ತಾ ಪರದಾಡಿದ್ದು, ಅದು ತಲುಪಿರುವ ನೈತಿಕ, ರಾಜಕೀಯ, ಸಂಘಟನಾತ್ಮಕ ಅಧಃಪತನದ ಪ್ರತೀಕವಾಗಿದೆ. ಗಣಿ ಹಾಗೂ ಭೂ ಮಾಫಿಯಾಗಳನ್ನು ಶಿಕ್ಷಿಸದೇ, ಅವರ ಹಿತಾಸಕ್ತಿಗಳನ್ನೇ ರಕ್ಷಿಸುವಂತಹ ನಿಲುವು ತಳೆದ ಬಿಜೆಪಿ ಪಕ್ಷದ ಹೈಕಮಾಂಡ್ ನಡೆಯೂ ಖಂಡನೀಯ.

ಹೊಸ ಮುಖ್ಯಮಂತ್ರಿಯಾಗಿ ಡಿ.ವಿ.ಸದಾನಂದಗೌಡರು ಆಯ್ಕೆಯಾದರೂ ಅವರು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಬಣದವರು, ಅವರನ್ನಾಶ್ರಯಿಸಿದವರು ಎಂಬ ಅಂಶವೇ ಮುಂದಿನ ದಿನಗಳ ಆಡಳಿತದ ಬಗ್ಗೆ ಹಲವಾರು ಆತಂಕ, ಅನುಮಾನಗಳನ್ನು ಹುಟ್ಟುಹಾಕುತ್ತಿದೆ.

ಈ ಸರ್ಕಾರವನ್ನು ನಿಯಂತ್ರಿಸಲು, ತಮ್ಮ ತಮ್ಮವರ ಹಿತಾಸಕ್ತಿ ಕಾಯಲು ಸತತ ಪ್ರಯತ್ನಗಳನ್ನು ಅವರು ನಡೆಸದೇ ಬಿಡುವುದಿಲ್ಲ. ಇದರ ನಡುವೆ ಆರ್‌ಎಸ್‌ಎಸ್ ಸಹ ಇನ್ನೊಂದೆಡೆಯಿಂದ ತನ್ನ 'ಸ್ವಯಂ ಸೇವಕ' ನ ಮೇಲೆ ಹಾಗೂ ಸರ್ಕಾರದ ಮೇಲೆ ಪೂರ್ಣ ನಿಯಂತ್ರಣ ಸಾಧಿಸಲು ಯತ್ನಿಸದೇ ಇರುವುದಿಲ್ಲ. ಹೀಗಾಗಿ ಸಿಕ್ಕಿರುವ ಅಧಿಕಾರ ಕ್ರೋಢೀಕರಿಸಿಕೊಳ್ಳಲು ಆರ್ಥಿಕ ಭ್ರಷ್ಟಾಚಾರ, ಕೋಮುವಾದದ ಎರಡಲಗಿನ ಕತ್ತಿ ಹಿಡಿದು ಈ ಸರ್ಕಾರ ಹೊರಟಾಗ ಜನಸಾಮಾನ್ಯರ ಪಾಡು ಇನ್ನಷ್ಟು ಶೋಚನೀಯವಾಗದೇ ಇರಲಾರದು. ಮುಖ್ಯವಾಗಿ ಸಂಪತ್ತಿನ ಲೂಟಿಯೂ ನಿಲ್ಲದು.

ಯಡಿಯೂರಪ್ಪನವರ ಸರ್ಕಾರದ ಪಾತಕಗಳಲ್ಲಿ ತನ್ನ ಹೊಣೆಗಾರಿಕೆಯಿಂದ ಆರ್.ಎಸ್.ಎಸ್. ನುಣುಚಿ ಕೊಳ್ಳುವಂತಿಲ್ಲ. ಒಂದು ವೇಳೆ ಅದೇ ಹೇಳುವ ಸಂಸ್ಕೃತಿ, ದೇಶಭಕ್ತಿ, ಪ್ರಾಮಾಣಿಕತೆಗೆ ಅದೇ ನಿಜಕ್ಕೂ ಬದ್ಧವಾಗಿ ನಿಷ್ಠುರತೆಯಿಂದ ವರ್ತಿಸಿದ್ದರೆ ಇಷ್ಟು ಅನಾಹುತಗಳಿಗೆ ನಿಯಂತ್ರಣ ವಾದರೂ ಇರುತ್ತಿತ್ತು. ಆದರೆ ಎರಡೆಳೆ ನಾಲಿಗೆಯಲ್ಲೇ ಮಾತನಾಡುವ, ತ್ರಿ–ಶೂಲ ಕಾರ್ಯಾಚರಣೆಯ ಸಂಘ ಪರಿವಾರದ ಪಾಲುದಾರಿಕೆಯ ನಿಜ ರೂಪ ನಗ್ನಗೊಂಡಿದೆ. ಈಗಿನ ಜಾಣಮೌನವೂ ಅದರ ತಂತ್ರದ ಭಾಗವೇ ಆಗಿದೆ.


ನೂತನ ಮುಖ್ಯಮಂತ್ರಿ ಸದಾನಂದ ಗೌಡರು ಸಾಮಾನ್ಯ ಕುಟುಂಬದಿಂದಲೇ ಬಂದಿರಬಹುದು, ಅವರು ಸದಾ ಹಸನ್ಮುಖಿಗಳಾಗಿಯೂ ಇರಬಹುದು. ಸಂಘ ನಿಷ್ಠ ಸ್ವಯಂ ಸೇವಕರಿರಬಹುದು. ಆದರೆ ಯಡಿಯೂರಪ್ಪನವರ ಸರ್ಕಾರದ ಭೂ ಹಗರಣದಲ್ಲಿ ಇವರ ಕೆಲ ಪ್ರಕರಣಗಳಿವೆ. ಹೀಗಾಗಿ ಅವರೂ ಕಳಂಕಿತರೇ. ಇಂತಹವರು ಭ್ರಷ್ಟಾಚಾರ, ಹಗರಣಗಳ ವಿರುದ್ಧ ಅದೆಂತಹ ಧ್ವನಿ ಎತ್ತಿಯಾರು ಎಂಬ ಪ್ರಶ್ನೆ ಮೂಡುವುದು ಸಹಜ. ಮೇಲಾಗಿ ಬಿಜೆಪಿಯೊಳಗೆ ಹಿಂದಿನಿಂದ ಇದ್ದ ಯಡಿಯೂರಪ್ಪ ಹಾಗೂ ಅನಂತಕುಮಾರ್ ಬಣಗಳು ಈ ಸಂದರ್ಭದಲ್ಲಂತೂ ಎದುರು ಬದುರಾಗಿ ಕಾದಾಡಿವೆ. ಇವುಗಳಲ್ಲಿದ್ದದ್ದು ತಮ್ಮ ಗುಂಪಿನ ಮೇಲುಗೈ ಪಡೆವ ಸ್ವಾರ್ಥ ಸಾಧಿಸುವ ಅಂಶಗಳೇ ಹೊರತು ನ್ಯಾಯಕ್ಕಾಗಿ ರಾಜ್ಯದ ಹಿತಕ್ಕಾಗಿ ಅಲ್ಲ. ಹೀಗೆ ಹರಿದು ತಿನ್ನಲು ಬಿಜೆಪಿ ಹಿಂದಿಗಿಂತ ಈಗ ಹೆಚ್ಚು ಇಬ್ಭಾಗವಾಗಿದೆ. ಹಾಗಾಗಿ ಕಾದಾಟ, ಬಂಡಾಯಗಳು ನಿತ್ಯದ ಮಾತಾಗುವು ದರಲ್ಲಿ ಸಂಶಯವಿಲ್ಲ.

ಹೀಗಿರುವಾಗ ಇವೆಲ್ಲವುಗಳ ಹೊರತಾಗಿ ಉತ್ತಮ ಸರ್ಕಾರವಾಗಲು ಬಿಜೆಪಿಗೆ ಸಾಧ್ಯವೇ ಇಲ್ಲ. ಇದು ಹಲವು ಅಕ್ರಮಗಳ ಸಂತತಿ. ಜನರ ಪಾಲಿನ ಕರಾಳ ಶಾಪ. ಆದ್ದರಿಂದ ಆಳುವ ಹಕ್ಕನ್ನು ಬಿಜೆಪಿ ಕಳೆದುಕೊಂಡಿದೆ. ಈಗಲೇ ಇರುವ ಸೂಕ್ತ ಮಾರ್ಗ ಹೊಸ ಜನಾದೇಶ ಅಷ್ಟೇ.

ಈ ವ್ಯವಸ್ಥೆಯ ವೈಫಲ್ಯ ಒಂದೇ, ಎರಡೇ..

ಇದು ಎಂತಹವರು ತಲ್ಲಣಗೊಳ್ಳುವ ಸುದ್ದಿ! ಮನುಷ್ಯನೊಳಗಿನ 'ಮನುಷ್ಯತ್ವ'ದ ಬಗ್ಗೆಯೇ ಪ್ರಶ್ನಿಸಬೇಕಾದ ಸಂಗತಿ.

ಚಿಂತಾಮಣಿ ತಾಲ್ಲೂಕಿನ ಬಾರ್ಲಹಳ್ಳಿ, ಯರ‍್ರಕೋಟ ಗ್ರಾಮಗಳಲ್ಲಿ ಡಕಾಯತರೆಂದು ಭಾವಿಸಿ ಅನುಮಾನಸ್ಪದ ಹತ್ತು ಮಂದಿ ಯುವಕರನ್ನು ಜನ ಬಡಿದೇ ಕೊಂದು ಬಿಟ್ಟಿದ್ದಾರೆ! ಆ ಯುವಕರು ಪಕ್ಕದ ಆಂಧ್ರ ಗಡಿಭಾಗದ ಊರುಗಳಿಗೆ ಸೇರಿದವರು. ಟಾಟಾ ಸುಮೋದಲ್ಲಿದ್ದ ಈ ಯುವಕರು ಮಹಿಳೆಯ ಸರಗಳ್ಳತನ ಮಾಡಿದ್ದಾರೆಂದೂ, ಅವರು ಡಕಾಯಿತರು ಎಂಬ ಸುದ್ದಿ ಹಿಡಿದೇ ಸಾರ್ವಜನಿಕರು ಅವರು ಊರಿಗೆ ಬರುತ್ತಿದ್ದಂತೆ ಜೀಪಿಗೆ ಬೆಂಕಿ ಹಚ್ಚಿದ್ದಾರೆ. ಕೆಲವರನ್ನು ಮನಸೋ ಇಚ್ಛೆ ಬಡಿದು ಕೊಂದಿದ್ದಾರೆ. ಸುದ್ದಿ ತಿಳಿದ ಪೋಲೀಸರು ಅಲ್ಲಿಗೆ ಬಂದವರಾದರೂ ಏನೂ ಕ್ರಮ ವಹಿಸಲಾಗಿಲ್ಲ! ಅಲ್ಲಿಗೆ ಬಂದವರು ಎಲ್ಲರೂ ನಕಲಿ ಆಭರಣಗಳನ್ನು ಮಾರುವವರೆಂದು ತಿಳಿದಿದೆ. ಇರಲಿ, ಅವರು ಕಳ್ಳರು, ಡಕಾಯಿತರೇ ಇರಬಹುದು. ಅಂತಹವರು ಕೈಗೆ ಸಿಕ್ಕಾಗ ಪೋಲಿಸರಿಗೆ ಒಪ್ಪಿಸುವುದು ಸರಿಯಾದ ಕ್ರಮ. ಇಂತಹ ಪ್ರತೀತಿ ಈಗಲೂ ಹಳ್ಳಿ, ನಗರದಲ್ಲಿದೆ. ಹೀಗೆ ಅಪರಾಧಗಳಲ್ಲಿ ತೊಡಗಿದವರ ಮೇಲೆ ಕಾನೂನಾತ್ಮಕವಾಗಿ ಕ್ರಮ ವಹಿಸುವುದು ಪೋಲೀಸ್ ಇಲಾಖೆಯ ಕೆಲಸ, ವಿಚಾರಣೆ ಬಳಿಕ ಶಿಕ್ಷೆ ವಿಧಿಸಲು ನ್ಯಾಯಾಲಯಗಳಿವೆ.



ಆದರೆ ಇವೆಲ್ಲವನ್ನೂ ಧಿಕ್ಕರಿಸಿ, ಆರೋಪ, ಕೂಡಲೇ ದಂಡನೆ ಎರಡನ್ನೂ ಊರಿನ 'ನಾಗರೀಕರು' ಎನ್ನಿಸಿಕೊಂಡವರು ಕೈಗೊಂಡಿದ್ದಾರೆ. ವಿವೇಚನೆ ಇಲ್ಲದೇ ಕಾನೂನನ್ನೇ ಕೈಗೆತ್ತಿಕೊಂಡ ಆ ವರ್ತನೆ ಅಮಾನವೀಯ, ಬರ್ಬರ. ಈ ಕೃತ್ಯ ಅರಾಜಕತೆ ಸೃಷಿಸಿದೆ? ಇಂತಹ ಕೃತ್ಯಗಳು ದೂರದ ಬಿಹಾರ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ನಡೆದ ವರದಿಗಳಿದ್ದವು. ಈಗ ಕರ್ನಾಟಕದಲ್ಲೇ ಸಂಭವಿಸಿದೆ. ಅದರಲ್ಲೂ ಚಿಂತಾಮಣಿ ತಾಲ್ಲೂಕಿನಲ್ಲಿ ಜನರನ್ನು ಜೀವಂತ ಸುಡುವ ಘಟನೆಗಳ ಇತ್ತೀಚಿನ ವರ್ಷಗಳಲ್ಲಿ ಇದು ಎರಡನೇ ಘಟನೆ. ದೇಶವ್ಯಾಪಿಯಾಗಿ ದಿಗ್ಭ್ರಮೆ ಹುಟ್ಟಿಸಿದ ಕಂಬಾಲಪಲ್ಲಿಯಲ್ಲಿ 7 ದಲಿತರನ್ನು ಸಜೀವವಾಗಿ ಸುಟ್ಟು ಹಾಕಿದ ಖಂಡನೀಯ ಕುಖ್ಯಾತಿ ಘಟನೆ ನಡೆದದ್ದು ಇಲ್ಲೇ. ಅಂದರೆ ಆ ಕ್ಷಣದ ಪ್ರತಿಕ್ರಿಯೆಯಾಗಿ ಘಟಿಸಿರುವುದ ಕ್ಕಿಂತಲೂ ಕಾನೂನು ಕೈಗೆತ್ತಿಕೊಳ್ಳುವ, ಸೇಡಿನ ಮನೋಭಾವ ಅಲ್ಲಿನ ಕೆಲವು ವಿಭಾಗಗಳ ಜನ ಮಾನಸದ ನಡುವೆ ಅಂತರಿಕವಾಗಿ ಕುದಿಯುತ್ತಿದೆಯೇ? ಇಂತಹದ್ದನ್ನು ಯಾರೂ, ಯಾವುದಕ್ಕೂ ಬಳಸಬಹುದಲ್ಲವೇ?

ಜಿಲ್ಲಾಡಳಿತದ ವೈಫಲ್ಯ

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳು ಹಿಂದುಳಿದ ಪ್ರದೇಶಗಳು ನಿಜ. ಇಲ್ಲಿ ಆಧುನಿಕ ಕೈಗಾರಿಕೆ, ಅಭಿವೃದ್ಧಿ ಕಾಣದ ಪ್ರದೇಶಗಳೇ ಅಧಿಕ. ಏನಿದ್ದರೂ ಪಾಳೇಗಾರಿ ಪಳಿಯುಳಿಕೆಗಳ ಪ್ರಭಾವವೇ ಹೆಚ್ಚು. ಹೀಗಾಗಿ ಸಾಮಾಜಿಕವಾಗಿ ತುಳಿತಕ್ಕೊಳಗಾದ ದಲಿತ ಮತ್ತಿತರೆ ಜನಸಮೂಹಗಳು ಸ್ವಾಭಿಮಾನದ, ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿದರೆ ಸಹಿಸದ ಊಳಿಗಮಾನ್ಯ ಮೇಲ್ಜಾತಿ, ಮೇಲ್ವರ್ಗದ ಶಕ್ತಿಗಳು ಸಕ್ರಿಯವಾಗಿರುವ ಪ್ರದೇಶಗಳಲ್ಲೊಂದು. ಇದು ಜಾತಿ ತಾರತಮ್ಯ, ದ್ವೇಷದಲ್ಲಿ ವ್ಯಕ್ತವಾಗುತ್ತಿರುತ್ತದೆ. ನೆಲದ ಕಾನೂನು, ರೀತಿ ನೀತಿ ಧಿಕ್ಕರಿಸುವ ಛಾತಿಯು ಇಲ್ಲಿ ಕಾಣಬರುತ್ತದೆ.

ಇತ್ತೀಚೆಗೆ ಹತ್ತು ಜನ ಯುವಕರನ್ನು ಹತ್ಯೆಗೈದ ಪ್ರಕರಣದಲ್ಲಿ ಇನ್ನೂ ಹಲವು ಗಂಭೀರವಾದ ಅಂಶಗಳಿವೆ. ಕಳೆದ ವಾರ ಬಾಗೇಪಲ್ಲಿಯಲ್ಲಿ ವಸತಿಹೀನರ ಬೃಹತ್ ಸಮಾವೇಶ ಮುಗಿಸಿ ಬೆಂಗಳೂರಿಗೆ ವಾಪಾಸಾಗುವಾಗ ಮಾತುಗಳ ನಡುವೆ 'ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮಗಳಲ್ಲಿ ಹೊರ ರಾಜ್ಯದಿಂದ ಕೆಲವು ಗುಂಪುಗಳು ನುಗ್ಗಿ ಕಳ್ಳತನ, ದರೋಡೆ ನಡೆಸುತ್ತಿರುವ ಘಟನೆಗಳು ಹೆಚ್ಚುತ್ತಿವೆಯೆಂದೂ, ಅದನ್ನು ನಿಯಂತ್ರಿಸಲಾಗುತ್ತಿಲ್ಲ' ವೆಂದು ಬಸ್ ಕಂಡಕ್ಟರ್ ತಿಳಿಸಿದ, ಇದನ್ನು ತಡೆಯುವ ಉಪಾಯಗಳೇನು? ಎಂಬ ಬಗ್ಗೆ ಚರ್ಚಿಸಿದ, ತಾನೂ, ಯುವಕರ ತಂಡದೊಂದಿಗೆ ರಾತ್ರಿ ಹಳ್ಳಿಯಲ್ಲಿ ಗಸ್ತು ತಿರುಗುತ್ತಿರುವು ದಾಗಿಯೂ, ಇದು ಇತರೆಡೆಗಳಲ್ಲಿಯೂ ಜಾರಿಯಲ್ಲಿರು ವುದಾಗಿಯೂ ಹೇಳಿದ. ಪೋಲೀಸರ ಕ್ರಮಗಳ ಬಗ್ಗೆ ಕೇಳಿದಾಗ 'ಅವರು ಏನೂ ಕ್ರಮ ವಹಿಸುತ್ತಿಲ್ಲ, ಬದಲಾಗಿ ಸಿಕ್ಕರೆ ಹಣ ಕಿತ್ತು ಬಿಟ್ಟು ಬಿಡುತ್ತಾರೆ' ಎಂದು ಹೇಳುವಾಗ ಆತನಲ್ಲಿ ಇಲಾಖೆಯ ಬಗ್ಗೆ ಜಿಗುಪ್ಸೆ, ತಿರಸ್ಕಾರವಿರುವುದು ಕಂಡು ಬಂತು.

ಪೋಲೀಸರ ನಿರ್ಲಕ್ಷ್ಯ

ವಾಸ್ತವದಲ್ಲಿ ಈಗಲೂ ದೊರೆತ ಮಾಹಿತಿಗಳು

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್




ಬಿಜಾಪುರ: ಭೂಮಿ ಹೋರಾಟ

- ಸೋಮಪ್ಪ ಆಯಟ್ಟಿ -

ಸುಮಾರು 30 ವರ್ಷಗಳ ಕಾಲ ವಿಜಾಪುರ ತಾಲ್ಲೂಕಿನ ಕಣಬೂರ, ಶಿರಬೂರ, ಹೊಸೂರ, ಚಿಕ್ಕಗಲಗಲಿ ಜಂಬುಗಿಗಳ ದಲಿತ ರೈತರು ಸುಮಾರು 519 ಎಕರೆ ಜಮೀನು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಈ ರೈತರು ಜುಲೈ2011 ರಂದು ಎನ್.ಜಿ.ಓ.ಹಾಲ್‌ನಲ್ಲಿ ಸುಮಾರು 300 ಜನ ಸೇರಿ ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿರುವ ರೈತರಿಗೆ ಹಾಗೂ ಅಕ್ರಮ ಮನೆ ನಿವೇಶನವನ್ನು ಸಕ್ರಮಗೊಳಿಸಬೇಕು ಎಂದು ಆಗ್ರಹಿಸಿ ಜಿಲ್ಲಾ ಮಟ್ಟದ ಭೂ ಸಮಾವೇಶ ಹಮ್ಮಿಕೊಂಡಿದ್ದರು.

ಈ ಐದು ಹಳ್ಳಿಗಳಲ್ಲಿ ಸರ್ಕಾರಿ ಜಮೀನನ್ನು ರೈತರು ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಭೂಮಿಯನ್ನು ನಮ್ಮ ಕಬ್ಜಾಕೊಡಬೇಕು ಎಂದು ಮುಖ್ಯಮಂತ್ರಿಗಳು ಉಸ್ತುವಾರಿ ಮಂತ್ರಿಗಳು, ಜಿಲ್ಲಾಧಿಕಾರಿಗಳಿಗೆ ಮನವಿಗಳು, ಹೊತ್ತಿಗೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಹೋರಾಟಗಳನ್ನು ಅನಿರ್ದಿಷ್ಟಾವಧಿ ಸತ್ಯಾಗ್ರಹಗಳನ್ನು 30 ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ. ಅದರ 30 ವರ್ಷಗಳಿಂದ ಆಡಳಿತ ನಡೆಸಿದ ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಸರ್ಕಾರಗಳಿಗೆ ಇದು ಕಣ್ಣಿಗೆ ಕಾಣದೆ ಹೋಗಿದ್ದು, ಒಂದು ದುರಂತವೇ ಸರಿ. ಇನ್ನೊಂದು ಈ ಭೂಮಿಯ ಬೆಲೆ ಹೆಚ್ಚುತ್ತಾ ಬಂದಿದ್ದರಿಂದ ಈಗ ಅನೇಕ ನುಂಗಣ್ಣಗಳ ಕಣ್ಣು ಬಿದ್ದಿದ್ದು, ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈವಾಡದಿಂದ ಈ ಐದು ಹಳ್ಳಿ ರೈತರು ಕಾನೂನು ಪ್ರಕಾರ ಕಬ್ಜಾ ಹಕ್ಕುಪತ್ರ ಆಗದೆ ಜಮೀನು ಇನ್ನೂ ತಮ್ಮ ಹೆಸರಿಗೆ ಬರದೆ ಉಳಿದಿದೆ. ಆದರೆ ರೈತರಲ್ಲಿ ಹೋರಾಟದ ಶಕ್ತಿ ಕುಂದಿರುವುದಿಲ್ಲ. ಇದು ಸರ್ಕಾರಕ್ಕೆ ಬಹಳ ದೊಡ್ಡ ಕೆಲಸವೇನೂ ಅಲ್ಲ. ಆದರೆ ಸರ್ಕಾರಗಳು ರೈತರ ಪರವಾಗಿ ಮೊಸಳೆ ಕಣ್ಣೀರು ಸುರಿಸುತ್ತಾ ರೈತರನ್ನು ವಂಚನೆ ಮಾಡುತ್ತಾ ಸಾಗಿವೆ. ಇಂತಹ ವಿಳಂಬ ನೀತಿಯನ್ನು ಖಂಡಿಸಿ ರೈತರು ಭೂಮಿಯ ಹಕ್ಕನ್ನು ಕೊಡುವವರೆಗೆ ನಾವು ನಿರಂತರ ಹೋರಾಟ ಮಾಡುತ್ತೇವೆ ಎಂದು ಒಗ್ಗಟ್ಟಿನಿಂದ ಆತ್ಮಸ್ಥೈರ್ಯದಿಂದ ಸಮಾವೇಶದಲ್ಲಿ ಮಾತನಾಡಿದ್ದಾರೆ. ಸಮಾವೇಶದ ಬೇಡಿಕೆಗಳು, ಹೀಗಿವೆ:

1. ಸರ್ಕಾರಿ ಬಗರ್‌ಹುಕುಂ ಸಾಗುವಳಿಗೆ ಜಮೀನು ಸಕ್ರಮಗೊಳಿಸಬೇಕು.
2. ಶಿವಮೊಗ್ಗ ವಿಮಾನ ನಿಲ್ದಾಣ ಭೂ ಸ್ವಾಧೀನ ಮಾದರಿಯಂತೆ ಕೃಷ್ಣಾ ನೀರಾವರಿ ಯೋಜನೆಯಲ್ಲಿ ಮುಳುಗಡೆಯಾಗುವ ರೈತರ ಬಗರ್‌ಹುಕುಂ ಸಾಗುವಳಿ ಭೂಮಿಗೂ ಪರಿಹಾರ ಕೊಡಬೇಕು.
3. ಅಕ್ರಮ ಮನೆ ನಿವೇಶನಗಳನ್ನು ಸಕ್ರಮಗೊಳಿಸಬೇಕು.
4. ಮನೆ ಇಲ್ಲದ ಬಡವರಿಗೆ ಮನೆ, ನಿವೇಶನ ಕೊಡಬೇಕು.
5. ಮಾಸ್ಟರ್ ಪ್ಲ್ಯಾನ್ ಪ್ರಕಾರ ನಗರ ಪಟ್ಟಣಗಳಲ್ಲಿ ರಸ್ತೆ ಅಗಲೀಕರಣ ಸಂದರ್ಭದಲ್ಲಿ ತೆರವಾಗಲಿರುವ ಬಡವರಿಗೆ ಪುನರ್ ವಸತಿ ವ್ಯವಸ್ಥೆ ಮಾಡಿದ ನಂತರವೇ ರಸ್ತೆ ಅಗಲೀಕರಣ ಮಾಡತಕ್ಕದ್ದು.
6. ವಿಜಾಪುರ ನಗರದಲ್ಲಿರುವ ಕೊಳಚೆ ಪ್ರದೇಶ ನಿವಾಸಿಗಳಿಗೆ ನೀಡಿರುವ ಪರಿಚಯ ಪತ್ರವು ಒಂದು ಮೋಸದ ಕ್ರಮವಾಗಿದ್ದು, ಕೂಡಲೇ ಇದನ್ನು ಸರಿಪಡಿಸಿ ಎಲ್ಲಾ ಕೊಳಚೆ ಪ್ರದೇಶ ನಿವಾಸಿಗಳಿಗೆ ಹಕ್ಕುಪತ್ರವನ್ನು ಕೊಡಬೇಕು.



ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಜಿ.ಸಿ.ಬಯ್ಯಾರೆಡ್ಡಿಯವರು ರಾಜ್ಯದಲ್ಲಿ 16.35 ಲಕ್ಷ ಬಗರ್‌ಹುಕುಂ ಸಾಗುವಳಿದಾರರು ಕಳೆದ 40-50 ವರ್ಷಗಳಿಂದ ಸರ್ಕಾರಿ ಜಮೀನು ಸಾಗುವಳಿ ಮಾಡುತ್ತಿದ್ದಾರೆ. ಈ ಜನರಿಗೆ ಅನುಕೂಲ ಕಲ್ಪಿಸಲು ಕ್ಯಾಬಿನೆಟ್‌ನಲ್ಲಿ ನಿರ್ಣಯ ಕೈಗೊಳ್ಳುವಲ್ಲಿ ಬಿಜೆಪಿ ಸರ್ಕಾರ ಮೀನಾ ಮೇಷ ಎಣಿಸುತ್ತಿದೆ ಎಂದು ತಿಳಿಸಿದರು.

ಸರ್ಕಾರ 16.35ಲಕ್ಷ ಬಗರ್‌ಹುಕುಂ ಸಾಗುವಳಿದಾರರಿಗೆ ಜಮೀನು ಹಕ್ಕು ನೀಡಿದರೆ ರಾಜ್ಯದ 47 ಲಕ್ಷ ಎಕರೆ ಬಡವರಿಗೆ ದೊರೆಯುತ್ತಿತ್ತು. ಆದರೆ ಬಿಜೆಪಿ ಸರ್ಕಾರ ಬಡವರ ಬಗ್ಗೆ ಬರೀ ಮೊಸಳೆ ಕಣ್ಣೀರು ಸುರಿಸುತ್ತಿದೆ.

ಬಿಜಾಪುರ ಜಿಲ್ಲೆಯಲ್ಲಿ ಬಡವರು ಮನೆಯಿಲ್ಲದೆ ಪರದಾಡುತ್ತಿದ್ದಾರೆ. ಪುಟ್ಟ ಗುಡಿಸಲಲ್ಲಿ ಕುರಿಗಳಂತೆ ಜೀವನ ಸಾಗಿಸುತ್ತಿದ್ದಾರೆ. ಕಳೆದ ಮೂರು ವರ್ಷದ ಅಧಿಕಾರಾವಧಿಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬೆಂಗಳೂರಿನಲ್ಲಿ ತಮ್ಮ ಸಂಬಂಧಿಕರಿಗೆ ತಲಾ 2 ಕೋಟಿ ರೂ. ಬೆಲೆ ಬಾಳುವ 250 ಸೈಟನ್ನು ಕಡಿಮೆ ಬೆಲೆಗೆ ವಿತರಿಸಿದ್ದಾರೆ. ಆದರೆ ಬಡವರಿಗೆ ಒಂದು ಸೈಟ್ ನೀಡಲು ಯಡಿಯೂರಪ್ಪ ಸರ್ಕಾರ ಮನಸ್ಸು ಮಾಡುತ್ತಿಲ್ಲ ಎಂದರು. ಅಣ್ಣಾರಾಯ ಈಳಗೇರ, ವಿ.ಎಂ.ಸೊನ್ನದ, ಸುರೇಖಾ ರಜಪೂತ ಮನ್ನಸಾಬ ಕಲಾದಗಿ, ಭೀಮಶಿ ಕಲಾದಗಿಯವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ರಾಖೇಶ ಬಾಗಡೆ, ಸೋಮಪ್ಪ ಆಯಟ್ಟಿ ಇತರರು ಉಪಸ್ಥಿತರಿದ್ದರು.

ಈ ವ್ಯವಸ್ಥೆಯ ವೈಫಲ್ಯ ಒಂದೇ, ಎರಡೇ..

ಪುಟ 3 ರಿಂದ

ಅಂತಹದ್ದನ್ನೇ ಸಮರ್ಥಿಸುತ್ತಾ, ಕಳ್ಳತನ, ದರೋಡೆ, ಅತ್ಯಾಚಾರದಂತಹ ಕೃತ್ಯಗಳನ್ನು ತಡೆಯಲು ಪೋಲೀಸರಿಂದ ಪ್ರಯತ್ನಗಳು ಆಗಿಲ್ಲ, ಕೆಲವರು ಸಿಕ್ಕರೂ ಕೈಬಿಟ್ಟಿದ್ದಾರೆ. ಮೇಲಾಗಿ ಮಾಮೂಲಿ ಘಟನೆ ಎಂಬಂತೆಯೂ ನೋಡಿದ್ದಾರೆ. ಅಂದರೆ ಇಲಾಖೆ ಪ್ರತಿಕ್ರಿಯೆ ನಿರಾಸಕ್ತಿ! ಶಾಮೀಲು! ಹೀಗಾಗಿಯೇ ಅಸಹಾಯಕತೆ ಗ್ರಾಮಗಳ ಜನರಲ್ಲಿ ಅಪನಂಬಿಕೆ, ಆಕ್ರೋಶ ಹುಟ್ಟಿಸಿದ್ದು 'ತಮ್ಮ ರಕ್ಷಣೆ ತಮ್ಮದೇ ಹೊಣೆಯೆಂದೇ ಭಾವಿಸಿದ್ದಾರೆ. ಆಡಳಿತ ವ್ಯವಸ್ಥೆಯ ಮೇಲಿನ ಕೋಪವೂ ಕುದಿದಿದೆ! ಆದರೆ ತಿರುಗಿದ್ದ ಬೇರೆ ಕಡೆ ! ಇದರ ಪ್ರಮಾಣವಂತೂ ಅನಾಹುತಕಾರಿಯಾಗಿ ಬಿಟ್ಟಿದೆ.

ಕಾರ್ಷಿಕ ಬಿಕ್ಕಟ್ಟಿನ ಪರಿಣಾಮ

ಇಂತಹ ಸನ್ನಿವೇಶವೊಂದು ಸೃಷ್ಟಿಯಾಗಲು, ಗಂಭೀರವಾದ ಭೂಮಿಕೆಯೂ ಇದೆ. ಇಂದು ಇಡೀ ಕಾರ್ಷಿಕ ರಂಗವೇ ದಿವಾಳಿಯೆದ್ದು ಬಿಕ್ಕಟ್ಟಿನಲ್ಲಿದೆ. ಇಡೀ ಗ್ರಾಮಾಂತರ ಪ್ರದೇಶಗಳು, ಅಲ್ಲಿನ ಜನತೆ ದಾರಿಕಾಣದೇ ತತ್ತರಿಸುತ್ತಿದೆ. ಅತೃಪ್ತಿ, ಆಕ್ರೋಶ, ಹೆಚ್ಚುತ್ತಿದೆ. ಪರಿಣಾಮ ವ್ಯಾಪಕ ನಿರುದ್ಯೋಗ. ಈಗಲೂ ಚಿಂತಾಮಣಿಯ ಹಳ್ಳಿಗಳನ್ನು ಒಳಗೊಂಡಂತೆ ರಾಜ್ಯದ ಹಲವಾರು ಗ್ರಾಮಗಳಲ್ಲಿ ನಿರುದ್ಯೋಗಿ ಯುವಜನರು, ಅದರಲ್ಲೂ ಅರೆ ಶಿಕ್ಷಿತ, ಅಶಿಕ್ಷಿತ ವಿಭಾಗದಲ್ಲಿ ಕೆಲವರು ತಮ್ಮದೇ ಪ್ರದೇಶಗಳಲ್ಲಿ ಪುಂಡಾಟಿಕೆ, ಕಳ್ಳತನಗಳಲ್ಲಿ ತೊಡಗಿದ್ದಾರೆ. ಇದು ಪಕ್ಕದ ಆಂಧ್ರಕ್ಕೂ, ತಮಿಳುನಾಡಿನಲ್ಲೂ ಅನ್ವಯವಾಗುವ ಸ್ಥಿತಿ. ಉದ್ಯೋಗ ಹುಡುಕಿ ವಲಸೆ ಹೋಗುವವರು ಒಂದೆಡೆ ಇದ್ದರೆ ಇನ್ನೊಂದೆಡೆ ಜೊತೆಗೆ ಇಂತಹ ಪುಂಡರು, ಕಳ್ಳರ ತಂಡಗಳೂ ಕಾರ್ಯಾಚರಣೆಗೆ ಇಳಿಯುತ್ತವೆ. ಆರ್ಥಿಕ, ಸಾಮಾಜಿಕ ಕ್ಷೋಭೆಯ ಈ ಅಂಶಗಳನ್ನು ಮರೆಯಲಾಗದು.

ಮಂತ್ರಿಗಳದ್ದೇನು ಕೆಲಸ

ಇದೇ ಹೊತ್ತಿನಲ್ಲಿ ನಮ್ಮ ಸರ್ಕಾರ, ಪೋಲೀಸ್ ಇಲಾಖೆಯ ವೈಫಲ್ಯ, ಶಾಮೀಲುತನ ಕಣ್ಣಿಗೆ ರಾಚುವಂತಿದೆ. ಗಡಿಭಾಗದ ಠಾಣೆಗಳಲ್ಲಿ ಸೂಕ್ತ ರಕ್ಷಣಾ ಕ್ರಮಗಳೂ, ಸೂಕ್ತ ಪರಿಕರ ಸಲಕರಣೆ ಗಳೂ ಇಲ್ಲ, ಮೇಲಾಗಿ ಅಗತ್ಯವಿರುವ ಸಿಬ್ಬಂದಿಯೂ ಇಲ್ಲ. ಒಂದು ವೇಳೆ ಸರ್ಕಾರಿ ಯಂತ್ರ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದ್ದರೆ ಅಂತಹ ಘಟನೆಗಳು ಸಂಭವಿಸುವ ಸಾಧ್ಯತೆಗಳು ಕಡಿಮೆ ಇರುತ್ತಿದ್ದವು. ನಮಗೊಬ್ಬ ಮುಖ್ಯಮಂತ್ರಿ, ಗೃಹಮಂತ್ರಿ ಉಸ್ತುವಾರಿಗಳಿದ್ದಾರೆ. ಆದರೆ ಅವರ ಧ್ಯಾನ ಅಧಿಕಾರ, ಆಡಳಿತ, ಜನರ ಸಂಕಷ್ಟಗಳನ್ನು ಗಮನಿಸುವುದರತ್ತ ಅಲ್ಲ, ಬದಲಾಗಿ ಲೂಟಿಯತ್ತ, ಹೀಗಾಗಿ ಆಡಳಿತ ಕುಸಿದುಹೋಗಿದೆ.

ನಿಜ, ಇಷ್ಟೆಲ್ಲಾ ಇದ್ದರೂ ನಡುವೆ ಬಾರ್ಲಪಲ್ಲಿ, ಯರ್ರಕೋಟಾದಲ್ಲಿನ ಘಟನೆಗಳನ್ನು ಯಾವುದೇ ಕಾರಣಕ್ಕೂ ಸಮರ್ಥಿಸಲಾಗುವುದಿಲ್ಲ. ಇದರಲ್ಲಿ ಭಾಗಿಯಾದವರ ಮೇಲೆ ನಿಷ್ಠುರ ಕ್ರಮ ಕೈಗೊಳ್ಳಲೇಬೇಕು. ಶಿಕ್ಷಿಸಬೇಕು. ಹಾಗೆಯೇ ಸೂಕ್ತ ರಕ್ಷಣಾ ಕ್ರಮಗಳನ್ನೂ ಸಹ.

ಅಪರಾಧಿ ಯಾರು?

ಇಲ್ಲಿ ಕೊನೆಗೂ ಉಳಿವ ಪ್ರಶ್ನೆ. ವ್ಯವಸ್ಥೆ ಸರಿಯಾದ ಕ್ರಮ ವಹಿಸಿದ್ದರೆ ಹೀಗಾಗುತ್ತಿತ್ತೇ? ಹುಟ್ಟಿಸಿರುವ ಈ ಅರಾಜಕತೆ, ಹಿಂಸಾಕೃತ್ಯ, ಅಮಾನವೀಯತೆ ಸರಿಪಡಿಸುವುದಾದರೂ ಹೇಗೆ? ಎಲ್ಲಿಂದ ಆರಂಭವಾಗಬೇಕು? ಹೊಣೆ ಹೊರಬೇಕಾದ ವ್ಯವಸ್ಥೆಯೇ ತನ್ನ ಪಾತಕಗಳನ್ನು ಮುಚ್ಚಿಕೊಳ್ಳಲು, ರಕ್ಷಿಸಿಕೊಳ್ಳುವ ಇಂತಹ ಪ್ರವೃತ್ತಿಗಳನ್ನು ಬೆಳೆಸುತ್ತಿಲ್ಲವೇ? ಬಳಸುತ್ತಿಲ್ಲವೇ। ಅದು ಜಾತಿ, ಕೋಮು ಘರ್ಷಣೆ, ದರೋಡೆ, ದುರಾಕ್ರಮಣ, ಇತ್ಯಾದಿ.. ಟಿ.ವಿ., ಪತ್ರಿಕೆ, ಸಿನಿಮಾ, ಕಾದಂಬರಿಗಳಂತಹ ಸಾಂಸ್ಕೃತಿಕ ಮೌಲ್ಯಗಳ ಪ್ರಸಾರಗಳು ಮನುಷ್ಯನೊಳಗಿನ ಮನುಷ್ಯತ್ವವನ್ನೇ ಹಾದಿ ತಪ್ಪಿಸಿ ಅಪಹರಿಸಿಲ್ಲವೇ? ಹಾಗಾದರೆ ಈ ವ್ಯವಸ್ಥೆ ಯನ್ನು ಬದಲಾಯಿಸುವ ಸರ್ಕಾರದ ನೀತಿಗಳ ವಿರುದ್ಧ ಹೋರಾಟ ಸಾಗಬೇಕಿಲ್ಲ.

ಭಾರತದ ಬಹುಕಾಲದ ಮಿತ್ರದೇಶವಾದ ಇರಾನ್ ನೊಂದಿಗಿನ ತೈಲ ವ್ಯಾಪಾರವನ್ನು ಬಹುತೇಕ ರದ್ದು ಮಾಡುವ ಹಾದಿಯಲ್ಲಿ ಭಾರತ ಒಂದೊಂದೇ ಹೆಜ್ಜೆ ಮುಂದಿಡುತ್ತಿದೆ. ಸುದೀರ್ಘ ಕಾಲದ ಅಲಿಪ್ತ ನೀತಿ ಕೈಬಿಟ್ಟು, ದೇಶದ ಹಿತಾಸಕ್ತಿಗಳನ್ನು ಗಾಳಿಗೆ ತೂರಿ ಅಮೆರಿಕ ಪಾದದಡಿಗೆ ಭಾರತ ಎರಗುತ್ತಿದೆ.

— ಪ್ರಕಾಶ್ ಕಾರತ್ —

ಅಮೆರಿಕಾವನ್ನು ಸಂತುಷ್ಟಗೊಳಿಸಲು ಇರಾನ್ ತೈಲ ನಿರಾಕರಣೆ

"ಅಣ್ವಸ್ತ್ರ ಸಾಮರ್ಥ್ಯವನ್ನೂ ಒಳಗೊಂಡಂತೆ (ಯುರೇನಿಯಂ ಅನ್ನು ಪುಷ್ಟೀಕರಿಸುವ ಅಥವಾ ಅಣು ಇಂಧನವನ್ನು ಪುನರ್‌ಸಂಸ್ಕರಿಸುವ ಸಾಮರ್ಥ್ಯವನ್ನೂ ಒಳಗೊಂಡಂತೆ) ಸಮೂಹ ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ಮತ್ತು ಸಮೂಹ ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ಪೂರೈಸುವ ಮಾರ್ಗೋಪಾಯಗಳನ್ನು ಹೊಂದುವ ಇರಾನ್‌ನ ಪ್ರಯತ್ನಗಳನ್ನು ತಡೆಯಲು, ಪ್ರತ್ಯೇಕಗೊಳಿಸಲು, ಮತ್ತು ಅಗತ್ಯ ಬಿದ್ದರೆ ನಿರ್ಬಂಧಿಸುವ ಹಾಗೂ ನಿಗ್ರಹಿಸುವ ಅಮೆರಿಕ ಮತ್ತು ಅಂತರ್ರಾಷ್ಟ್ರೀಯ ಪ್ರಯತ್ನಗಳಲ್ಲಿ ಭಾರತವು ಕೈಗೊಂಡ ನಿರ್ದಿಷ್ಟ ಕ್ರಮಗಳ ವಿವರಣೆಯನ್ನು ಒಳಗೊಂಡಂತೆ ಭಾರತ ಸಂಪೂರ್ಣವಾಗಿ ಹಾಗೂ ಸಕ್ರಿಯವಾಗಿ ಭಾಗವಹಿಸುತ್ತಿದೆಯೇ ಎಂದು ಅಂದಾಜುಮಾಡುವುದು."

(ಅಮೆರಿಕದ ಅಧ್ಯಕ್ಷರು ಕಾಂಗ್ರೆಸ್‌ಗೆ ಸಲ್ಲಿಸಬೇಕಾದ 'ಕಾರ್ಯಗತಗೊಳಿಸುವಿಕೆ ಮತ್ತು ಅನುಸರಿಸುವಿಕೆ ವಾರ್ಷಿಕ ವರದಿ' ಕುರಿತು 2006ರ ಹೆನ್ರಿ ಹೈಡ್ ಕಾಯಿದೆಯ 104ಜಿ(2)ಇ(ಐ) ಪರಿಚ್ಛೇದ)

ಭಾರತವು ತನ್ನ ಕಚ್ಚಾ ತೈಲದ ಆಮದಿನ ಶೇಕಡಾ 12 ರಷ್ಟನ್ನು ಇರಾನಿನಿಂದ ತರಿಸಿಕೊಳ್ಳುತ್ತಿದೆ. ಅಂದರೆ ಅದು ಪ್ರತಿನಿತ್ಯ 4,00,000 ಬ್ಯಾರೆಲ್‌ಗಳಷ್ಟಾಗುತ್ತದೆ. ಕಳೆದ ಕೆಲವು ತಿಂಗಳುಗಳಿಂದ ಭಾರತವು ಹಡಗು ಭರ್ತಿ ತೈಲಕ್ಕೆ ಹಣ ಕೊಟ್ಟಿಲ್ಲ. ಅಂದರೆ ಇರಾನಿನ ತೈಲ ಕಂಪನಿಗಳಿಗೆ ಸುಮಾರು 5 ಬಿಲಿಯ ಡಾಲರ್‌ಗಳಷ್ಟು ಹಣ ಬಾಕಿ ಉಳಿಸಿಕೊಂಡಿದೆ. ಇದರಿಂದಾಗಿ ಆಗಸ್ಟ್ ತಿಂಗಳಿನಿಂದ ಇರಾನಿನ ತೈಲ ಪೂರೈಕೆ ನಿಲ್ಲಲಿದೆ.


ಈ ಹಣವನ್ನು ನೀಡಲು ಭಾರತ ಕ್ರಮ ಕೈಗೊಳ್ಳದಿದ್ದರೆ ತೈಲ ಪೂರೈಕೆಯನ್ನು ನಿಲ್ಲಿಸಬೇಕಾದ ಅನಿವಾರ್ಯ ಸ್ಥಿತಿ ಬರುತ್ತದೆ ಎಂಬ ಸೂಚನೆಯನ್ನು ಇರಾನ್ ಈಗಾಗಲೇ ನೀಡಿದೆ. ಈ ಪರಿಸ್ಥಿತಿ ಉಂಟಾಗಲು ಕಾರಣವೇನು? ಇರಾನಿನ ಜತೆ ತಾನು ಹೊಂದಿರುವ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ತೊರೆಯಬೇಕೆಂಬ ಅಮೆರಿಕಾದ ಒತ್ತಡಕ್ಕೆ ಭಾರತ ಸರ್ಕಾರ ಮಣಿಯುತ್ತಿದೆ. ಇರಾನಿನ ತೈಲ ಮತ್ತು ಅನಿಲ ಉದ್ದಿಮೆಗಳನ್ನು ನಾಶಮಾಡುವ ಉದ್ದೇಶದಿಂದ ಅಮೆರಿಕಾವು ಜುಲೈ 2010ರಲ್ಲಿ ಇರಾನಿನ ಮೇಲೆ ವ್ಯಾಪಕ ಆರ್ಥಿಕ ದಿಗ್ಬಂಧನವನ್ನು ಹೇರಿದೆ. ಇದು ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ 1929ರ ನಿರ್ಣಯದನುಸಾರ ಜೂನ್ 2010ರ ದಿಗ್ಬಂಧನವನ್ನು ಮೀರಿದ್ದಾಗಿದೆ. ಇರಾನಿನ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಜತೆ ಯಾವುದೇ ಬ್ಯಾಂಕಿಂಗ್ ಹಾಗೂ ವಿದೇಶಿ ವಿನಿಮಯ ವ್ಯವಹಾರಗಳನ್ನು ಮಾಡಬಾರದೆಂಬ ನಿರ್ಬಂಧ ಮತ್ತು ನಿಷೇಧವನ್ನು ಅಮೆರಿಕಾ ಮತ್ತು ಯುರೋಪಿಯನ್ ಯೂನಿಯನ್ ದೇಶಗಳು ಹೇರಿವೆ.

ಅಣು ಒಪ್ಪಂದದ ಜಾರಿಯ ಪರಿಣಾಮಗಳು ಇವು...

- **ತೈಲ, ಅನಿಲ ಉದ್ದಿಮೆಗಳನ್ನು ನಾಶ ಮಾಡುವ ಉದ್ದೇಶ ಅಮೆರಿಕಾಕ್ಕೆ**
- **ಭಾರತ – ಇರಾನ್ ನಡುವಿನ ಹಣಕಾಸು ವ್ಯವಹಾರಕ್ಕೆ 'ದಿಗ್ಬಂಧನ'**
- **ರಿಸರ್ವ್ ಬ್ಯಾಂಕ್, ಏಶಿಯನ್ ಬುಂಡಸ್ ಬ್ಯಾಂಕ್ ಮೂಲಕ ವ್ಯವಹಾರಗಳಿಗೆ ಅಡ್ಡಿ**
- **ಅಮೆರಿಕಾ ಹಿತಾಸಕ್ತಿಗೆ ಭಾರತದ ವಿದೇಶಾಂಗ ನೀತಿ ಬದಲು**
- **ತೈಲ ಮಾತ್ರವಲ್ಲ, ಇರಾನ್‌ನಿಂದ ಅನಿಲ ಕೊಳವೆ ಪಡೆಯದಂತೆ ಕ್ರಮಗಳು**
- **ಭಾರತದ ವ್ಯವಹಾರಗಳಲ್ಲಿ ಅಮೆರಿಕಾದ ಮೂಗು**

ಅಮೆರಿಕಾದ ಒತ್ತಡಕ್ಕೆ ತಲೆಬಾಗಿದ ಭಾರತ

ಕೇವಲ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ ದಿಗ್ಬಂಧನಕ್ಕೆ ಮಾತ್ರವಲ್ಲ, ಅಮೆರಿಕಾ ಮತ್ತು ಯುರೋಪಿಯನ್ ಯೂನಿಯನ್ ದೇಶಗಳು ಹೇರಿರುವ ಅನ್ಯೈತಿಕ ಹಾಗೂ ಏಕಪಕ್ಷೀಯ ನಿರ್ಬಂಧಗಳಿಗೂ ಭಾರತ ಬದ್ಧವಾಗುತ್ತಿದೆ. ಈ ದಿಗ್ಬಂಧನಗಳ ಒತ್ತಡಕ್ಕೆ ಸಿಲುಕಿರುವ ಭಾರತದ ರಿಸರ್ವ್ ಬ್ಯಾಂಕ್, ಏಶಿಯನ್ ಕ್ಲಿಯರಿಂಗ್ ಯೂನಿಯನ್ ಮೂಲಕ ಇರಾನಿಗೆ ವಾಣಿಜ್ಯ ಸಂಬಂಧದ ಎಲ್ಲಾ ಹಣ ಸಂದಾಯವನ್ನು ತಡೆಹಿಡಿದಿದೆ. ಇರಾನಿಗೆ ಹಣ ಸಂದಾಯ ಮಾಡುವ ಈ ವಿಧಾನವನ್ನು ದೀರ್ಘ ಕಾಲದಿಂದ ಅನುಸರಿಸಲಾಗುತ್ತಿದೆ. ಇದನ್ನು ನಿಲ್ಲಿಸಿದರೆ, ಹಣ ಸಂದಾಯ ಮಾಡುವುದು ಹೇಗೆ ಎಂಬ ಸಮಸ್ಯೆ ಎದುರಾಗುತ್ತದೆ. ತದನಂತರ, ತೈಲ ಆಮದಿನ ಹಣ ಸಂದಾಯವನ್ನು ಜರ್ಮನಿಯ ಕೇಂದ್ರ ಬ್ಯಾಂಕ್ ಆಗಿರುವ ಬುಂಡಸ್ ಬ್ಯಾಂಕ್‌ನ ಖಾತೆಯ ಮೂಲಕ ಮಾಡಬಹುದೆಂಬ ಒಪ್ಪಂದವೊಂದನ್ನು ಭಾರತ ಮತ್ತು ಇರಾನ್ ಸರ್ಕಾರಗಳು ಮಾಡಿಕೊಂಡವು. ಬುಂಡಸ್ ಬ್ಯಾಂಕ್ ಆ ಹಣವನ್ನು ಹ್ಯಾಂಬರ್ಗ್‌ನಲ್ಲಿರುವ ಯೂರೋಪಿಯನ್-ಇರಾನಿಯನ್ ಟ್ರೇಡ್ ಬ್ಯಾಂಕ್‌ಗೆ ವರ್ಗಾಯಿಸಬಹುದು. ಈ ಬ್ಯಾಂಕ್ ದಿಗ್ಬಂಧನಕ್ಕೆ ಒಳಗಾಗಿಲ್ಲ.



ಭಾರತಕ್ಕೆ ಬಾರದ ಗ್ಯಾಸ್ ಪೈಪ್ ಲೈನ್.

ಹೀಗಿದ್ದಾಗ್ಯೂ, ಅಮೆರಿಕಾ ಮತ್ತು ಇಸ್ರೇಲ್‌ಗಳ ಒತ್ತಡಕ್ಕೆ ಒಳಗಾದ ಜರ್ಮನ್ ಸರ್ಕಾರ ಕೆಲವೇ ವಾರಗಳಲ್ಲಿ ಈ ವ್ಯವಹಾರವನ್ನು ನಿಲ್ಲಿಸಿತು. ಆಗಿನಿಂದಲೂ ಇರಾನ್ ಭಾರತಕ್ಕೆ ತೈಲ ಪೂರೈಕೆ ಮಾಡುತ್ತಾ ಇದೆ, ಆದರೆ ಭಾರತ ಹಣ ಸಂದಾಯ ಮಾಡುತ್ತಿಲ್ಲ.

ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ಅತ್ಯಂತ ದೊಡ್ಡ ದೇಶಗಳಲ್ಲಿ, ಸೌದಿ ಅರೇಬಿಯಾದ ನಂತರ ಇರಾನ್ ಎರಡನೇ ಸ್ಥಾನ ಪಡೆದಿದೆ. ಇರಾನಿನಿಂದ ತೈಲ ತರಿಸುವುದನ್ನು ಮುಂದುವರಿಸುವ ಬದಲು ಬೇರೆ ಯಾವ ದೇಶದಿಂದ ತರಿಸಬಹುದು ಎಂಬ ಆಲೋಚನೆಯಲ್ಲಿ ಯು.ಪಿ.ಎ ಸರ್ಕಾರ ಇದೆ. ಇರಾನಿನ ಬದಲು ಸೌದಿ ಅರೇಬಿಯಾದಿಂದ ತೈಲ ಆಮದು ಮಾಡಿಕೊಳ್ಳಿ ಎಂದು ಅಮೆರಿಕಾ ಭಾರತಕ್ಕೆ ಪುಕ್ಕಟೆ ಸಲಹೆ ನೀಡಿದೆ.

ಹೈಡ್ ಕಾಯಿದೆಯ ಹುಕುಂ

ಭಾರತ ಅಮೆರಿಕ ಅಣ್ವಸ್ತ್ರ ಒಪ್ಪಂದ ಆದಾಗಿನಿಂದ ಇರಾನ್ ಮತ್ತು ಭಾರತ ನಡುವಿನ ಪಾರಂಪರಿಕ ಸಂಬಂಧ ಹಳಸುತ್ತಾ ಬಂದಿದೆ. ಅಮೆರಿಕಾದ ವಿದೇಶಾಂಗ ನೀತಿಗನುಗುಣವಾಗಿ ಭಾರತದ ವಿದೇಶಾಂಗ ನೀತಿಯು ಸರ್ವಥಾ ಸಮನಾಗಿಯೇ ಇರಬೇಕೆಂದು ಅಣ್ವಸ್ತ್ರ ಒಪ್ಪಂದದ ಸಂದರ್ಭದಲ್ಲಿ ಅಮೆರಿಕಾ ಸ್ಪಷ್ಟಪಡಿಸಿದೆ. ಇರಾನ್ ವಿರುದ್ಧ ಅಮೆರಿಕಾದ ದಿಗ್ಬಂಧನ ಮತ್ತು ನಿಗ್ರಹದ ಪ್ರಯತ್ನದಲ್ಲಿ ಭಾರತ ಎಷ್ಟರ ಮಟ್ಟಿಗೆ ಸಹಕರಿಸುತ್ತಿದೆ ಎಂಬ ಅಂದಾಜು ಮಾಡಿ ಪ್ರತಿ ವರ್ಷ ಅಮೆರಿಕಾದ ಕಾಂಗ್ರೆಸ್‌ಗೆ ಅಧ್ಯಕ್ಷರು ವರದಿ ನೀಡಬೇಕೆಂದು ಭಾರತದೊಂದಿಗಿನ ಪರಮಾಣು ಸಹಕಾರವನ್ನು ಆಗುಮಾಡಿದ ಹೈಡ್ ಕಾಯಿದೆಯು ಸ್ಪಷ್ಟವಾಗಿ ಹೇಳಿದೆ. ಅಮೆರಿಕಾದ ಹಿತಾಸಕ್ತಿಗೆ ಅನುಗುಣವಾಗಿ ಭಾರತದ ವಿದೇಶಾಂಗ ನೀತಿಯನ್ನು ಕುಗ್ಗಿಸುವ ಮೂಲಕ ಭಾರತದ ಸಾರ್ವಭೌಮತೆಗೆ ಧಕ್ಕೆಮಾಡಿದೆ ಎಂದು ಎಡಪಕ್ಷಗಳು ಅತ್ಯುಗ್ರವಾಗಿ ವಿರೋಧಿಸಿವೆ.

ಅಧ್ಯಕ್ಷ ಬುಷ್ ಮತ್ತು ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಜುಲೈ 2005ರಲ್ಲಿ ಪರಮಾಣು ಒಪ್ಪಂದಕ್ಕೆ ಸಹಿಮಾಡಿದ ಕೆಲವೇ ವಾರಗಳೊಳಗೆ ಸೆಪ್ಟೆಂಬರ್ ನಲ್ಲಿ ಭಾರತವು ಐಎಇಎ(ಅಂತರ್ರಾಷ್ಟ್ರೀಯ ಅಣು ಇಂಧನ ಸಂಘ) ನಲ್ಲಿ ಇರಾನ್ ವಿರುದ್ಧದ ನಿರ್ಣಯದ ಪರವಾಗಿ ಮತ ಚಲಾಯಿಸಿತು. ಆಗ ಜಾಗತಿಕ ಅಲಿಪ್ತ ಚಳುವಳಿಯ ದೇಶಗಳು ನಿರ್ಣಯದ ವಿರುದ್ಧ ಮತ ಚಲಾಯಿಸಿ ಅಥವಾ ಮತದಾನದಲ್ಲೇ ಭಾಗವಹಿಸದೆ ಹಾಗೇ ಉಳಿದಿದ್ದವು. ಇರಾನಿನ ವಿರುದ್ಧ ಮತ ಚಲಾವಣೆ ಮತ್ತೆ ಫೆಬ್ರುವರಿ 2006 ರಲ್ಲೂ ಮರುಕಳಿಸಿತು. ಭಾರತದ ಈ ಅಮೆರಿಕಾ ಪರ ವರ್ತನೆಯನ್ನು ಅಮೆರಿಕಾದ ಕಾಂಗ್ರೆಸ್‌ನಲ್ಲಿ ಹೈಡ್ ಕಾಯಿದೆ ಕುರಿತ ಚರ್ಚೆಯಲ್ಲಿ ಮೆಚ್ಚುಗೆಯಿಂದ ಕೊಂಡಾಡಿದರು.

ಹಾಳುಗೆಡವಲ್ಪಟ್ಟ ಅನಿಲ ಕೊಳವೆ ಮಾರ್ಗ

ಮುಂದಿನ ಗುರಿ ಭಾರತ-ಪಾಕಿಸ್ತಾನ-ಇರಾನ್ ಕೊಳವೆ ಮಾರ್ಗ. ಯಾವುದೇ ಕಾರಣಕ್ಕೂ ಇರಾನ್‌ನೊಂದಿಗಿನ ಕೊಳವೆ ಮಾರ್ಗವನ್ನು ಸುತರಾಂ ಪ್ರಾರಂಭಿಸಬಾರದು ಎಂದು ಅಮೆರಿಕಾವು ಅನೇಕ ಬಾರಿ ಭಾರತಕ್ಕೆ ಎಚ್ಚರಿಕೆ ನೀಡಿದೆ. ಅವರ ಈ ಒತ್ತಡಕ್ಕೆ

ಪುಟ 15 ಕ್ಕೆ

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಜೈತ್‌ಪುರ ಅಣು ವಿದ್ಯುತ್ ಯೋಜನೆ(ಜೆಎನ್‌ಪಿಪಿ) ವಿರೋಧಿ ಹೋರಾಟ ಇತ್ತೀಚಿನ ದಿನಗಳಲ್ಲಿ ದೇಶದ ಗಮನ ಸೆಳೆಯುತ್ತಿರುವ ಒಂದು ಪ್ರಮುಖ ಆಂದೋಲನ.

ಜೈತ್‌ಪುರ ಅಣು ವಿದ್ಯುತ್ ಯೋಜನೆಗೆ ವಿರೋಧ


ವಿವೇಕ್ ಮೊಂತೆರೂ

ಸಂಗ್ರಹಾನುವಾದ : ವಿಶ್ವ ಕುಂದಾಪುರ

> ತುಂಬಾ ವೆಚ್ಚದ ಹಾಗೂ ಪರೀಕ್ಷೆಗೆ ಒಳಪಡದ ವಿದೇಶಿ ರಿಯಾಕ್ಟರ್ ಆಧಾರಿತ ಅಣು ವಿದ್ಯುತ್ ಯೋಜನೆಗಳಿಗೆ ಎಡಪಕ್ಷಗಳ ವಿರೋಧವಿದೆ. ಫುಕೊಷಿಮಾ ದುರಂತದ ಹಿನ್ನೆಲೆಯಲ್ಲಿ ಎಲ್ಲಾ ಹೊಸ ಅಣು ವಿದ್ಯುತ್ ಯೋಜನೆಗಳನ್ನು ಸ್ಥಗಿತಗೊಳಿಸಬೇಕು. ಸ್ವಾತಂತ್ರ್ಯ ತಜ್ಞರ ಪರಿಶೀಲನೆ ಸೇರಿದಂತೆ ಯೋಜನೆಗಳ ಬಗ್ಗೆ ಪರೀಕ್ಷೆ ನಡೆಸಬೇಕು

ಒಂದೇ ಜಾಗದಲ್ಲಿ ಒಂದಕ್ಕಿಂತ ಹೆಚ್ಚು ಪರಮಾಣು ಸ್ಥಾವರಗಳನ್ನು ಸ್ಥಾಪಿಸುವುದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಶ್ನೆಗಳು ಎದ್ದಿವೆ. ವಿಶೇಷವಾಗಿ ಜಪಾನ್‌ನ ಫುಕೋಷಿಮಾ ದುರಂತರದ ನಂತರ ಈ ಗಂಭೀರ ಪ್ರಶ್ನೆ ಉದ್ಭವಿಸಿದೆ. ಎಲ್ಲಾ ಹೊಸ ಅಣು ವಿದ್ಯುತ್ ಯೋಜನೆಗಳನ್ನು ರದ್ದುಪಡಿಸುವುದಾಗಿಯೂ, ಕ್ರಮೇಣ ಹಂತಹಂತವಾಗಿ ಅಣು ವಿದ್ಯುತ್ ಯೋಜನೆಗಳನ್ನೇ ಕೈಬಿಡುವುದಾಗಿಯೂ ಮೊದಲು ಜರ್ಮನಿ ಹಾಗೂ ನಂತರ ಜಪಾನ್ ತಮ್ಮ ನಿರ್ಧಾರವನ್ನು ಪ್ರಕಟಿಸಿವೆ. ಈ ಹಿನ್ನೆಲೆಯಲ್ಲಿ ಜೈತ್‌ಪುರ ಯೋಜನೆಯನ್ನು ಮರು ಪರಿಶೀಲಿಸುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಮನಮೋಹನ್‌ಸಿಂಗ್ ಘೋಷಿಸಿರುವುದು ಹಾಗೂ ನಿಗದಿಯಂತೆ ಅದನ್ನು ಪೂರ್ಣಗೊಳಿಸಲಾಗುವುದು ಎಂದು ಪ್ರತಿಪಾದಿಸಿರುವುದರ ಹಿಂದೆ ಯಾವುದೇ ಆರ್ಥಿಕ ಅಥವಾ ವೈಜ್ಞಾನಿಕ ಆಧಾರಗಳಿಲ್ಲ; ಬದಲಿಗೆ ಅಂತರಾಷ್ಟ್ರೀಯ ರಾಜಕೀಯ ಒತ್ತಡಗಳೇ ಕಾರಣ ಎಂಬುದು ಸುಸ್ಪಷ್ಟವಾಗುತ್ತದೆ. ಇಂಥ ಸನ್ನಿವೇಶದಲ್ಲಿ, ಈ ಯೋಜನೆಯನ್ನು ಸ್ಥಗಿತಗೊಳಿಸಬೇಕಾದರೆ, ಎಲ್ಲಾ ವಿವೇಚನೆಗಳನ್ನು ಬದಿಗೊತ್ತಿ ಈ ಯೋಜನೆಯನ್ನು ಶತಾಯಗತಾಯ ಜಾರಿಗೊಳಿಸಲೇಬೇಕು ಎಂದು ಮುಂದಾಗಿರುವ ಶಕ್ತಿಗಳನ್ನು ರಾಜಕೀಯವಾಗಿ ಸೋಲಿಸುವುದು ಅತ್ಯಗತ್ಯ ಎಂಬುದನ್ನು ಜೈತ್‌ಪುರ ಯೋಜನೆ ವಿರೋಧಿ ಹೋರಾಟಗಳು ಮನವರಿಕೆ ಮಾಡಿಕೊಳ್ಳ ತೊಡಗಿದ್ದಾರೆ. ಸ್ಥಳೀಯ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಈ ರಾಜಕೀಯ ಹೋರಾಟವನ್ನು ನಡೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿಯೇ, ಜೈತ್‌ಪುರ್ ಯೋಜನೆ ಸ್ಥಗಿತ ಹೋರಾಟಕ್ಕೆ ಎಡಪಕ್ಷಗಳ ಬೆಂಬಲ ಸಾರಲು ಸಂಗಾತಿಗಳಾದ ಪ್ರಕಾಶ್ ಕಾರಟ್, ಡಿ.ರಾಜಾ ಮತ್ತು ತಪನ್‌ಸೇನ್ ನೇತೃತ್ವದ ನಿಯೋಗ ಜುಲೈ 12, 2011 ರಂದು ನೀಡಿದ್ದ ಭೇಟಿಗೆ ಮಹತ್ವವಿದೆ.





ಸ್ಥಾವರ ಭದ್ರತೆಯ ಕುರಿತ ಆತಂಕ

ಜೈತಾಪುರ್ ಕೊರಕಲಿನಲ್ಲಿ ಇರುವ ಮೀನುಗಾರಿಕೆ ಗ್ರಾಮ ಮುಸಾಕರ್ಝಿಯ ಮೇಲ್ಭಾಗದಲ್ಲಿರುವ ಪ್ರಸ್ಥಭೂಮಿಗೆ ನಿಯೋಗ ಮೊದಲಿಗೆ ಭೇಟಿ ನೀಡಿತು. ಈ ಪ್ರಸ್ಥಭೂಮಿಯು ಭೌಗೋಳಿಕವಾಗಿ ಜೆಎನ್‌ಪಿಪಿ ಸ್ಥಾಪನೆಗೆ ಪ್ರಸ್ತಾಪವಾಗಿರುವ ಪ್ರದೇಶವಾದ ಮದ್ಬಾನ್ ಪ್ರಸ್ಥಭೂಮಿಗೆ ಹೋಲುತ್ತದೆ. ಅಲ್ಲಿ ಕಳೆದ ಅನೇಕ ದಶಕಗಳಲ್ಲಿ ಭೂ ಕಂಪನಗಳಿಂದ ಹಾಗೂ ಭಾರೀ ಮಳೆಯ ನಂತರ ಸ್ಫೂರ್ತಿಯಾದ ಆಳವಾದ ಬಿರುಕುಗಳನ್ನು ನಿಯೋಗಕ್ಕೆ ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ತೋರಿಸಲಾಯಿತು. 'ಲ್ಯಾಟರೈಟ್ ರಾಕ್' ಗಳಲ್ಲಿ (ಪುಡಿಯಾಗುವ ಕೆಂಪು ಜೇಡಿ ಮಣ್ಣು) ಈ ರೀತಿ ಆಗುವುದು ಸಾಮಾನ್ಯ. ಇಂಥ ಬೃಹತ್ ಬಿರುಕುಗಳು ಹಾಗೂ ಮಳೆಯಿಂದ ತೋಯ್ದಾಗ ಇಂಥ ಲ್ಯಾಟರೈ ಬಂಡೆಗಳು ಪರಮಾಣು ರಿಯಾಕ್ಟರ್‌ಗಳಂಥ ಅಪಾರ ಭಾರವನ್ನು ತಾಳುವುದಕ್ಕೆ ಸಂಬಂಧಪಟ್ಟ ಭೀತಿ ಹಾಗೂ ಅನುಮಾನಗಳನ್ನು; ಒಟ್ಟಾರೆಯಾಗಿ ಭದ್ರತೆಗೆ ಸಂಬಂಧಿಸಿದ ವಿಚಾರಗಳನ್ನು ಹೋರಾಟದ ಮುಂಚೂಣಿಯಲ್ಲಿರುವ 'ಜನಹಿತ ಸೇವಾ ಸಮಿತಿ'ಯ ಅಧ್ಯಕ್ಷ ಪ್ರವೀಣ್ ಗಾಂವಕರ್ ಪ್ರಸ್ತಾಪಿಸಿದ್ದಾರೆ.

ಮುಸ್ಲಿಮರೇ ಹೆಚ್ಚಾಗಿರುವ ಸಮೃದ್ಧ ಹಾಗೂ ಸ್ವಯಂ ಪರಿಪೂರ್ಣ ಮೀನುಗಾರಿಕೆ ಗ್ರಾಮ ಸಾಖ್ರಿ-ನಾತೆಗೆ ಕೂಡ ನಿಯೋಗ ಭೇಟಿ ನೀಡಿತು. ಜೆಎಸ್‌ಪಿಪಿ ವಿರೋಧಿ ಹೋರಾಟದಲ್ಲಿ ತೊಡಗಿಕೊಂಡಿರುವ ಕುಗ್ರಾಮ ಇಬ್ಬರು ಯುವ ಜೀವಗಳನ್ನು ಕಳೆದುಕೊಂಡಿದೆ. 2010ರ ಡಿಸೆಂಬರ್‌ನಲ್ಲಿ ಇರ್ಫಾನ್ ಜಾಜಿ ಎಂಬಾತ ಒಂದು ಪೋಲೀಸ್ ವಾಹನದ ಡಿಕ್ಕಿಯಿಂದ ಮೃತಪಟ್ಟ. ತಬರೆಜ್ ಸಾಯೇಕರ್ ಎಂಬ ಯುವಕ 2011 ಏಪ್ರಿಲ್ 18 ರಂದು ಪೋಲಿಸರ ಗುಂಡಿಗೆ ಬಲಿಯಾದನು. ಈ ಸಾವು ಹಾಗೂ ಬಲಿದಾನ ಈ ಗ್ರಾಮದ ಜನರ ಪ್ರಜ್ಞೆಯ ಮೇಲೆ ಅಪಾರ ಪರಿಣಾಮ ಬೀರಿದೆ.

ಯಾರನ್ನ ನಂಬಬೇಕು ?

ತಮ್ಮೂರಿಗೆ ಬಂದಿರುವ ನಾಯಕರುಗಳ ಮುಂದೆ ತಮ್ಮ ಅಳಲನ್ನು ತೋಡಿಕೊಳ್ಳಲು ನೂರಾರು ಗ್ರಾಮಸ್ಥರು ಅಲ್ಲಿ ಸೇರಿದ್ದರು. ತಾರಾಪುರ ಅಣುವಿದ್ಯುತ್ ಸ್ಥಾವರ ಪ್ರದೇಶಕ್ಕೆ ಭೇಟಿ ನೀಡಿ ಬಂದಿದ್ದರತ್ನಗಿರಿ ಜಿಲ್ಲಾ ಮೀನುಗಾರರ ಕ್ರಿಯಾ ಸಮಿತಿಯ ಅಧ್ಯಕ್ಷ ಅಮ್ಜದ್ ಬೋರ್ಕಾರ್ ಮಾತುಗಳು ಸಾವಿರಾರು ಮೀನುಗಾರರ ಆತಂಕವನ್ನು ಪ್ರತಿಧ್ವನಿಸುವಂತಿತ್ತು.

"ನಾವು ಏನನ್ನೂ ನಂಬಬೇಕು? ಯಾರನ್ನು ನಂಬಬೇಕು?" ಅಣು ವಿದ್ಯುತ್ ಯೋಜನೆಯಿಂದ ಮೀನುಗಾರಿಕೆಗೆ ಯಾವುದೇ ತೊಂದರೆ ಆಗುವುದಿಲ್ಲ ಎಂಬ ಸರ್ಕಾರದ ಆಶ್ವಾಸನೆಗಳನ್ನು ನಂಬಬೇಕೇ? ಅಥವಾ ತಾರಾಪುರದಲ್ಲಿ ತಮ್ಮ ಜೀವನಾಧಾರವನ್ನೇ ಕಳೆದುಕೊಂಡ ಮೀನುಗಾರ ಸಮುದಾಯ ಸೋದರ-ಸೋದರಿಯರ ನೈಜ ಅನುಭವಗಳು ನಂಬಬೇಕೆ?" ಎಂದು ಅಮ್ಜದ್ ಬೋರ್ಕರ್ ಗದ್ಗದಿತರಾಗಿ ಪ್ರಶ್ನಿಸಿದರು.

ಅಪೂರ್ವ ಕರತಾಡನ

ಮೌಲಾನಾ ನಯೀಮ್ ಎಂಬೊಬ್ಬ ಮೀನುಗಾರ ಮಾಡಿದ ಭಾಷಣ ಸಭೆಯಲ್ಲಿ ಅಪೂರ್ವವಾದ ಕರತಾಡನದ ಅತಿಯನ್ನೇ ಎಬ್ಬಿಸಿತು.

"ಅಮೇರಿಕಾ ಜತೆಗಿನ ಪರಮಾಣು ಒಪ್ಪಂದ ವಿಚಾರದಲ್ಲಿ ಯಾವುದೇ ರಾಜಿಯಿಲ್ಲದೆ ಸಂಸತ್ತಿನಲ್ಲಿ ಕಾಂಗ್ರೆಸ್‌ನ್ನು ವಿರೋಧಿಸಿದವರು ಈ ಎಡಪಂಥೀಯ ನಾಯಕರು. ಅವರು ಅಧಿಕಾರ ಕಳೆದುಕೊಳ್ಳಲು ಸಿದ್ಧರೇ ಹೊರತು ತತ್ವ ಸಿದ್ಧಾಂತಗಳನ್ನಲ್ಲ ಎಂದು ನಯೀಮ್ ಹೇಳಿದಾಗ ನೆರೆದಿದ್ದ ಜನರು ದೀರ್ಘ ಚಪ್ಪಾಳೆ ಮೂಲಕ ತಮ್ಮ ಬೆಂಬಲ ಸೂಚಿಸಿದರು. 'ಜಾತಿ-ಧರ್ಮ, ಪಕ್ಷಭೇದ ಮರೆತು ನಾವಿಲ್ಲಿ ಸೇರಿದ್ದೇವೆ. ಇದು ನಮ್ಮ ಹಕ್ಕಿನ ಪ್ರಶ್ನೆ' ಎಂಬುದು ಹೇಳಿದರು. ಮೀನುಗಾರಿಕೆ ಕಸಬು ಕೊಂಕಣ ಪ್ರದೇಶದ ಸಾವಿರಾರು ಜನರಿಗೆ ಜೀವನಾಧಾರ ಮಾತ್ರವೇ ಅಲ್ಲದೆ ಕರ್ನಾಟಕ, ಒರಿಸ್ಸಾ ಮತ್ತು ನೇಪಾಳದಿಂದ ಬರುವ ಅನೇಕ ಬೋಟ್‌ಗಳ ಕಾರ್ಮಿಕರಿಗೂ ಜೀವನಾಧಾರವಾಗಿದೆ' ಎಂದು ವಿವರಿಸಿದರು.

ನೆರೆಯ ರಾಯಘಡ ಜಿಲ್ಲೆಯಲ್ಲಿ ಮುಖೇಶ್ ಅಂಬಾನಿಯ ವಿಶೇಷ ಆರ್ಥಿಕ ವಲಯವನ್ನು ಸೋಲಿಸುವಲ್ಲಿ ಜನತೆ ನಡೆಸಿದ ಧೀರ ಹೋರಾಟವನ್ನು ಗಮನಕ್ಕೆ ತಂದ ಪಿಡಬ್ಲ್ಯೂಡಿ ನಾಯಕ ಧೈರ್ಯಶೀಲ್ ಪಾಟೀಲ್, ಅದೇ ರೀತಿಯ ಒಗ್ಗಟ್ಟನ್ನು ಉಳಿಸಿಕೊಂಡು, ಜೆ.ಎನ್.ಪಿ.ಪಿ. ವಿರುದ್ಧ ಹೋರಾಟವನ್ನು ಮುಂದುವರಿಸುವಂತೆ ಧೈರ್ಯ ತುಂಬಿದರು. ಕೆಲವು ಜನರು ಪರಿಹಾರ ಪಡೆದಿದ್ದರಿಂದ ಹತಾಶರಾಗದೆ ಮುನ್ನುಗ್ಗುವಂತೆ ಸಲಹೆ ಮಾಡಿದರು.

ಯೋಜನೆಯ ಸಂತ್ರಸ್ತ ಗ್ರಾಮ ಮಿಥಗಾವನಿಗೂ ಮುಖಂಡರು ಭೇಟಿ ನೀಡಿದರು. ಅಲ್ಲಿನ ಪುರಾತನ ಸುಂದರ ಅಂಜನೇಶ್ವರ ದೇವಾಲಯದಲ್ಲಿ ಸಭೆ ನಡೆಸಲಾಯಿತು. ಅಲ್ಲಿ ಮಾತನಾಡಿದ ಆ ಪ್ರದೇಶದ ಜನಪ್ರಿಯ ವೈದ್ಯ ಡಾ: ಮಿಲಿಂದ್ ದೇಸಾಯಿ ಯೋಜನೆ ವಿರೋಧಿ ಹೋರಾಟವನ್ನು ಬಗ್ಗುಬಡಿಯಲು ಅಧಿಕಾರಿಗಳು, ಪೋಲೀಸರು ಯಾವ ರೀತಿ ತಂತ್ರಗಳನ್ನು ಹೆಣೆಯುತ್ತಿದ್ದಾರೆ ಎಂಬುದನ್ನು ತಮ್ಮ ಸ್ವಂತ ಅನುಭವದ ಮೇಲೆ ವಿವರಿಸಿದರು. ಒಂದು ದಿನ ರಾತ್ರಿ ಏಕಾಏಕಿ ಬಂಧಿಸಿ ಹಲವು ದಿನ ಸೆರೆಯಲ್ಲಿಟ್ಟಿರುವ ಜನರಲ್ಲಿ ಭಯವನ್ನು ಹುಟ್ಟಿಸಿ ಒತ್ತಡ ಹಾಕುವುದು ಇದರ ಉದ್ದೇಶ ಎಂದರು. ◎

ಗೊಡ್ಡು ಬೆದರಿಕೆ – ಸಭೆಗೆ ಅಡ್ಡಿ

ಸಭೆ ಹಾಳು ಮಾಡಲು ಕಾಂಗ್ರೆಸ್ ಯತ್ನ: ಎಡಪಕ್ಷಗಳ ನಿಯೋಗದ ಭೇಟಿಯ ಕೊನೆಯ ಭಾಗವಾಗಿ ರತ್ನಗಿರಿ ಸಿಟಿ ಲೈಬ್ರರಿ ಹಾಲ್‌ನಲ್ಲಿ ಜುಲೈ 12 ರ ಸಂಜೆ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯನ್ನು ನಡೆಸಲು ಅವಕಾಶ ಕೊಡುವುದಿಲ್ಲ ಎಂದು ಕಾಂಗ್ರೆಸ್ ಗೂಂಡಾಗಳು ಪತ್ರಿಕೆಗಳ ಮೂಲಕ ಬೆದರಿಕೆ ಒಡ್ಡಿದ್ದರು.

ಆದರೆ ಎಡಪಕ್ಷಗಳು ಹಾಗೂ ಸಿಐಟಿಯುನಂಥ ಕಾರ್ಮಿಕ ಸಂಘಟನೆಗಳ ಪರಿಣಾಮಕಾರಿ ಕಾರ್ಯಾಚರಣೆ ಜನವಿರೋಧಿ ಕಾಂಗ್ರೆಸ್ಸಿಗರ ಗೊಡ್ಡು ಬೆದರಿಕೆಯನ್ನು ವಿಫಲಗೊಳಿಸಿತು. ಮೀನುಗಾರರು, ಯುವಕ-ಯುವತಿಯರು, ರೈತರು, ಶಿಕ್ಷಕ ಸಂಘಟನೆಗಳ ಸದಸ್ಯರು, ನೆರೆಯ ಕೊಲ್ಲಾಪುರ ಜಿಲ್ಲೆಯ ಸಿಪಿಐ(ಎಂ) ಸಂಗಾತಿಗಳು ಇತ್ಯಾದಿಯಾಗಿ ವಿವಿಧ ವಿಭಾಗಗಳ ಜನರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ಸಭೆಯನ್ನು ಯಶಸ್ವಿಗೊಳಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ: ಅಶೋಕ ಧವಳೆ ಅಧ್ಯಕ್ಷತೆ ವಹಿಸಿದ್ದರು. ನಿಯೋಗದ ಭೇಟಿಗೆ ಕೂಡ ನಿಷೇಧಾಜ್ಞೆ ಹಾಕಿ ನಿರ್ಬಂಧಿಸಲಾಯಿತು. ಆದರೂ ಪಟ್ಟುಬಿಡದ ಮುಖಂಡರು ನಿಯೋಗದ ಸದಸ್ಯರ ಸಂಖ್ಯೆ ಕಡಿತಗೊಳಿಸಿ ತೆರಳಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭ್ರಷ್ಟಾಚಾರದ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂಬುದನ್ನು ಕರ್ನಾಟಕದ ರಾಜಕೀಯ ತೋರಿಸಿಕೊಟ್ಟರೆ, ಬೆಲೆಯೇರಿಕೆಯ ವಿಷಯದಲ್ಲೂ ಏನೂ ವ್ಯತ್ಯಾಸವಿಲ್ಲ ಎಂಬುದು ಬಿಜೆಪಿ ಲೋಕಸಭೆಯಲ್ಲಿ ಯುಪಿಎ ಒಪ್ಪಿಗೆಯೊಂದಿಗೆ ಮಂಡಿಸಿರುವ ಕರಡು ನಿರ್ಣಯದಿಂದ ಸಾಬೀತಾಗಿದೆ. ಇದು ಕಳೆದ ವರ್ಷ ಎರಡೂ ಸದನಗಳು ಅಂಗೀಕರಿಸಿದ ನಿರ್ಣಯದ ಪುನರಾವರ್ತನೆಯಷ್ಟೇ. ಆದ್ದರಿಂದ, ಎಡಪಕ್ಷಗಳು ಈ ಕರಡಿಗೆ ಒಂದು ತಿದ್ದುಪಡಿಯನ್ನು ಮಂಡಿಸಿವೆ. ಈ ಮೂಲಕ ಎಡಪಕ್ಷಗಳು ಮೂರು ನಿರ್ದಿಷ್ಟ ಕ್ರಮಗಳನ್ನು ಕೈಗೊಂಡು, ಅಮೂಲಕ ಹೆಚ್ಚೆಚ್ಚು ಆರ್ಥಿಕ ಹೊರೆಗಳಿಂದ ನಲುಗಿ ಹೋಗಿರುವ 'ಆಮ್ ಆದ್ಮಿ'ಯನ್ನು ಕಾಪಾಡುವಂತೆ ಯುಪಿಎ-2 ಸರಕಾರದ ಮೇಲೆ ಒತ್ತಡವನ್ನು ಹಾಕುತ್ತಿವೆ.

ಲೋಕಸಭೆಯಲ್ಲಿ ಬೆಲೆಯೇರಿಕೆಯ ವಿರುದ್ಧ ಬಿಜೆಪಿ ನಿರ್ಣಯ

ಜನಸಾಮಾನ್ಯರ ರಕ್ತ ಹೀರಲು ಕಾಂಗ್ರೆಸ್-ಬಿಜೆಪಿ ಒಪ್ಪಂದ !

ಎಲ್ಲ ಜೀವನಾವಶ್ಯಕ ಸರಕುಗಳ ನಿರಂತರ ಬೆಲೆಯೇರಿಕೆ ನಮ್ಮ ಬಹು ಪಾಲು ಜನತೆಯ ಮೇಲೆ ಸತತವಾಗಿ ಹೆಚ್ಚೆಚ್ಚು ಹೊರೆಗಳನ್ನು ಹೇರುತ್ತಲೇ ಇದೆ. ಸಂಸತ್ತಿನ ಈ ಮುಂಗಾರು ಅಧಿವೇಶನ ಈ ಪ್ರಶ್ನೆಯನ್ನು ಚರ್ಚಿಸುತ್ತದೆ, ಜನಸಾಮಾನ್ಯರಿಗೆ ಪರಿಹಾರ ಒದಗಿಸಬಲ್ಲ ಮಹತ್ವದ ನಿರ್ಣಯಗಳನ್ನು ಕೈಗೊಳ್ಳುತ್ತದೆ ಎಂದು ಜನ ನಿರೀಕ್ಷಿಸಿದ್ದರೆ ಅದು ಸಹಜವೇ. ಆದರೆ ಈ ಮುಂಗಾರು ಅಧಿವೇಶನವನ್ನು ಸರಕಾರ ಬಹಳ ವಿಳಂಬಗೊಳಿಸಿತು. ಲೋಕಪಾಲ ಮಸೂದೆಯ ಪ್ರಶ್ನೆಯನ್ನೆದುರಿಸಬೇಕಾಗಿ ಬಂದ ಸರಕಾರ ಇದಕ್ಕಾಗಿ ಸಮಯಾವಕಾಶ ಪಡೆಯಲು ಹೀಗೆ ಮಾಡಿತು. ಕೊನೆಗೂ ಅಧಿವೇಶನ ಆರಂಭವಾಗಿದೆ.

ಜನತೆಯ ನಿರೀಕ್ಷೆ ಅತ್ಯಂತ ನ್ಯಾಯಬದ್ಧ. ನಮ್ಮ ಸಂವಿಧಾನಿಕ ವ್ಯವಸ್ಥೆಯಲ್ಲಿ ಸಂಸತ್ತು ಶಾಸನಗಳ ಮೂಲಕ ಕಾನೂನುಗಳನ್ನು ರಚಿಸುವುದು ಮತ್ತು ಸಾರ್ವಜನಿಕ ಮಹತ್ವದ ಪ್ರಶ್ನೆಗಳತ್ತ ಸರಕಾರದ ಗಮನ ಸೆಳೆಯುವುದಲ್ಲದೆ, ಸರಕಾರ ಜವಾಬುದಾರನಾಗಿರುವಂತೆ ಮಾಡುವ ಮಹತ್ವದ ಕರ್ತವ್ಯವೂ ಅದಕ್ಕಿದೆ. ಕಾರ್ಯಾಂಗ ಶಾಸಕಾಂಗಕ್ಕೆ ಉತ್ತರದಾಯಿಯಾಗಿರಬೇಕು, ಶಾಸಕಾಂಗ ಜನತೆಗೆ ಉತ್ತರದಾಯಿಯಾಗಿರಬೇಕು. ನಮ್ಮ ಸಂವಿಧಾನಿಕ ವ್ಯವಸ್ಥೆಯಲ್ಲಿ ಜನತೆ ಸರ್ವೋಚ್ಚ ಸಾರ್ವಭೌಮತೆಯನ್ನು ಚಲಾಯಿಸುವ ವಿಧಾನವಿದು.


ಒಂದು ವರ್ಷದಲ್ಲಿ ಮಾಡಿದ್ದೇನು?

ಜನತೆಯ ತುರ್ತು ಕಾಳಜಿಗಳನ್ನು ಬಿಂಬಿಸುತ್ತಾ, ನಮ್ಮ ಸಂವಿಧಾನಕ್ಕೆ ಅನುಗುಣವಾಗಿ ಎಡಪಕ್ಷಗಳು ಈ ಅಧಿವೇಶನದಲ್ಲಿ ಬೆಲೆಯೇರಿಕೆಯ ಪ್ರಶ್ನೆಯನ್ನು ಎತ್ತಿಕೊಳ್ಳಲು ನಿರ್ಧರಿಸಿದವು. ಯುಪಿಎ-1 ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ಕನಿಷ್ಟ ಹತ್ತು ಬಾರಿ ಬೆಲೆಯೇರಿಕೆ ಕುರಿತಂತೆ ಚರ್ಚೆಗಳು ನಡೆದಿವೆ. ಆದರೆ ಇವುಗಳಿಂದ ಗಮನಾರ್ಹ ಫಲಿತಾಂಶವೇನೂ ಹೊರಬರಲಿಲ್ಲ, ಜನತೆಯ ಮೇಲಿನ ಹೊರೆ ಹೆಚ್ಚುತ್ತಲೇ ಬಂದಿದೆ. ಆದ್ದರಿಂದ ಎಡಪಕ್ಷಗಳು, ಕಳೆದ ಬಾರಿಯ ಮುಂಗಾರು ಅಧಿವೇಶನದಲ್ಲಿ ಮಾಡಿದಂತೆ ಮತದಾನಕ್ಕೆ ಅವಕಾಶವಿರುವ ನಿಯಮಗಳ ಅಡಿಯಲ್ಲಿ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿದವು. ಕಳೆದ ವರ್ಷ, ಈ ಒತ್ತಡದ ಫಲವಾಗಿ, ಎರಡೂ ಸದನಗಳಲ್ಲಿ ಸಭಾಧ್ಯಕ್ಷರು ಎಲ್ಲರೂ ಒಪ್ಪಿದ ಒಂದು ನಿರ್ಣಯವನ್ನು ಮಂಡಿಸುವ ವಿಧಾನಕ್ಕೆ ಸರಕಾರ ಅಂತಿಮವಾಗಿ ಒಪ್ಪಿಕೊಂಡಿತು. ಎರಡೂ ಸದನಗಳು ಒಮ್ಮತದಿಂದ ಅಂಗೀಕರಿಸಿದ ನಿರ್ಣಯ 'ಆಮ್ ಆದ್ಮಿ'ಯನ್ನು ಹಣದುಬ್ಬರದ ನಕಾರಾತ್ಮಕ ಪರಿಣಾಮದಿಂದ ರಕ್ಷಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕೆಂದು ಕರೆ ನೀಡಿತು. ನಂತರ, ಈ ಒಂದು ವರ್ಷದಲ್ಲಿ, ಯುಪಿಎ-2 ಸರಕಾರ ಈ ಬೆಲೆಯೇರಿಕೆಯನ್ನು ತಡೆಯಲು ಅಗತ್ಯವಾದ ನಿರ್ದಿಷ್ಟ ಕ್ರಮಗಳನ್ನಂತೂ ಕೈಗೊಂಡಿಲ್ಲ, ಬದಲಾಗಿ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಮತ್ತಷ್ಟು ಏರಿಸಿದೆ. ವ್ಯಂಗ್ಯವೆಂದರೆ, ಇದು ಆರ್ಥಿಕದಲ್ಲಿನ ಹಣದುಬ್ಬರಕ್ಕೆ ಮತ್ತಷ್ಟು ತುಪ್ಪ ಸುರಿದಿದೆ. ನೇರವಾಗಿಯೂ, ಪರೋಕ್ಷವಾಗಿಯೂ, ಸಾರಿಗೆ ಖರ್ಚುಗಳ ಏರಿಕೆಯ ಮೂಲಕ, ಈ ಬೆಲೆಯೇರಿಕೆಗಳು ಜನರ ಮೇಲೆ ಇನ್ನಷ್ಟು ಹೊರೆಗಳನ್ನು ಹೇರಿವೆ.

ಈ ಹಿನ್ನೆಲೆಯಲ್ಲಿಯೇ ಎಡಪಕ್ಷಗಳು ಸಂಸತ್ತಿನ ಎರಡೂ ಸದನಗಳಲ್ಲಿ ಮತದಾನದ ಅಗತ್ಯವಿರುವ ನಿಯಮಗಳ ಅಡಿಯಲ್ಲಿ ಚರ್ಚೆಗೆ ಒತ್ತಾಯಿಸಿದವು. ಮತದಾನವನ್ನು ಎದುರಿಸುವ ಭಯ ನಾವು, ಎಡಪಕ್ಷಗಳ ವತಿಯಿಂದ ಎಡೆಬಿಡದೆ ಎತ್ತಿಕೊಂಡು ಬಂದಿರುವ ಕೆಲವು ನಿರ್ದಿಷ್ಟ ಬೇಡಿಕೆಗಳನ್ನು ಈಡೇರಿಸಲು ಅಗತ್ಯವಾದ ಒತ್ತಡವನ್ನು ತರಬಹುದೆಂಬ ನಿರೀಕ್ಷೆಯಿತ್ತು. ಈ ಬಗ್ಗೆ ಮುಂದೆ ನೋಡೋಣ.

ಎಡಪಕ್ಷಗಳ ತಿದ್ದುಪಡಿ

ಆದರೆ, ಎಡಪಕ್ಷಗಳ ಈ ಸತತ ಒತ್ತಡವನ್ನು ಎದುರಿಸಬೇಕಾಗಿದ್ದ ಸರಕಾರ ಪ್ರಧಾನ ಪ್ರತಿಪಕ್ಷದೊಂದಿಗೆ, ಅಂದರೆ ಬಿಜೆಪಿಯೊಂದಿಗೆ ಒಂದು ಒಪ್ಪಂದಕ್ಕೆ ಬಂತು. ಅದೆಂದರೆ, ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಒಟ್ಟಿಗೇ ಮತ ನೀಡಬಹುದಾದ ಒಂದು ಸಾಮಾನ್ಯ ಕರಡನ್ನು



ಪ್ರತಿ ಪಕ್ಷ ಮಂಡಿಸುವುದು. ಲೋಕಸಭೆಯಲ್ಲಿ ಬಿಜೆಪಿ ಮಂಡಿಸಿದ ಈ ಕರಡು ನಿರ್ಣಯ ಕಳೆದ ವರ್ಷ ಎರಡೂ ಸದನಗಳು ಅಂಗೀಕರಿಸಿದ ನಿರ್ಣಯದ ಪುನರಾವರ್ತನೆಯಷ್ಟೇ. ಅಂದರೆ, ಇದರಿಂದ ಜನತೆಗೆ ಯಾವುದೇ ಪರಿಹಾರದ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ. ಆದ್ದರಿಂದ, ಎಡಪಕ್ಷಗಳು ಈ ಕರಡಿಗೆ ಒಂದು ತಿದ್ದುಪಡಿಯನ್ನು ಮಂಡಿಸಿವೆ-ಸರಕಾರ ಬೆಲೆಯೇರಿಕೆಯನ್ನು ತಡೆಯಲು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ, ಮಾತ್ರವಲ್ಲ, ಅದಕ್ಕೆ ಬದಲಾಗಿ, ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹೇರಿ, ಇನ್ನಷ್ಟು ಬೆಲೆಯೇರಿಕೆಗೆ ಕಾಣಿಕೆ ನೀಡಿದೆ ಎಂಬ ತಿದ್ದುಪಡಿ. ಮತದಾನವಿರುವ ನಿಯಮದಡಿ ಚರ್ಚೆ ನಡೆಯುತ್ತಿರುವುದರಿಂದ, ಎಡಪಕ್ಷಗಳು ತಮ್ಮ ತಿದ್ದುಪಡಿಯ ಮೇಲೆ ಮತಗಣನೆಗೆ ಒತ್ತಾಯಿಸಲು ನಿರ್ಧರಿಸಿವೆ.

ಯುಪಿಎ ಸರಕಾರ, ಬಿಜೆಪಿ ನೇತೃತ್ವದ ಎನ್‌ಡಿಎ ಪಕ್ಷಗಳೊಂದಿಗೆ ಒಂದು ಸರ್ವ ಸಾಮಾನ್ಯ ಕರಡಿನ ಮೇಲೆ ಒಪ್ಪಂದಕ್ಕೆ ಬಂದಿರುವುದು, ಆರ್ಥಿಕ ಧೋರಣೆಗಳ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಏನೂ ವ್ಯತ್ಯಾಸವಿಲ್ಲೆಂಬುದನ್ನು ಮತ್ತೊಮ್ಮೆ ನಿಸ್ಸಂದೇಹವಾಗಿ ತೋರಿಸಿಕೊಟ್ಟಿದೆ. ಬಿಜೆಪಿ ಕರ್ನಾಟಕ ರಾಜ್ಯದಲ್ಲಿ ಬಹುಮುಖೀ ಭ್ರಷ್ಟಾಚಾರದಲ್ಲಿ ಸಿಲುಕಿರುವುದು, ಈ ಧೋರಣೆಗಳು ಅನುಕೂಲ ಕಲ್ಪಿಸುವ ಭ್ರಷ್ಟಾಚಾರದ ವಿಷಯದಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂಬುದಕ್ಕೆ ಮತ್ತೊಂದು ಸಾಕ್ಷಿ.

ನಿರ್ದಿಷ್ಟ ಕ್ರಮಗಳಿಗೆ ಒತ್ತಡ

ಎಡಪಕ್ಷಗಳು, ತಮ್ಮ ತಿದ್ದುಪಡಿಯ ಮೇಲೆ ಮತಗಣನೆಗೆ ಒತ್ತಾಯಿಸುವ ಮೂಲಕ, ಸರಕಾರ ಪ್ರಸಕ್ತ ಬೆಲೆಯೇರಿಕೆಯನ್ನು ಹಿಮ್ಮೆಟ್ಟಿಸದಿದ್ದರೂ, ಅದನ್ನು ತಡೆಯಲಾದರೂ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಡ ಉಂಟಾಗಬಹುದು ಎಂಬ ನಿರೀಕ್ಷೆಯಿಟ್ಟುಕೊಂಡಿವೆ. ಇವುಗಳಲ್ಲಿ ಒಂದು, ಈ ಬೆಲೆಯೇರಿಕೆಗೆ ಅಗಾಧ ಪ್ರಮಾಣದಲ್ಲಿ ಕಾಣಿಕೆ ನೀಡುತ್ತಿರುವ ಜೂಜುಕೋರ ಸರಕು ವ್ಯಾಪಾರವನ್ನು ನಿಷೇಧಿಸುವುದು, ಅಥವ ಕನಿಷ್ಟ ಪಕ್ಷ, ಅದನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು. ಈ ಅಂಶವನ್ನು ಗಮನಿಸಿ: ವಾಯಿದಾ ಮಾರುಕಟ್ಟೆ ಆಯೋಗದ ಪ್ರಕಾರ ಜುಲೈ 1ರಿಂದ 15 ರವರೆಗಿನ ಹದಿನೈದು ದಿನಗಳ ಅವಧಿಯಲ್ಲಿ ಸರಕು ವಿನಿಮಯ ಕೇಂದ್ರಗಳಲ್ಲಿ ವ್ಯಾಪಾರದ ಮೊತ್ತ 7,05,007.23 ಕೋಟಿ ರೂ.ಗಳು.! ಹಿಂದಿನ ವರ್ಷ ಇದೇ ಅವಧಿಯಲ್ಲಿ ನಡೆದ ವ್ಯಾಪಾರದ ಮೊತ್ತ 4,15,215.65 ಕೋಟಿ ರೂ.ಗಳು. ಅಂದರೆ ಸುಮಾರು 60% ಹೆಚ್ಚಳ! ಅದೇ ರೀತಿ ಎಪ್ರಿಲ್ 1 ರಿಂದ ಜುಲೈ 15 ರ ವರೆಗಿನ, ಸಂಚಿತ ಮೊತ್ತ 45,34,237.88 ಕೋಟಿ ರೂ. 2010ರಲ್ಲಿ ಇದೇ ಅವಧಿಯ ಸಂಖ್ಯೆ 28,71,202.91 ಕೋಟಿ ರೂ.ಗಳು. ಅಂದರೆ, ಸುಮಾರು 64% ಹೆಚ್ಚಳ. ಜುಲೈ 1ರಿಂದ 15 ರ ವರೆಗಿನ 15 ದಿನಗಳಲ್ಲಿ ಕೃಷಿ ಸರಕುಗಳ ವ್ಯಾಪಾರದ ಒಟ್ಟು ಮೌಲ್ಯ ರೂ. 90,896.89 ಕೋಟಿ. 2010ರ ಈ ಅವಧಿಯಲ್ಲಿ ಅದು 49,127,86 ಕೋಟಿ ರೂ. ಇತ್ತು. ಅಂದರೆ 85%ದ ಅಪಾರ ಹೆಚ್ಚಳ.

ಜೂಜುಕೋರ ವ್ಯಾಪಾರದಲ್ಲಿ ಇಂತಹ ಬೃಹತ್ ಪ್ರಮಾಣದ ಬೆಳವಣಿಗೆ, ಬೆಲೆಗಳ ಏರಿಕೆಗೆ ಭಾರೀ ಕಾಣಿಕೆ ನೀಡುವುದು ಸಹಜವೇ ಆಗಿದೆ. ಏಕೆಂದರೆ, ಬೆಲೆಗಳು ಏರಿದಾಗ ಮಾತ್ರವೇ ಇಂತಹ ಜೂಜುಕೋರ ವ್ಯಾಪಾರದಿಂದ ಲಾಭಗಳಿಸಲು ಸಾಧ್ಯ. ವ್ಯಾಪಾರದ ಮೌಲ್ಯ ಬಹಳ ತ್ವರಿತ ಗತಿಯಲ್ಲಿ ಹೆಚ್ಚುತ್ತಿರುವಾಗ ಬೆಲೆಗಳು ಏರುತ್ತಲೇ ಇದ್ದು ಈ ಜೂಜುಕೋರರಿಗೆ ಸೂಪರ್ ಲಾಭಗಳನ್ನು ತರುತ್ತವೆ. ಈ ಸೂಪರ್ ಲಾಭಗಳು ಈ ಸಟ್ಟಾ ವ್ಯಾಪಾರಕ್ಕೆ ಇನ್ನಷ್ಟು ಹಣವನ್ನು ಆಕರ್ಷಿಸುತ್ತವೆ. ಸರಕಾರ ಈ ಬೆಲೆಯೇರಿಕೆಯನ್ನು ತಡೆಯಲಿಕ್ಕಾಗಿ ಈ ಜೂಜುಕೋರತನವನ್ನು ನಿಷೇಧಿಸಲು ಸತತವಾಗಿ ನಿರಾಕರಿಸುತ್ತಿದೆ. 'ಆಮ್ ಆದ್ಮಿ'ಗೆ ಅಂದರೆ ಜನಸಾಮಾನ್ಯರಿಗೆ ಪರಿಹಾರ ಒದಗಿಸುವುದಕ್ಕಿಂತ ಜೂಜುಕೋರತನಕ್ಕೆ ಹಾದಿ ಕಲ್ಪಿಸಿ ಕೊಡುವುದೇ ಈ ಸರಕಾರಕ್ಕೆ ಹೆಚ್ಚು ಮುಖ್ಯವಾಗಿದೆ.

ಕಾಲ್ಪನಿಕ ಲೆಕ್ಕಾಚಾರ ಬಿಡಿ

ಈ ಬೆಲೆಯೇರಿಕೆಗೆ ಕಾಣಿಕೆ ಅರ್ಪಿಸುವ ಇನ್ನೊಂದು ಮಹತ್ವದ ಅಂಶವೆಂದರೆ

ಪುಟ 12ಕ್ಕೆ


ಲೋಕಾಯುಕ್ತರ ವರದಿ ಅನಾವರಣ

ಬಿಜೆಪಿ ಎಂಬ ಭಾರಿ ಕಳ್ಳರ ಕೂಟದ ದಶಾವತಾರಗಳು

ಜಯ

ಈ 'ರಾಮ' ಪಕ್ಷದ ಲೂಟಿಕೋರ ವ್ಯವಹಾರಗಳನ್ನು ಲೋಕಾಯುಕ್ತರ ವರದಿಯು ಸವಿವರವಾಗಿ ಬಿಚ್ಚಿಡುವುದನ್ನು ಓದುತ್ತಾ ಹೋದಂತೆ ಅದು ಓದುಗರನ್ನು ಲೂಟಿಕೋರ ಮಂತ್ರಿ ಮಹೋದಯರ, ಭ್ರಷ್ಟ ಆಡಳಿತಾಂಗ ಮತ್ತು ಖಾಸಗಿ ಕಂಪನಿಗಳ ಮೈನವಿರೇಳಿಸುವ ಭ್ರಷ್ಟ ಲೋಕಕ್ಕೆ ಕರೆದೊಯ್ದಂತೆ ಭಾಸವಾಗದಿರದು. ಲೂಟಿಯಲ್ಲಿ ನವನವೀನ ಆವಿಷ್ಕಾರಗಳನ್ನೇ ಮಾಡಿರುವ ಈ ಅಗ್ರಗಣ್ಯರಿಗೆ ಪ್ರಶಸ್ತಿಯನ್ನೇನಾದರೂ ಕೊಡಬೇಕಾದರೆ ಯಡಿಯೂರಪ್ಪನವರು ಹೇಳಿದಂತೆ ಖಂಡಿತ ನೊಬೆಲ್ ಪ್ರಶಸ್ತಿಯನ್ನೇ ಕೊಡಬೇಕು. ಏಕೆಂದರೆ ಇಷ್ಟೆಲ್ಲ ಘೋರ ಅಕ್ರಮಗಳನ್ನು ನಡೆಸಿಯೂ ಕೂಡ ರಾಜ್ಯದ ಅಧಿಕಾರವನ್ನು ಸಹ ತಮ್ಮ ನಿಯಂತ್ರಣದಲ್ಲಿಯೇ ಇಟ್ಟುಕೊಳ್ಳುವಲ್ಲಿ ಮತ್ತು ರೆಡ್ಡಿ ಸಹೋದರರೊಂದಿಗೆ ಭ್ರಷ್ಟರ ಕೂಟಕ್ಕೆ ನಾಯಕತ್ವ ನೀಡುವಲ್ಲಿ ಯಡಿಯೂರಪ್ಪ ಯಶಸ್ವಿಯಾಗಿದ್ದಾರೆ.

2004-07 ರವರೆಗಿನ ಅವಧಿಯಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಬೆಲೆ ಏರಿಕೆಗೊಂಡಿದ್ದರಿಂದ ಬಳ್ಳಾರಿ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ದೊರೆಯುತ್ತಿದ್ದ ಉತ್ತಮ ಗುಣಮಟ್ಟದ ಕಬ್ಬಿಣದ ಅದಿರನ್ನು ಹೇರಳ ಪ್ರಮಾಣದಲ್ಲಿ ರಫ್ತು ಮಾಡಲಾಗಿದೆ. ಪ್ರತಿ ಟನ್ ಕಬ್ಬಿಣದ ಅದಿರಿನ ಉತ್ಪಾದನಾ ವೆಚ್ಚ ರೂ. 150 ಇದ್ದು ಸರ್ಕಾರಕ್ಕೆ ನೀಡಬೇಕಾದ ರಾಜಧನ ಟನ್‌ವೊಂದಕ್ಕೆ ಕೇವಲ ರೂ. 16.25 ಇತ್ತು. ಹೆಚ್ಚಿನ ಪ್ರಮಾಣದ ಲಾಭ ಸಿಗುತ್ತಿದ್ದರಿಂದ ಗಂಭೀರ ಸ್ವರೂಪದಲ್ಲಿ ಆಡಳಿತ ಯಂತ್ರವನ್ನೇ ತಿರುಚಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ. ಇವುಗಳ ಆಧಾರದ ಮೇಲೆ ತನಿಖೆ ಆರಂಭಿಸಿದ ಲೋಕಾಯುಕ್ತರು ಅತಿ ಮುಖ್ಯ ಅಂಶಗಳನ್ನು ವರದಿಯಲ್ಲಿ ದಾಖಲಿಸಿದ್ದರೂ ಸಂಪೂರ್ಣ ಲೂಟಿ, ಅಕ್ರಮಗಳನ್ನು ಅಂದಾಜು ಮಾಡಲು ಇನ್ನಷ್ಟು ತನಿಖೆ ನಡೆಸಬೇಕು ಎಂದು ಹೇಳಿದ್ದಾರೆ.


ಕೃಪೆ : ಪ್ರಜಾವಾಣಿ

ಸರ್ಕಾರಿ ಕಂಪನಿಯಿಂದಲೇ ಲೂಟಿ :

2003-04 ಮತ್ತು 2004-05 ರ ಅವಧಿಯಲ್ಲಿ ಸರ್ಕಾರಿ ಸ್ವಾಮ್ಯದ ಮೈಸೂರು ಮಿನರಲ್ಸ್ ಲಿ. ಕಂಪನಿಯು ಇನ್ನಿತರ ಖಾಸಗಿ ಕಂಪನಿಗಳೊಂದಿಗೆ ಮಾಡಿಕೊಂಡ ಏಕಮುಖಿ ಒಪ್ಪಂದಗಳು, ಅತಿ ಕಡಿಮೆ ಬೆಲೆ ಮತ್ತು ಕಡಿಮೆ ಲಾಭಾಂಶವನ್ನು ನಿಗಧಿಪಡಿಸಲಾಯಿತು. ಇದರಿಂದಾಗಿ ಖಾಸಗಿ ಕಂಪನಿಗಳು ದೊಡ್ಡ ಮಟ್ಟದ ಲಾಭ ಗಳಿಸುತ್ತಿದ್ದರೆ, ಸರ್ಕಾರಿ ಸ್ವಾಮ್ಯದ ಈ ಕಂಪನಿಯು ನೂರಾರು ಕೋಟಿ ನಷ್ಟ ಅನುಭವಿಸುತ್ತಿತ್ತು. ಅಲ್ಲದೆ ಕೆಲವೇ ಕೆಲವರಿಗೆ ಮಾತ್ರ ಮನಸೋಇಚ್ಛೆ ಪ್ರಮಾಣದ ಕಬ್ಬಿಣದ ಅದಿರು ಪುಡಿ ಮತ್ತು ಮಣ್ಣು/ಕಡಿಮೆ ಗ್ರೇಡಿನ ಅದಿರನ್ನು, ಗ್ರಾನೈಟ್, ಮ್ಯಾಂಗನೀಸ್ ಮತ್ತು ಇತರೆ ಖನಿಜಗಳನ್ನು ಅತಿ ಕಡಿಮೆ ಬೆಲೆಗೆ ಈ ಕಂಪನಿ ಮೂಲಕ ಹಂಚಿಕೆ ಮಾಡಲಾಯಿತು.

ವಿವಿಧ ಇಲಾಖೆಗಳಿಗೆ ಸಂದಾಯವಾಗುತ್ತಿದ್ದ ಲಂಚವೂ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಬಂದಿದೆ. 2004-05ರಲ್ಲಿ ರೂ. 22,62,924 ಸಂದಾಯವಾಗಿದ್ದರೆ, 2005-06ರಲ್ಲಿ ರೂ. 48,36,920, 2006-07ರಲ್ಲಿ ರೂ. 66,31,144, ಮತ್ತು 2007-08ರಲ್ಲಿ ರೂ. 1,28,37,242 ಲಂಚ ಸಂದಾಯವಾಗಿದೆ.

ಹಲವು ಕಂಪನಿಗಳು ಅಂತರಾಷ್ಟ್ರೀಯ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಬೆಲೆಗೆ ಅದಿರನ್ನು ಮಾರಾಟ ಮಾಡಿದ್ದು, ಅದನ್ನು ಕೊಂಡುಕೊಂಡಿರುವ ಕಂಪನಿಗಳ ಲಾಭದಲ್ಲಿಯೂ ಇವರಿಗೆ ಪಾಲು ಸಿಕ್ಕಿದೆ. ಅಂದರೆ, ಅದಿರಿನ ಮೇಲೆ ಬೀಳುವ ಕಸ್ಟಮ್ಸ್ ಸುಂಕವನ್ನು ಕಡಿಮೆ ಪಾವತಿಸುವ ಸಲುವಾಗಿ ಈ ರೀತಿ ಸರ್ಕಾರಕ್ಕೆ ವಂಚಿಸಲಾಗಿದೆ. 2006-10 ರವರೆಗೆ ಇಂಥಹ ವಹಿವಾಟಿನಿಂದ ರೂ. 2222 ಕೋಟಿ ಅಕ್ರಮ ನಡೆದಿದೆ.

ಶ್ರೀ ಭಕ್ತ ಮಾರ್ಕಂಡೇಶ್ವರ ಮಿನರಲ್ಸ್ ಹೊಸಪೇಟೆ ಕಂಪನಿಯು ಹಲವು ಬೇನಾಮಿ ಖಾತೆಗಳನ್ನು ಹೊಂದಿದ್ದು, ಕೋಟ್ಯಾಂತರ ಹಣ

ಪುಟ 10ಕ್ಕೆ

ಅಕ್ರಮ ರಫ್ತು ಮಾಡಿರುವ ಅದಿರು

ಒಟ್ಟು ಅಕ್ರಮ ಅದಿರು ರಫ್ತಾಗಿರುವ ಪ್ರಮಾಣ 2.98 ಕೋಟಿ ಮೆಟ್ರಿಕ್ ಟನ್. ಸಿಬಿಐ ತನಿಖೆ ನಡೆಸುತ್ತಿರುವುದರಿಂದ ಇದರಲ್ಲಿ ಒಬಳಾಪುರಂ ಮೈನಿಂಗ್ ಕಂಪನಿ ಮತ್ತು ವೈ ಮಹಾಬಲೇಶ್ವರ ಕಂಪನಿಗಳು ಅಕ್ರಮವಾಗಿ ಸಾಗಿಸಿರುವ ಅದಿರಿನ ಪ್ರಮಾಣವನ್ನು ಸೇರಿಸಿಲ್ಲ.

ಅಕ್ರಮವಾಗಿ ರಫ್ತು ಮಾಡಿರುವ ಅದಿರಿನ ಪ್ರಮಾಣ

ವರ್ಷ	2006-07	2007-08	2008-09	2009-10	2010 (ಏಪ್ರಿಲ್-ಜೂನ್)	ಒಟ್ಟು
ಅಕ್ರಮವಾಗಿರಫ್ತು ಮಾಡಿರುವ ಅದಿರು (ಮೆ. ಟನ್)	31,84,152	37,14,720	53,55,660	1,27,99,396	48,06,719	2,98,60,647

ಇದನ್ನು 3 ವಿಧಗಳಲ್ಲಿ ರಫ್ತು ಮಾಡಲಾಗಿದೆ: 1) ಇದನ್ನು ಪರ್ಮಿಟ್‌ಗಿಂತ ಹೆಚ್ಚಿನ ಲೋಡನ್ನು ಲಾರಿಯಲ್ಲಿ ತುಂಬಿ ಸಾಗಿಸಲಾಗಿದೆ, 2) ಇದನ್ನು ಪರ್ಮಿಟ್ ಇಲ್ಲದೆಯೂ ಸಾಗಿಸಲಾಗಿದೆ. 3) ಪೋರ್ಜರಿ ಪರ್ಮಿಟ್ ಬಳಸಿ ಸಾಗಿಸಲಾಗಿದೆ. ಹಲವೆಡೆ ಆಂಧ್ರದ ಪರ್ಮಿಟ್‌ಗಳನ್ನು ಬಳಸಿಕೊಂಡು ಕರ್ನಾಟಕದ ಅದಿರನ್ನು ಸಾಗಿಸಲಾಗಿದೆ.

2006-07 ರಿಂದ 20010-11 ರವರೆಗೆ ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ರಫ್ತಾಗಿರುವ ಅದಿರಿನ ಪ್ರಮಾಣ 77,38,169 ಮೆಟ್ರಿಕ್ ಟನ್. ಅರಣ್ಯ ಇಲಾಖೆಯು ವಶಪಡಿಸಿಕೊಂಡಿದ್ದ ಅದಿರನ್ನು ಮತ್ತೆ ಕದ್ದು ರಫ್ತು ಮಾಡಿರುವ ಪ್ರಮಾಣ 6,10,810 ಮೆಟ್ರಿಕ್ ಟನ್.

ರೆಡ್ಡಿ ಸಾಮ್ರಾಜ್ಯದಲ್ಲಿ ಮಂತ್ರಿ-ಮಾಫಿಯಾ-ಆಡಳಿತಾಂಗದ ಶಾಮೀಲು ಮತ್ತು ಲೂಟಿ

ರೆಡ್ಡಿ ಬ್ರದರ್ಸ್ ಒಡೆತನದ ಒಬಳಾಪುರಂ ಮೈನಿಂಗ್ ಕಂಪನಿಯು ಕರ್ನಾಟಕದಲ್ಲಿ ಗಣಿಗಾರಿಕೆಯನ್ನೇ ನಡೆಸುತ್ತಿಲ್ಲ, ಹಾಗಾಗಿ ಅದಿರನ್ನು ರಫ್ತು ಮಾಡಿಯೇ ಇಲ್ಲವೆಂದು, ಆಂಧ್ರದಲ್ಲಿ ಮಾತ್ರವೇ ತಮ್ಮ ಗಣಿ ವ್ಯವಹಾರ ನಡೆಯುತ್ತಿರುವುದು ಎಂದು ರೆಡ್ಡಿಗಳು ತಿಪ್ಪೆ ಶಾರಿಸಲು ಯತ್ನಿಸಿದ್ದರು. ಆದರೆ, ವಿವಿಧ ಬಂದರುಗಳಲ್ಲಿ ಈ ಕಂಪನಿಯು ರಫ್ತು ಮಾಡಿರುವ ಅದಿರಿನ ದಾಖಲಾತಿಗಳು ದೊರೆತಿದ್ದು, ಅದರಂತೆ 2006-07 ಮತ್ತು 2010-11 ರ ಅವಧಿಯಲ್ಲಿ 71,61,566 ಮೆಟ್ರಿಕ್ ಟನ್‌ನಷ್ಟು ಕರ್ನಾಟಕ ಮೂಲದ ಅದಿರನ್ನು ಈ ಕಂಪನಿಯು ರಫ್ತು ಮಾಡಿದೆ. 2,17,660 ಮೆಟ್ರಿಕ್ ಟನ್ ಮಾತ್ರವೇ ಆಂಧ್ರ ಮೂಲದ ಅದಿರನ್ನು ಈ ಕಂಪನಿ ರಫ್ತು ಮಾಡಿದೆ. ಈ ಕುರಿತು ಸಿಬಿಐ ಇನ್ನೂ ತನಿಖೆ ನಡೆಸುತ್ತಿದೆ. ಕರ್ನಾಟಕ ಮೂಲದ ಅದಿರನ್ನು ಬೇಲೆಕೇರಿ, ಚೆನ್ನೈ, ಎನ್ನೋರ್, ಕಾಕಿನಾಡ, ಕಾರವಾರ, ಕೃಷ್ಣಪಟ್ನಂ, ಮುರ್ಮಗೋವ, ಮಂಗಳೂರು, ಪಣಜಿ, ವಿಶಾಖಪಟ್ಣಂ ಬಂದರುಗಳ ಮೂಲಕ ರಫ್ತು ಮಾಡಲಾಗಿದೆ.

ಅಕ್ರಮ ಗಣಿಗಾರಿಕೆ ಮತ್ತು ಸಾಗಣೆಯಲ್ಲಿ ತೊಡಗಿದ್ದ ಎರಡು ಕಂಪನಿಗಳ (ಅದಾಣಿ ಎಂಟರ್ ಪ್ರೈಸಸ್ ಮತ್ತು ಮಲ್ಲಿಕಾರ್ಜುನ್ ಶಿಪ್ಪಿಂಗ್ ಕಾರ್ಪೊರೇಷನ್ ಲಿ.) ಧಾಖಲಾತಿಗಳು ಮತ್ತು ಕಂಪ್ಯೂಟರ್‌ಗಳನ್ನು ವಶಪಡಿಸಿಕೊಂಡಿರುವ ಲೋಕಾಯುಕ್ತರು, ಅದರಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ದೊರೆಯುತ್ತಿದ್ದ ಲಂಚಗಳ ಪಟ್ಟಿಯೂ ವ್ಯವಸ್ಥಿತ ರೂಪದಲ್ಲಿ ಸಿಕ್ಕಿದೆ.

ಅಧಿಕಾರಿ	ಅದಿರು ಭರ್ತಿಯಾದ ಪ್ರತಿ ಹಡಗಿಗೆ ಸಿಗುತ್ತಿದ್ದ ಲಂಚ(ರೂ.)
ಬಂದರು ನಿರ್ದೇಶಕ	50,000
ಬಂದರು ಅಧಿಕಾರಿ	25,000
ಉಪ ಬಂದರು ಸಂರಕ್ಷಣಾಧಿಕಾರಿ	5000
ಬಂದರು ಸಿಬ್ಬಂದಿ	5,500
ಪೊಲೀಸ್ ಇಲಾಖೆ	
ಎಸ್. ಪಿ	1.0 ಲಕ್ಷ, ಪ್ರತಿ ಎ. ತಿಂಗಳಿಗೆ
ಹೆಚ್ಚುವರಿ ಎಸ್. ಪಿ	25,000 ಪ್ರ. ತಿಂ.
ಡಿವೈಎಸ್‌ಪಿ	10,000 ಪ್ರ. ತಿಂ.
ಸರ್ಕಲ್ ಇನ್ಸ್‌ಪೆಕ್ಟರ್	14,000 ಪ್ರ.ತಿಂ.
ಔಟ್ ಪೋಸ್ಟ್	2000 ಪ್ರ. ತಿಂ.

ಭೂವಿಜ್ಞಾನ ಮತ್ತು ಗಣಿ ಇಲಾಖೆಯ ಅಧಿಕಾರಿಗಳಿಗೆ ನಿರಂತರ ಅವಧಿಯಲ್ಲಿ ದೊಡ್ಡ ಮೊತ್ತ ಎಂಎಲ್‌ಎ/ಎಂಪಿ ಗಳಿಗೆ ಆಗಾಗ್ಗೆ ಅತಿ ದೊಡ್ಡ ಮೊತ್ತ ◎



ಜನಪರ ಆಡಳಿತ ಕೊಡುತ್ತೇನೆಂದು ಸದಾನಂದಗೌಡ ಹೇಳುತ್ತಾರೆ. ಯಾವಜನಪರ? ಯಡ್ಯೂರಪ್ಪ 'ಜನಪರ'ವೋ, ಅನಂತಕುಮಾರ್ 'ಜನಪರವೋ'? ಈ ಭಿನ್ನಮತ, ತಿಕ್ಕಾಟಗಳಲ್ಲಿ ಜನಹಿತ ಎಂಬುದು ಎಳ್ಳುಕಾಳಷ್ಟಾದರೂ ಇದೆಯೇ?

ರಾಜ್ಯದಲ್ಲಿ ಆಡಳಿತ ಪಕ್ಷದೊಳಗೊಂದು ವಿರೋಧಪಕ್ಷ!

ನಿತ್ಯಾನಂದಸ್ವಾಮಿ

ಸ್ವಜನ ಪಕ್ಷಪಾತ, ಭೂಹಗರಣ, ಅಕ್ರಮ ಗಣಿಗಾರಿಕೆಗೆ ಬೆಂಬಲ ಮೊದಲಾದ ಆಪಾದನೆಗಳಿಗೆ ಒಳಗಾಗಿರುವ ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆಯನ್ನೇನೋ ನೀಡಿದ್ದಾರೆ. ಆದರೆ ಸದಾನಂದಗೌಡರ ಹೆಗಲ ಮೇಲೇರಿ ತಮ್ಮ ಆಳ್ವಿಕೆಯನ್ನು ಮುಂದುವರೆಸುವ ಕುತಂತ್ರ ಹೂಡಿದ್ದಾರೆ.

ಇತ್ತ ಮುಖ್ಯಮಂತ್ರಿ ಪದವಿಯ ಆಕಾಂಕ್ಷಿ ಜಗದೀಶ್ ಶೆಟ್ಟರ್ ಮತ್ತು ಅವರ ಬೆಂಬಲಿಗ ಶಾಸಕರು ಸದಾನಂದ ಗೌಡರ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನೇ ಬಹಿಷ್ಕರಿಸಿ ಪಕ್ಷದಲ್ಲಿ ತಲೆದೋರಿರುವ ಗಂಭೀರ ಸ್ವರೂಪದ ಭಿನ್ನಮತವನ್ನು ಬಹಿರಂಗಗೊಳಿಸಿದ್ದಾರೆ. ಶೆಟ್ಟರ್ ಬಣದೊಂದಿಗೆ ಗುರುತಿಸಿಕೊಂಡಿರುವ ಯಡಿಯೂರಪ್ಪನವರ ಬಹುದಿನಗಳ ಎದುರಾಳಿ ಅನಂತಕುಮಾರ್, ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಪದ ನಿಮಿತ್ತ ಹಾಜರಾಗಿದ್ದರೇ ಹೊರತು ಮನಃಪೂರ್ವಕವಾಗಿ ಅಲ್ಲ. ಮುಖ್ಯಮಂತ್ರಿಗಳ



ಜೊತೆಯಲ್ಲಿ ಮಂತ್ರಿಗಳಲ್ಲಿ ಕೆಲವರು ಪ್ರಮಾಣ ವಚನ ಸ್ವೀಕರಿಸುವ ಸಂಪ್ರದಾಯವನ್ನೂ ಪಾಲಿಸಲು ಸಾಧ್ಯವಾಗಿಲ್ಲ. ಇದು ಎರಡೂ ಬಣಗಳ ನಡುವಿನ ಆಳ-ಅಗಲದ ದ್ಯೋತಕವಾಗಿದೆ.

ಉಪಮುಖ್ಯಮಂತ್ರಿ ಸ್ಥಾನ, ಪ್ರಮುಖ ಖಾತೆಗಳ ಹಂಚಿಕೆ ಮೊದಲಾದ ವಿಷಯಗಳಲ್ಲಿ ಎರಡೂ ಬಣಗಳ ನಡುವಿನ ಭಿನ್ನಾಭಿಪ್ರಾಯಗಳು ನಿವಾರಣೆ ಆಗುವರೆಗೂ ಈ ಬಿಕ್ಕಟ್ಟು ನಿವಾರಣೆಯಾಗುವ ಲಕ್ಷಣಗಳಿಲ್ಲ. ತಾತ್ಕಾಲಿಕವಾಗಿ ಈ ವಿದ್ಯಮಾನ ಇತ್ಯರ್ಥ ಆದರೂ ಮುಂದೊಂದುದಿನ ಇದು ಮತ್ತೆ ಭುಗಿಲೇಳುವ ಎಲ್ಲಾ ಸಾಧ್ಯತೆಗಳಿವೆ. ಈ ರಾಜಕೀಯ ಅನಿಶ್ಚಿತತೆ ರಾಜ್ಯದ ಆಡಳಿತದ ಮೇಲೆ ದುಷ್ಪರಿಣಾಮ ಬೀರದೆ ಇರಲಾರದು.

ಬಿ.ಜೆ.ಪಿ. ತಾನು ಕಾಂಗ್ರೆಸ್‌ನಂತೆ ಅಲ್ಲ ಎಂದು ಸಾಬೀತುಪಡಿಸಲು ಹೆಣಗುತ್ತಾ ಬಂದಿರುವ ಪಕ್ಷವಾಗಿದೆ. ಮುಖ್ಯಮಂತ್ರಿ ಸದಾನಂದಗೌಡರು ಅದನ್ನು ಮತ್ತೆ ಪುನರುಚ್ಚರಿಸಿದ್ದಾರೆ. ಆದರೆ ವಸ್ತುಸ್ಥಿತಿ ಭಿನ್ನವಾಗಿದೆ. ಅಧಿಕಾರಕ್ಕಾಗಿ ನಡೆಯುವ ಕಿತ್ತಾಟದ ವಿಷಯದಲ್ಲಿ ಬಿಜೆಪಿಗೂ ಕಾಂಗ್ರೆಸ್ಸಿಗೂ ಯಾವುದೇ ವ್ಯತ್ಯಾಸ ಇಲ್ಲ ಎಂಬುದು ಸ್ಪಷ್ಟವಾಗಿದೆ. ಒಂದೇ ಪಕ್ಷದ ಎರಡು ಗುಂಪುಗಳು ಪರಸ್ಪರ ಬೆದರಿಕೆ ಹಾಕುವುದು, ಎರಡು ಪ್ರತ್ಯೇಕ ಪಕ್ಷಗಳೆಂಬಂತೆ ವರ್ತಿಸುತ್ತಿರುವುದು ಬಿಜೆಪಿಯ ಒಳಹೂರಣವನ್ನು ಬಯಲಿಗೆಳೆದಿದೆ. ಯಡಿಯೂರಪ್ಪ ಬಣ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಪಕ್ಷದೊಳಗೇ "ಆಪರೇಷನ್ ಕಮಲ" ನಡೆಸಿದೆ ಎಂತಲೂ ಒಬ್ಬೊಬ್ಬ ಶಾಸಕನಿಗೆ ಯಡಿಯೂರಪ್ಪ ತಲಾ 2 ಕೋಟಿ ರೂ.ಗಳನ್ನು ನೀಡಿದ್ದಾರೆ ಎಂಬ ಮಾತುಗಳು ರಾಜಧಾನಿಯಲ್ಲಿ ಕೇಳಿ ಬರುತ್ತಿವೆ. ತನ್ನ ಬೆಂಬಲಿಗ ಶಾಸಕರನ್ನು ವಿರೋಧಿ ಬಣ ತನ್ನತ್ತ ಸೆಳೆಯುವುದನ್ನು ತಡೆಯಲು ಅವರೆಲ್ಲರನ್ನು ಬೆಂಗಳೂರಿನ ದುಬಾರಿ ಪಂಚತಾರಾ ಹೋಟೇಲ್ ಒಂದರಲ್ಲಿ 'ಬಂಧಿಸಿ' ಇಡಲು ಯಡಿಯೂರಪ್ಪ ಹಲವು ಕೋಟಿಗಳನ್ನು ನೀರಿನಂತೆ ಹರಿಸಿದ್ದಾರೆ ಎಂಬುದರ ಲೆಕ್ಕಾಚಾರವೂ ಇಲ್ಲಿ ನಡೆಯುತ್ತಿದೆ. ಒಟ್ಟಾರೆಯಾಗಿ, ರಾಜ್ಯ ಬಿಜೆಪಿ ಪಕ್ಷದೊಳಗೆ ಆಳುವ ಪಕ್ಷ ಮತ್ತು ವಿರೋಧಪಕ್ಷ ಒಟ್ಟಾಗಿ ಇರುವುದು ಸ್ವಾರಸ್ಯಕರ ಬೆಳವಣಿಗೆಯಾಗಿದೆ.

ಆದರೆ ರಾಜ್ಯದ ಮೇಲೆ ಇದರ ನಕಾರಾತ್ಮಕ ಪರಿಣಾಮ ಆಗದೆ ಇರಲಾರದು. ಕಳೆದ 3 ವರ್ಷಗಳ ಅವಧಿಯಲ್ಲಿ ಯಡಿಯೂರಪ್ಪ ಅಕ್ರಮ ಸಂಪಾದನೆಗೇ ಗಮನಕೊಟ್ಟು ಜನರ ಪ್ರಶ್ನೆಗಳನ್ನು ಕಡೆಗಣಿಸುತ್ತಾ ಬಂದಿದ್ದರು. ಬಾಯಿ ತೆರೆದಾಗೊಮ್ಮೆ ಅಭಿವೃದ್ಧಿಯ ಮಂತ್ರವನ್ನು ಕೃತಕವಾಗಿ ಪಠಿಸುತ್ತಾ ತಮ್ಮ ಹಾಗೂ ತಮ್ಮ ಕುಟುಂಬದವರ ಅಭಿವೃದ್ಧಿ ಸಾಧಿಸುವುದರಲ್ಲೇ ಕಾಲ ಕಳೆದಿದ್ದಾರೆ. ಈಗ ಉಳಿದ ಎರಡು ವರ್ಷಗಳ ಅವಧಿಯಲ್ಲಿ ಪಕ್ಷದೊಳಗಿನ ಭಿನ್ನಮತವನ್ನು ಶಮನ ಮಾಡುವುದರಲ್ಲಿ ಹಾಗೂ ತಮ್ಮ ವಿರುದ್ಧ ಆರೋಪಗಳ ಕುರಿತಾದ ವರದಿಯನ್ನು ಮೂಲೆ ಗುಂಪು ಮಾಡುವ ದುಸ್ಸಾಹಸದಲ್ಲಿ ಸೂಪರ್ ಸಿ.ಎಂ.ಯಡಿಯೂರಪ್ಪ ಹಿಡಿತದ ಸರ್ಕಾರ ಮುಳುಗಿ ಹೋಗಲಿದೆ.

ರಾಜ್ಯದ ಜನತೆಗೆ ಈಗಲಾದರೂ ತಪ್ಪಿನ ಅರಿವು ಉಂಟಾದರೆ, ಒಳ್ಳೆಯದಾದೀತು. ಬಿಜೆಪಿಯವರ ಬಾಯಿಯಿಂದ ಉದುರುವ ತತ್ವ ಸಿದ್ಧಾಂತಗಳ ಮಾತುಗಳಿಗೂ ಅವರ ನಡವಳಿಕೆಗೂ ಎಳ್ಳಷ್ಟು ಹೊಂದಾಣಿಕೆ ಇಲ್ಲ. ಮಂತ್ರಿ ಪದವಿಗಾಗಿ ಏಕೆ ಇವರಲ್ಲಿ ಇಷ್ಟೊಂದು ಕಚ್ಚಾಟ? ದೇಶ ಸೇವೆಗಾಗಿಯೋ? ಲೂಟಿಯ ಆಸೆಗಾಗಿ ಯಡಿಯೂರಪ್ಪ ಬೆಂಬಲದಿಂದ ಆಯ್ಕೆಯಾಗಿರುವ ಮುಖ್ಯಮಂತ್ರಿ ಸದಾನಂದ ಗೌಡರು ಭ್ರಷ್ಟಾಚಾರದಲ್ಲಿ ಮುಳುಗಿದ್ದ ಯಡಿಯೂರಪ್ಪ ಸರ್ಕಾರದ ಉತ್ತರಾಧಿಕಾರಿಯಾಗಿರುತ್ತಾರೆ. ಅವರ ಜೊತೆಯಲ್ಲಿ ಇದ್ದರೆ ಲೂಟಿಯಲ್ಲಿ ಹೆಚ್ಚು ಪಾಲು ಗಿಟ್ಟಿಸಿಕೊಳ್ಳಬಹುದೆಂದು ಒಂದು ಗುಂಪಿನ ತರ್ಕ. ಯಡಿಯೂರಪ್ಪ ಈಗಾಗಲೇ ಸಾಕಷ್ಟು ತಿಂದು ಕೊಬ್ಬಿದ್ದಾರೆ. ಅವರನ್ನು ಹೊರಗಿಟ್ಟು ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾದರೆ ತಾವು ಯಡಿಯೂರಪ್ಪನವರಂತೆ ಹೆಚ್ಚು ಸಂಪಾದನೆ ಮಾಡಬಹುದು ಎಂಬುದು ಇನ್ನೊಂದು ಬಣದ ಆಲೋಚನೆ.

ಈ ಎರಡು ಬಣಗಳ ನಡುವಿನ ತಿಕ್ಕಾಟದಲ್ಲಿ ರಾಜ್ಯದ ಹಿತ ಬಲಿಯಾಗಲಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಲೂಟಿ ಮಾಡಿದ ಕಳ್ಳರು ಜನರ ಕಣ್ಣಿಗೆ ಮೆಣಸಿನ ಪುಡಿ ಎರಚಿ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಜನ ಎಚ್ಚೆತ್ತುಕೊಳ್ಳಬೇಕು. ಹೊಸ ಚುನಾವಣೆಗೆ ಒತ್ತಾಯಿಸಬೇಕು. ◎

ಹೊಸ ಮುಖ್ಯಮಂತ್ರಿ ಪರಿಹಾರವಲ್ಲ

ಸಿಪಿಐ(ಎಂ) ರಾಜ್ಯ ಸಮಿತಿ ಜುಲೈ 4 ರಂದು ನೀಡಿದ ಹೇಳಿಕೆ

ಯಡಿಯೂರಪ್ಪನವರು ರಾಜಿನಾಮೆ ಕೊಟ್ಟು ಅವರ ಆಯ್ಕೆಯ ಸದಾನಂದಗೌಡರು ರಾಜ್ಯದ ಮುಖ್ಯಮಂತ್ರಿ ಆದ ಮಾತ್ರಕ್ಕೆ ಲೋಕಾಯುಕ್ತರು ಎತ್ತಿರುವ ಪ್ರಶ್ನೆಗಳಿಗೆ ಪರಿಹಾರ ದೊರಕದು ಎಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರ ಆತಂಕ ವ್ಯಕ್ತಪಡಿಸಿದೆ.

ಲೋಕಾಯುಕ್ತರು ತಮ್ಮ ವರದಿಯಲ್ಲಿ ಯಡಿಯೂರಪ್ಪನವರನ್ನು ಮಾತ್ರವಲ್ಲ - ಅವರ ಸಚಿವ ಸಂಪುಟದ ನಾಲ್ಕು ಜನ ಮಂತ್ರಿಗಳನ್ನು, ಕೆಲವು ಶಾಸಕರನ್ನು, ನೂರಾರು ಅಧಿಕಾರಿಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ. ಅಕ್ರಮ ಗಣಿಗಾರಿಕೆಯಲ್ಲಿ ಇಡೀ ಬಿಜೆಪಿ ಸರ್ಕಾರವೇ ಪಾಲ್ಗೊಂಡಿದೆ ಎಂಬುದು ಬಯಲಾಗಿದೆ. ತಪ್ಪಿತಸ್ಥರು ರಾಜಿನಾಮೆ ಕೊಟ್ಟರೆ ಸಾಲದು. ಅವರಿಗೆ ಕಾನೂನು ಪ್ರಕಾರ ಶಿಕ್ಷೆಯಾಗಬೇಕು. ರಾಜ್ಯದ ಬೊಕ್ಕಸಕ್ಕೆ ಅವರಿಂದ ಆಗಿರುವ ಹಾನಿಯನ್ನು ಅವರಿಂದಲೇ ಭರಿಸಬೇಕು. ಈ ಹೊಣೆಗಾರಿಕೆಯನ್ನು ನಿಭಾಯಿಸಲು ಈ ಸರ್ಕಾರಕ್ಕೆ ಸಾಧ್ಯವಿಲ್ಲ. ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ. ಅಕ್ರಮಗಳನ್ನು ಮುಚ್ಚಿಹಾಕುವ ಹುನ್ನಾರಗಳನ್ನು ತಳ್ಳಿಹಾಕುವಂತಿಲ್ಲ. ಆದ್ದರಿಂದ, ರಾಜ್ಯ ಬಿಜೆಪಿ ಸರ್ಕಾರ ಕೂಡಲೇ ರಾಜಿನಾಮೆ ಕೊಟ್ಟು ಹೊಸ ಜನಾದೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ಸಿ.ಪಿ.ಐ(ಎಂ) ಒತ್ತಾಯಿಸುತ್ತದೆ.

ಬಿಜೆಪಿ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ಅಷ್ಟೇನೂ ಐಕ್ಯತೆಯಿಂದ ನಡೆದಿಲ್ಲ ಎಂಬುದು ಗುಟ್ಟಿನ ವಿಷಯವಾಗಿ ಉಳಿದಿಲ್ಲ. ಬಿಜೆಪಿ ಶಾಸಕಾಂಗ ಪಕ್ಷ ಪಕ್ಕಾ ಎರಡು ಹೋಳಾಗಿ ಒಡೆದು ಹೋಗಿದ್ದು ಅದರ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ರಾಜಕೀಯ ಅಸ್ಥಿರತೆ ರಾಜ್ಯವನ್ನು ಕಾಡದೆ ಇರಲಾರದು. ಆದ್ದರಿಂದ ಬಿಜೆಪಿ ಹೈಕಮಾಂಡ್ ರಾಜ್ಯ ಸರ್ಕಾರ ರಾಜಿನಾಮೆ ಕೊಟ್ಟು ಚುನಾವಣೆ ಘೋಷಿಸುವಂತೆ ಸೂಚಿಸುವುದು ಅತ್ಯಂತ ಸೂಕ್ತವಾದ ಕ್ರಮವಾಗುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ.

......ಭಾರಿ ಕಳ್ಳರ ಕೂಟದ ದಶಾವತಾರಗಳು

ಪುಟ 8 ರಿಂದ

ವರ್ಗಾವಣೆ ಮಾಡಿದೆ. ಈ ಕಂಪನಿಯ ನೊಂದಣಿಯೇ ಆಗಿಲ್ಲ.

ಅಸೋಸಿಯೇಟೆಡ್ ಮೈನಿಂಗ್ ಕಂಪನಿಗೆ ಪಾಲುದಾರರಾಗಿ 2009ರಲ್ಲಿ ಪ್ರವೇಶಿಸಿದ ಜನಾರ್ಧನ ರೆಡ್ಡಿ, ಅಂತಿಮವಾಗಿ ಬೇರೆ ಪಾಲುದಾರರ ಪಾಲನ್ನೂ ಖರೀದಿಸಿ ತಮ್ಮ ಕುಟುಂಬದವರನ್ನು ಮಾತ್ರ ಕಂಪನಿಯಲ್ಲಿ ಮಾಲೀಕರಾಗಿ ಉಳಿಸಿಕೊಳ್ಳುತ್ತಾರೆ. ಈ ಕಂಪನಿ ಕೂಡ ಹಲವು ಅಕ್ರಮಗಳನ್ನು ನಡೆಸಿದೆ. ಈ ಕಂಪನಿಯ ಗಣಿ ಪರವಾನಗಿ 1996ರಲ್ಲೇ ಮುಗಿದು ಹೋಗಿದ್ದರೂ 2000ದಲ್ಲಿ ಗಣಿ ಖಾತೆ ಸಚಿವರಾಗಿದ್ದ ಕಾಂಗ್ರೆಸ್ ಸಚಿವ ವಿ. ಮುನಿಯಪ್ಪನವರು ಈ ಕಂಪನಿಗೆ 2000 ದಿಂದ ಕಾನೂನುಬಾಹಿರವಾಗಿ ಪರವಾನಗಿಯನ್ನು ನವೀಕರಿಸಲು ಆದೇಶ ಹೊರಡಿಸಿದ್ದಾರೆ.

ಒಬಳಾಪುರಂ ಮೈನಿಂಗ್ ಕಂಪನಿಯ ಪಾಲುದಾರರೆಂದರೆ: ಗಾಲಿ ಜನಾರ್ಧನ ರೆಡ್ಡಿ, ಗಾಲಿ ಲಕ್ಷ್ಮಿ ಅರುಣ, ಗಾಲಿ ಕರುಣಾಕರ ರೆಡ್ಡಿ, ಪರಮೇಶ್ವರ ರೆಡ್ಡಿ ಮತ್ತು ಬಿ. ಶ್ರೀರಾಮುಲು. ಸಿಂಗಪೂರ್‌ನಲ್ಲಿ ಇದೇ ರೆಡ್ಡಿ ಬ್ರದರ್ಸ್ ಗ್ಯಾಂಗ್ ಜಿಎಲ್‌ಎ ಟ್ರೇಡಿಂಗ್ ಇಂಟರ್‌ನ್ಯಾಷನಲ್ ಎಂಬ ಒಂದು ಕಂಪನಿಯನ್ನು ತೆರೆದು ನಂತರ ಅದರ ಒಂದು ಷೇರನ್ನು ಐಲ್ ಆಫ್ ಮ್ಯಾನ್ ಪ್ರದೇಶದ ಜಿಎಲ್‌ಆರ್ ಹೋಲ್ಡಿಂಗ್ಸ್ ಇಂಟರ್‌ನ್ಯಾಷನಲ್ ಕಂಪನಿಗೆ ಮತ್ತು ಬ್ರಿಟನ್ನಿನ ವರ್ಜಿನಿಯಾ ಐಲ್ಯಾಂಡ್‌ನ ಮತ್ತೊಂದು ಕಂಪನಿಗೆ ವರ್ಗಾಯಿಸಿದ್ದಾರೆ. ಇಲ್ಲಿ ಜಿಎಲ್‌ಎ ಮತ್ತು ಜಿಎಲ್‌ಆರ್ ಎಂದರೆ ಗಾಲಿ ಕುಟುಂಬವೇ. ಐಲ್ ಆಫ್ ಮ್ಯಾನ್ ಮತ್ತು ಬ್ರಿಟನ್ನಿನ ವರ್ಜಿನಿಯಾ ಐಲ್ಯಾಂಡ್ ಎಂಬುದು ತೆರಿಗೆಗಳ್ಳರಿಗೆ ಸ್ವರ್ಗ. ಇಲ್ಲಿಯ ಬ್ಯಾಂಕುಗಳಲ್ಲಿ ರೆಡ್ಡಿಗಳು 215 ಕೋಟಿ ಹಣ ಇಟ್ಟಿದ್ದು, ಇವೆಲ್ಲ ಕಂಪನಿಗಳು ಸೂರೆಗೈದಿರುವ ಅಕ್ರಮಗಳ ಬಗ್ಗೆ ಇನ್ನಷ್ಟು ತನಿಖೆ ನಡೆಸಬೇಕೆಂದು ಲೋಕಾಯುಕ್ತರು ವರದಿಯಲ್ಲಿ ತಿಳಿಸಿದ್ದಾರೆ.

ಆಡಳಿತ ಯಂತ್ರಾಂಗದ ಸಂಪೂರ್ಣ ವೈಫಲ್ಯ:

ಇಷ್ಟೊಂದು ಬೃಹತ್ ಪ್ರಮಾಣದ ಅಕ್ರಮಗಳಿಗೆ ರಾಜಕಾರಣಿಗಳು, ಪೊಲೀಸ್, ಆರ್.ಟಿ.ಒ, ಗಣಿ, ಅರಣ್ಯ, ಕಂದಾಯ, ವಾಣಿಜ್ಯ ತೆರಿಗೆ, ಮಾಲಿನ್ಯ ನಿಯಂತ್ರಣ ಮಂಡಳಿ, ಕಾರ್ಮಿಕ, ತೂಕ ಮಾಪನ ಇಲಾಖೆಗಳು ಸಂಪೂರ್ಣವಾಗಿ ಶಾಮೀಲಾಗಿದ್ದು, ಅಲ್ಲಿಯ ಆಡಳಿತ ಯಂತ್ರಾಂಗ ಸಂಪೂರ್ಣ ಕುಸಿದುಬಿದ್ದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.


ಅಕ್ರಮ ಗಣಿಗಾರಿಕೆಯ ವಿಧಾನಗಳು:

- ಅಕ್ರಮ ಅದಿರು ತುಂಬಿದ ಪರ್ಮಿಟ್ ಇಲ್ಲದ ಲಾರಿಗಳನ್ನು ಬಂದರುಗಳವರೆಗೆ ತಲುಪಿಸಲು 'ರಿಸ್ಕ್' ತೆಗೆದುಕೊಳ್ಳುವವರಿಗೆ ಕಮಿಷನ್ ನೀಡಲಾಗಿದೆ. ಇದನ್ನು 'ಬಳ್ಳಾರಿ ರಿಸ್ಕ್ ಮೊತ್ತ' ಎಂದೇ ಕಂಪನಿಗಳು ತಮ್ಮ ದಾಖಲಾತಿಯಲ್ಲಿ ನಮೂದಿಸಿವೆ. ಇವರು ಅದಿರು ತುಂಬಿದ ಲಾರಿಗಳನ್ನು ಅಧಿಕಾರಿಗಳೇನಾದರೂ ಹಿಡಿದಾಗ ಅದನ್ನು ಕಾನೂನು ಪ್ರಕಾರ ಅಥವಾ ಕಾನೂನು ಬಾಹಿರ ವಿಧಾನಗಳಿಂದ ಬಿಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಕೆ. ಮಹೇಶ್ ಅಸೋಸಿಯೇಟ್ಸ್ ಎಂಬ ಒಂದೇ ಕಂಪನಿ ಇಂಥಹ ರಿಸ್ಕ್ ಮೊತ್ತವಾಗಿ ರೂ. 60 ಕೋಟಿ ಪಡೆದಿದೆ. ಸುಮಾರು 382 ಗಣಿ ಸರಬರಾಜುದಾರರು/ ಕಂಪನಿಗಳು ಈ ವಿಧಾನ ಬಳಸಿವೆ.
- ಗಣಿಗಾರಿಕೆ ಪ್ರದೇಶದ ಪರವಾನಗಿ ಪಡೆದ ಗಡಿ ಗುರುತು ಮಾಡದೇ ಇರುವುದು
- ಮೈಸೂರು ಮಿನರಲ್ಸ್ ಕಂಪನಿಯ ಅದಿರು ತ್ಯಾಜ್ಯವನ್ನು ರಫ್ತು ಮಾಡುವಲ್ಲಿ ಕಂಪನಿಗೆ ನಷ್ಟ ಮಾಡಿರುವುದು.
- ಲೋಕಾಯುಕ್ತರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ನಿಷ್ಠ ಅಧಿಕಾರಿಯೊಬ್ಬರನ್ನು ಬಳ್ಳಾರಿಗೆ ವರ್ಗಾಯಿಸಿದಾಗ ಕೇವಲ 10 ದಿನಗಳಲ್ಲಿ ಅವರೊಬ್ಬರೇ ರೂ. 20 ಕೋಟಿ ಅರಣ್ಯ ಅಭಿವೃದ್ಧಿ ತೆರಿಗೆ ಸಂಗ್ರಹಿಸಿದ್ದರು. ಹೀಗೆ ರಸ್ತೆ ತೆರಿಗೆ, ರಾಜಧನ, ವಾಣಿಜ್ಯ ತೆರಿಗೆ, ಇತ್ಯಾದಿಗಳನ್ನು ಪಟ್ಟಿ ಮಾಡುತ್ತಾ ಹೋದರೆ ತೆರಿಗೆ ಮೊತ್ತ ಏರುತ್ತಾ ಹೋಗುತ್ತದೆ.
- ಆಂಧ್ರ ರಾಜ್ಯದ ಪರ್ಮಿಟ್‌ಗಳನ್ನು ಚೀಲ ತುಂಬಿಸಿಕೊಂಡು ತಂದು ಇಲ್ಲಿ ಬಳಸುವುದು.
- ಪೋರ್ಜರಿ ಪರ್ಮಿಟ್‌ಗಳನ್ನು ಸೃಷ್ಟಿಸುವುದು, ಇಲಾಖೆಯ ಹೋಲೋಗ್ರಾಂ ಪೋರ್ಜರಿ.

ಮಿತಿ ಮೀರಿದ ಗಣಿ ಪರವಾನಗಿಗಳ ಸಂಖ್ಯೆ:

ಕಳೆದ 7 ವರ್ಷಗಳಲ್ಲಿ ನೀಡಿರುವ ಗಣಿ ಪರವಾನಗಿಗಳ ಸಂಖ್ಯೆಯೂ ಕೂಡ ದೊಡ್ಡದೇ.

ಕ್ರ. ಸಂ.	ಅವಧಿ	ಗಣಿಗಾರಿಕೆಗೆ ನೀಡಿರುವ/ ಶಿಫಾರಸು ಮಾಡಿರುವ ಪರವಾನಗಿಗಳ ಸಂಖ್ಯೆ
1	2001 ಜನವರಿ ಯಿಂದ ಆಗಸ್ಟ್ 2004	15
2	28.05.2004ರಿಂದ 04.02.2006	42
3	02.02.2006 ರಿಂದ 09.10.2007	44
4	09.10.2007 ರಿಂದ 28.05.2008	22
5	ಜೂನ್ 2008 ರಿಂದ ಇಂದಿನವರೆಗೆ	21+40
	ಒಟ್ಟು	134



ಲೋಕಾಯುಕ್ತರಾಗಿ ನಿವೃತ್ತಿಹೊಂದುತ್ತಿರುವ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ರಾಜ್ಯ ನಿಯೋಗ ಇಂದು ಬೇಟಿಮಾಡಿ ಪುಷ್ಪಗುಚ್ಚ ನೀಡಿ ಬೀಳ್ಕೊಟ್ಟವು. ನಂತರ ನ್ಯಾ ಸಂತೋಷ ಹೆಗ್ಡೆ ಯವರೊಂದಿಗೆ ಮಾತನಾಡಿದ ನಿಯೋಗದ ಸದಸ್ಯರು ಲೋಕಾಯುಕ್ತದ ಮೂಲಕ ಭ್ರಷ್ಟಾಚಾರದ ವಿರುದ್ಧ ಅವರು ನಡೆಸಿದ ಕೆಲಸವನ್ನು ಶ್ಲಾಘಿಸಿದರು. ಜೊತೆಗೆ ಮುಂದಿನ ದಿನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕವಾಗಿ ತೊಡಗಿಸಿಕೊಳ್ಳಬೇಕೆಂದು ಮನವಿ ಮಾಡಿದರು, ಇದಕ್ಕೆ ನ್ಯಾ.ಸಂತೋಷ್ ಹೆಗ್ಡೆ ಸಕಾರಾತ್ಮಕವಾಗಿ ಸ್ಪಂದಿಸಿದರು. ನಿಯೋಗದಲ್ಲಿ ಜನಶಕ್ತಿ ವಾರಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್, ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷರಾದ ಹೆಚ್.ಆರ್.ನವೀನ್ ಕುಮಾರ್, ಮುಖಂಡರಾದ ಹುಳ್ಳಿ ಹುಮೇಶ್, ವಿನಯ್ ಕುಮಾರ್, ಚಿಕ್ಕರಾಜು ಮತ್ತು ಡಿ.ವೈ.ಎಫ್.ಐ ನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ, ಮುಖಂಡರಾದ ಲಿಂಗರಾಜು, ಸಂಪಂಗಿ ಹಾಜರಿದ್ದರು.

ಸೋಮಣ್ಣ ಮತ್ತು ಪುತ್ರರ ಕಂಪನಿ ಗುತ್ತಿಗೆ ರದ್ದತಿ:


ವಸತಿ ಸಚಿವ ವಿ. ಸೋಮಣ್ಣ ಮತ್ತು ಮಕ್ಕಳು ನವೀನ್ ಹಾಗೂ ಅರುಣ್ ರವರು ಮಾಲೀಕರಾಗಿರುವ 'ಮಾತಾ ಮಿನರಲ್ಸ್ ಕಂಪನಿ' ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಮೂಡಲಪಾಳ್ಯ ಮತ್ತು ಕೊಂಡ್ಲಿ ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಈ ಕಂಪನಿಯ ಗುತ್ತಿಗೆಯನ್ನೇ ರದ್ದುಗೊಳಿಸುವಂತೆ ಲೋಕಾಯುಕ್ತರು ಶಿಫಾರಸು ಮಾಡಿದ್ದಾರೆ. ಈ ಕಂಪನಿಯು 2003 ರಿಂದ ಇಲ್ಲಿಯವರೆಗೆ ಅಕ್ರಮವಾಗಿ 10 ಲಕ್ಷ ಟನ್ ಕಬ್ಬಿಣ ಮತ್ತು ಮ್ಯಾಂಗನೀಸ್ ಸಾಗಿಸಿದ್ದು, ಸುಮಾರು 37 ಎಕರೆ ಸರ್ಕಾರಿ ಭೂಮಿ ಹಾಗೂ ಮೂಡಲಪಾಳ್ಯದಲ್ಲಿ 206 ಎಕರೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದೆ. ಸಂಪೂರ್ಣ ಗಡಿಯನ್ನೇ ಬದಲಿಸಿದ್ದು, ಅಲ್ಲಿ ಬೃಹತ್ ಗಣಿ ತ್ಯಾಜ್ಯವನ್ನು ಸುರಿದಿದೆ ಎಂದು ಹೇಳಲಾಗಿದೆ. ಈ ಕಂಪನಿಯಿಂದ ಐದು ಪಟ್ಟು ದಂಡ ವಸೂಲಿ ಮಾಡಲು ಶಿಫಾರಸು ಮಾಡಿದೆ.

ಕೂಡ್ಲಿಗಿ ಶಾಸಕ ನಾಗೇಂದ್ರನ ಅಕ್ರಮಗಳು:

ನಾಲ್ಕು ವರ್ಷಗಳ ಅವಧಿಯಲ್ಲಿ ಸುಮಾರು 650 ಕೋಟಿ ರೂ ಗಳನ್ನು ನೊಂದಣಿಯಾಗದ ಕಂಪನಿ ಹೆಸರಿನ ಖಾತೆಗೆ ಸಂದಾಯವಾಗಿದೆ. ಬೇನಾಮಿ ಹೆಸರಿನಲ್ಲಿ ಇದನ್ನು ನಿರಂತರವಾಗಿ ಡ್ರಾ ಮಾಡಿದ್ದು, 55 ಕಂಪನಿಗಳ ಜೊತೆ ಅಕ್ರಮ ವಹಿವಾಟು ಮಾಡಿದ್ದಾರೆ ಎಂಬ ದಾಖಲಾತಿ ನಾಗೇಂದ್ರ ಕುರಿತು ಲೋಕಾಯುಕ್ತರು ನೀಡಿದ್ದಾರೆ. ಇವರು ಈಗಲ್ ಟ್ರೇಡರ್ಸ್ ಅಂಡ್ ಲಾಜಿಸ್ಟಿಕ್ಸ್ ಎಂಬ ತಮ್ಮ ಕಂಪನಿಯ ಮೂಲಕ ಅಕ್ರಮಗಳನ್ನು ನಡೆಸಿದ್ದು, ಹೊಸಪೇಟೆಯ ಸ್ವಸ್ತಿಕ್ ನಾಗರಾಜ್ ಮತ್ತು ಖಾರದ ಪುಡಿ ಮಹೇಶ್ ಅವರಿಗೆ ನಿರಂತರವಾಗಿ 'ರಿಸ್ಕ್ ಹಣ' ಪಾವತಿಸಿದ್ದಾರೆ.

4,500 ಟನ್ ಅದಿರು ಜಪ್ತಿ:

ಸುಪ್ರೀಂ ಕೋರ್ಟ್ ಕಳೆದ ವಾರವಷ್ಟೆ ಅದಿರು ಗಣಿಗಾರಿಕೆ ಮತ್ತು ಸಾಗಣೆಯನ್ನು ನಿಷೇಧಗೊಳಿಸಿದ ನಂತರ ಎಚ್ಚೆತ್ತುಕೊಂಡಂತೆ ಕಂಡುಬಂದಿರುವ ಬಳ್ಳಾರಿ ಜಿಲ್ಲಾಡಳಿತವು ಕೇಂದ್ರ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ ಗಣಿಯಿಂದ ತೋರಣಗಲ್‌ನ ಜಿಂದಾಲ್ ಕಂಪನಿಗೆ ಸಾಗಣೆಯಾಗುತ್ತಿದ್ದ 4,500 ಟನ್ ಅದಿರನ್ನು ಜಪ್ತಿ ಮಾಡಿದೆ. ಇದೇ ವೇಳೆ, ಬಳ್ಳಾರಿಯ ಸುತ್ತಮುತ್ತಲ ಪ್ರದೇಶದಲ್ಲಿ ಅರಣ್ಯದಲ್ಲೇ 124 ಗಣಿಗಳಲ್ಲಿ ಶೇ. 90ರಷ್ಟು ಅಕ್ರಮ ಗಣಿಗಾರಿಕೆ ನಡೆದಿದೆ ಎರಡು ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ಕೇಂದ್ರದ ಉನ್ನತಾಧಿಕಾರ ಸಮಿತಿಯು ತಿಳಿಸಿದೆ.



ಅರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಗಡ್ಕರಿ–ಯಡ್ಯೂರ್ ಜೀವಾನುಬಂಧಕ್ಕೆ ಕಾಮಗಾರಿ ಗುತ್ತಿಗೆಯ ಸಿಮೆಂಟ್

ಗಣಿ ಹಗರಣಗಳ ಕುರಿತ ಲೋಕಾಯುಕ್ತ ವರದಿ ಸಲ್ಲಿಕೆಯಾಗಿ ಯಡಿಯೂರಪ್ಪನವರ ಖುರ್ಚಿಯ ಕೆಳಗೆ ಮತ್ತೊಮ್ಮೆ ಭೂಕಂಪನವಾಗಿ ಅವರು ಕುರ್ಚಿ ಬಿಟ್ಟಿದ್ದಾರೆ... ಕ್ಷಮಿಸಿ ಅವರಿಂದ ಕುರ್ಚಿಯನ್ನು ಸದ್ಯಕ್ಕೆ ಕಸಿದುಕೊಳ್ಳಲಾಗಿದೆ. ಅವರ ಜಾಗದಲ್ಲಿ 'ಸದಾ ಆನಂದ'ದಿಂದ ಇರುವ ಸದಾನಂದ ಗೌಡರು ಕುರ್ಚಿ ಏರಿದ್ದಾರೆ. ಇದಿಷ್ಟು ಬದಲಾವಣೆ ಆಗುವಾಗ ರಾಜ್ಯದ ಜನರು ನೋಡಬೇಕಾಗಿ ಬಂದ ಬಿಜೆಪಿಗರ ಮಹಾನ್ ಸರ್ಕಸ್‌ನ ಸೊಗಸೇನು ?

ಮಹಾನ್ ಶಿಸ್ತು, ಬೇರೆ ಇನ್ನೆಲ್ಲೂ ಕಾಣದ ನೈತಿಕತೆಯ ಭಂಡಾರವನ್ನೇ ಬೆನ್ನ ಮೇಲೆ ಹೊತ್ತುಕೊಂಡಿರುವ ಬಿಜೆಪಿ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪನವರನ್ನು ಕದಲಿಸಲು ಪಟ್ಟ ಪಾಡು... ಆ ಹಾ !! ಅದು ನೋಡಿಯೇ ಆನಂದಿಸಬೇಕಾದ ವಿಚಾರ. ಒಂದು ರಾಷ್ಟ್ರೀಯ ರಾಜಕೀಯ ಪಕ್ಷವಾದ ಬಿಜೆಪಿಯ ರಾಷ್ಟ್ರೀಯ ನಾಯಕತ್ವಕ್ಕೆ ಒಂದು ರಾಜ್ಯದ ಮುಖ್ಯಮಂತ್ರಿಯನ್ನು ಕದಲಿಸಲು ಯಾಕಿಷ್ಟು ಏದುಬ್ಬಸ ಬಿಡುಬಂತಹ ಪರಿಸ್ಥಿತಿ ಬಂದಿತು ? ಈ ಕೆಳಗೆ ಒಂದು ಮಾಹಿತಿ ಇದೆ. ಜುಲೈ 25,2007 ರಂದು 'ಉದಯವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಈ ಮಾಹಿತಿಯನ್ನು ನೀವೇ ನೋಡಿ .

ಗಡ್ಕರಿ–ಯಡಿಯೂರಪ್ಪ ಜೀವಾನುಬಂಧಕ್ಕೆ ಬಿಡಿಎ ಕಾಮಗಾರಿ ಗುತ್ತಿಗೆ ಸಿಮೆಂಟ್

ಬಿಜೆಪಿ ಹಾಲಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ ಹಾಗೂ ಯಡಿಯೂರಪ್ಪನವರ ನಡುವಿನ ಬಾಂಧವ್ಯ ಬಹಳ ಬಲವಾದುದಂತೆ. ಈ ಸ್ನೇಹ ಬಂಧನದ ಸಿಮೆಂಟ್ 2,700 ಕೋಟಿ ರೂಪಾಯಿಗಳ ಬಿಡಿಎ ಕಾಮಗಾರಿಗಳ ಗುತ್ತಿಗೆ ನೀಡಿಕೆ ಸಂಬಂಧದ ವ್ಯವಹಾರವಂತೆ. ಏನದು ಕಾಮಗಾರಿ, ಏನು ಗುತ್ತಿಗೆ ? ಎಲ್ಲಿ ? ಅಂದಿರಾ?

ಅದೊಂದು ಸ್ವಾರಸ್ಯಕರ ಕತೆ. ಸುಮಾರು ಒಂದು ವರ್ಷದ ಹಿಂದೆ ಬೆಂಗಳೂರಿನ ಮಾಗಡಿ ರಸ್ತೆಯ ಭಿಕ್ಷುಕರ ಕಾಲನಿಯಲ್ಲಿ ಸಾಲು ಸಾಲು ಭಿಕ್ಷುಕರ ಸಾವುಗಳು ಸಂಭವಿಸಿ ರಾಜ್ಯದ ಗಮನವೆಲ್ಲ ಆ ಕಡೆ ಹರಿದಿತ್ತಲ್ಲ. ಆಗ ಯಡಿಯೂರಪ್ಪನವರ ಗಮನವೂ ಆ ಕಡೆಗೆ ಹರಿಯಿತು ನೋಡಿ. ಅಮ್ಮಮ್ಮ !! ಬೆಂಗಳೂರು ನಗರದೊಳಗೆ ಮಾಗಡಿ ಮುಖ್ಯರಸ್ತೆಗೆ ಅತುಕೊಂಡಂತೆ ನೂರಾರು ಎಕರೆ ಸರ್ಕಾರಿ ಜಮೀನು ಖಾಲಿ ಬಿದ್ದಿದೆ !!!. ಸರಿಯೇ ಮತ್ತೆ ಜಮೀನು ಅಭಿವೃದ್ಧಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಬೆಂಗಳೂರು 'ಅಭಿವೃದ್ಧಿ'ಯ ಭರ್ಜರಿ ಯೋಜನೆ ಸಿದ್ಧವಾಗೇ ಬಿಟ್ಟಿತು. ಒಟ್ಟು 122.30 ಎಕರೆ ಭೂಮಿಯಲ್ಲಿ ಏನೇನು ಬರುತ್ತಿದೆ ನೋಡಿ.

10 ಎಕರೆಯಲ್ಲಿ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಸರ್ಕಾರದ್ದಲ್ಲ–ಖಾಸಗಿ ಸಹಭಾಗಿತ್ವದಲ್ಲಿ)

ಉಳಿದ 113.30 ಎಕರೆಯಲ್ಲಿ ಜಾಗದಲ್ಲಿ

ಒಂದು ಸ್ಟಾರ್ ಹೋಟೆಲ್

ಒಂದು ವಾಣಿಜ್ಯ ಸಮುಚ್ಚಯ

ಒಂದು ಐಷಾರಾಮಿ ಕ್ಲಬ್


ಒಂದು ಕನ್ವೆನ್ಷನ್ ಹಾಲ್.....

ಇಂಥವೆಲ್ಲಾ ಬರುತ್ತವೆ.

ಬೆಂಗಳೂರಿನ ಬಡವರು, ಭಿಕ್ಷುಕರುಗಳ ಭಾಗ್ಯ ನೋಡಿ !! ಎಂಥೆಂಥಾ ಅಭಿವೃದ್ಧಿ ಯೋಜನೆಗಳು. !? ಇದಕ್ಕಾಗಿ ಬಿಡಿಎ ವೆಚ್ಚ ಮಾಡುವುದು

ಒಟ್ಟು 2,700 ಕೋಟಿ ರೂಪಾಯಿಗಳು. ಖುಷಿವಂತಹ ದೊಡ್ಡ ವೆಚ್ಚದ ಕಾಮಗಾರಿಯೇ. **ಕಾಮಗಾರಿಯ ಗುತ್ತಿಗೆ ಯಾರದ್ದು ಅಂದಿರಾ?**

ಅದೇ ಈ ಕತೆಯ ಜೀವ ಜೀವಾಳ. 'ಟಂಡನ್ ಅರ್ಬನ್ ಸಲ್ಯೂಷನ್'ಎಂಬ ಕಂಪನಿಗೆ ಈ ಗುತ್ತಿಗೆ ಸಿಕ್ಕಿದೆ. ಈ ಕಂಪನಿ ಮುಂಬೈ ಮೂಲದ್ದು. ಅದೂ ಗಡ್ಕರಿ ಅವರಿಗೆ ಪರಮಾಪ್ತರಾದ ಬಿಜೆಪಿ ಮುಖಂಡರೊಬ್ಬರ



ಒಡೆತನಕ್ಕೆ ಸೇರಿದ್ದು. ಈ ಯೋಜನೆಯ ಬಗೆಗೆ ಗಡ್ಕರಿ ವೈಯಕ್ತಿಕ ಆಸಕ್ತಿವಹಿಸಿ ಮುತುವರ್ಜಿ ತೋರಿದರಂತೆ. ಇಷ್ಟೆಲ್ಲಾ ಆದ ಮೇಲೆ ಬೆಂಗಳೂರು 'ಅಭಿವೃದ್ಧಿ' ಆಗದಿರುತ್ತದೆಯೇ? ಆಗೇ ಆಗುತ್ತದೆ. ಕರ್ನಾಟಕ, ಬೆಂಗಳೂರು, ಮಾಗಡಿ ರಸ್ತೆ, ಭಿಕ್ಷುಕರ ಕೇಂದ್ರ ಎಲ್ಲವೂ ಅಭಿವೃದ್ಧಿ ಕಂಡೆ ಕಾಣುತ್ತವೆ. ಗಡ್ಕರಿ, ಯಡಿಯೂರಪ್ಪ ಪರಿವಾರವೂ ಅಭಿವೃದ್ಧಿಗೊಳ್ಳುತ್ತಾರೆ. ಇಂಥಾ ಸ್ನೇಹ ಬಂಧನ ಬೆಸೆದುಕೊಂಡಿರುವಾಗ 'ಆಪ್ತ ಮಿತ್ರ' ಯಡಿಯೂರಪ್ಪ ವಿರುದ್ಧ ಮಾನ್ಯ ಶ್ರೀ ಗಡ್ಕರಿಯವರು ಕಠೋರ ಧೋರಣೆ ತಳೆಯುವುದು ಪಾಪ ಕಷ್ಟವೇ ಅಲ್ಲವೇ ಅಂತ ಪ್ರತಿಕೆ ವ್ಯಕ್ತಮಾಡಿರುವ ಅನುಮಾನ. ಅದೂ ಒಂದು ರೀತಿ ನಿಜವೇ ಅನ್ನಿ. ಅಂದ ಹಾಗೆ ಗಡ್ಕರಿ ಮಹಾರಾಷ್ಟ್ರದಲ್ಲಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿ 'ಅಪಾರ ಅನುಭವ'ಗಳಿಸಿರುವವರು. ಇಂಥಾ "ಶ್ರೀಮಂತ ಅನುಭವ" ಇಲ್ಲದೇ ಇದ್ದಿದ್ದರೆ ಆರೆಸ್ಸೆಸ್ ಅವರನ್ನು ಬಿಜೆಪಿ ಮುಖ್ಯಸ್ಥರ ಹುದ್ದೆಗೆ ಹೇಗಾದರೂ ತರಲು ಮನಸ್ಸು ಮಾಡುತ್ತಿತ್ತು.

ಪ್ರತಿವರ್ಷ ರಾಜ್ಯದಲ್ಲಿ ವರಮಹಾಲಕ್ಷ್ಮಿ ಪೂಜೆಗೆಂದು ಓಡೋಡಿ ಬರುವ ಅಮ್ಮ, ನಮ್ಮ ರೆಡ್ಡಿ ಸಹೋದರರ ತಾಯಿ ಸುಷ್ಮಮ್ಮ ನೆನಪಾಗುತ್ತಿದ್ದಾರಲ್ಲವೇ ?

★

ರೈತರಿಗೆ ಶೇ.1 ಬಡ್ಡಿಯ ಸಾಲ

ನಮ್ಮ ಯಡಿಯೂರಪ್ಪನವರು ಕುರ್ಚಿ ಬಿಡಲೇ ಬೇಕು ಬೇರೆ ದಾರಿ ಇಲ್ಲ ಎಂಬಂತಹ ಸಮುಯದಲ್ಲಿ ಆಡಿದ ಮಾತುಗಳನ್ನು ನೀವು ಕೇಳಿರ ಬೇಕು. ತಮ್ಮ ಮೂರು ವರ್ಷದ ಆಡಳಿತದಿಂದಾಗಿ ರಾಜ್ಯ ಸುಭಿಕ್ಷವಾಗಿದೆಯಂತೆ. ರಾಜ್ಯದ ಜನ ಸಂತೃಪ್ತರಾಗಿದ್ದಾರಂತೆ. ರಾಜ್ಯದ ಪ್ರತಿಯೊಂದು ಕುಟುಂಬಕ್ಕೂ ಸರ್ಕಾರದ ಯೋಜನೆಗಳ ಫಲ ಸಿಕ್ಕಿದೆಯಂತೆ. ರೈತರು ನೆಮ್ಮದಿಯಾಗಿದ್ದಾರಂತೆ. ಈ ಮಾತು ನಿಜವಿರಬಹುದು. ಏಕೆಂದರೆ ಈಗಾಗಲೇ ನಮ್ಮ ನಾಡಿನ ಸರ್ಕಾರಿ ಸಮಾರಂಭಗಳಲ್ಲಿ ಎಲ್ಲರೂ ರೈತಗೀತೆ ಹಾಡುವುದನ್ನು ಕಡ್ಡಾಯ ಮಾಡಲಾಗಿದೆ. ವಿಧಾನ ಸೌಧದ ಮುಂದೆ ಸಹಸ್ರಾರು ರೈತರನ್ನು ಸೇರಿಸಿ ಸಾವಯವ ಕೃಷಿಯನ್ನೇ ಮಾಡುವುದಾಗಿ ಪ್ರತಿಜ್ಞೆ ಮಾಡಿಸಲಾಗಿದೆ. ಎಷ್ಟೆಲ್ಲಾ 'ಅಭಿವೃದ್ಧಿ' ಕೆಲಸ ಕಾರ್ಯಗಳ ಒತ್ತಡಗಳಿದ್ದರೂ ಯಡಿಯೂರಪ್ಪ ನವರು ತಪ್ಪದೇ ತಿಂಗಳಿಗೊಮ್ಮೆಯಾದರೂ ಸಾವಯವ ಕೃಷಿ ಮಾಡುವ ರೈತರ ಮನೆಗಳಿಗೆ ಭೇಟಿಕೊಟ್ಟು ಪೊಗದಸ್ತಾಗಿ ತಿಂದು–ಉಂಡು ಬಂದಿದ್ದಾರೆ.

ಹ್ಞಾಂ !! ನಮ್ಮ ಯಡಿಯೂರಪ್ಪನವರು ಕೃಷಿಕರಿಗೆ ಶೇ.1 ರ ಬಡ್ಡಿದರದಲ್ಲಿ ಸಾಲ ಕೊಡುವುದಾಗಿ ಎಲ್ಲೋ ಘೋಷಿಸಿದ ನೆನಪು ಅಲ್ಲವೆ ? ಹೌದು ಕಳೆದ ಬಜೆಟ್‌ನಲ್ಲಿ ಏಪ್ರಿಲ್ 1,2011 ರಿಂದ ಶೇ. 1 ರ ಬಡ್ಡಿ ದರದಲ್ಲಿ ರೈತರಿಗೆ ಸಾಲ ನೀಡುವುದಾಗಿ ಘೋಷಿಸಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಘೋಷಣೆ ಹೇಗೆ ಜಾರಿಯಾಗಿದೆ ಕೊಂಚ ನೋಡೋಣ.

ರಾಯಚೂರು, ಬಿಜಾಪುರ, ಮಂಡ್ಯ, ಮೈಸೂರು, ಹಾಸನ, ಚಿಕ್ಕ ಮಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಗದಗ್, ಉಡುಪಿ ಜಿಲ್ಲೆಗಳಲ್ಲಿಯಂತೂ ಈ ಯೋಜನೆ ಜಾರಿಗೆ ಬಂದಿರುವುದರ 'ಯಾವ ಲಕ್ಷಣವೂ ಇಲ್ಲ' ಎನ್ನುತ್ತಿದೆ 'ಕನ್ನಡ ಪ್ರಭ'ದ ವರದಿಯೊಂದು. ವಾಣಿಜ್ಯ ಬ್ಯಾಂಕುಗಳಲ್ಲಿ ಇಂತಹ ಯಾವುದೇ ಸೌಲಭ್ಯ ರೈತರಿಗೆ ಸಿಗುತ್ತಿಲ್ಲ. ಸಹಕಾರ ಬ್ಯಾಂಕುಗಳಲ್ಲಿ ರೈತರಿಗೆ ಸಾಲ ನೀಡಲು ಹಣವೇ ಇಲ್ಲ. ಅಸಲಿಗೆ ಶೇ. 1 ರ ಬಡ್ಡಿದರದ ಸಾಲ ಸೌಲಭ್ಯದ ಕುರಿತ ಸುತ್ತೋಲೆ ಜುಲೈ ತಿಂಗಳ ಕೊನೆಯಲ್ಲಿ ಬ್ಯಾಂಕುಗಳನ್ನು ತಲುಪಿದೆಯಂತೆ.

ಪಾಪ, ನಮ್ಮ ಯಡಿಯೂರಪ್ಪನವರಾದರೂ ಏನು ಮಾಡುತ್ತಾರೆ. ಅವರಿಗೆ ರಾತ್ರಿ ಹಗಲು ಬರೀ 'ಅಭಿವೃದ್ಧಿ ಕೆಲಸ'ಗಳದ್ದೇ ಚಿಂತೆ. ಅಷ್ಟೊಂದು ಅಭಿವೃದ್ಧಿ ಹೊಣೆಗಾರಿಕೆಗಳ ನಡುವೆ ಸಹಕಾರ ಸಂಘದಲ್ಲಿ ಹಣ ಇದೆಯೋ ಇಲ್ಲವೋ? ಸಾಲದ ಕುರಿತು ಸುತ್ತೋಲೆ ತಲುಪಿದೆಯೋ ಇಲ್ಲವೋ? ಇಂಥವೆಲ್ಲ ವಿಚಾರಿಸಿಕೊಂಡು ಕೂರಲು ಸಾಧ್ಯವಿತ್ತೆ ?

★

★

ನೂ.ಮು.ಮ. ಸದಾನಂದರ ಅರ್ಹತೆಗಳು

ಕರ್ನಾಟಕ ರಾಜ್ಯಕ್ಕೆ ಒಬ್ಬ ಹೊಸ ಮುಖ್ಯಮಂತ್ರಿಯನ್ನು ಬಿಜೆಪಿ ಕೊಡುಗೆಯಾಗಿ ಕೊಟ್ಟಿದೆ. ಈ ಹೊಸ ಮುಖ್ಯಮಂತ್ರಿಯ ಆಯ್ಕೆ ನಡೆದಿರುವ ಪರಿ ಆ ಹಾ !! ಅದು ಬಿಜೆಪಿ ಪಕ್ಷದ ವಿಶಿಷ್ಟತೆಗೆ ತಕ್ಕುದಾಗಿಯೇ ಇದೆ. ಮುಖ್ಯಮಂತ್ರಿಯ ಹುದ್ದೆ ಸುಮ್ಮನೆ ಅಲ್ಲ. ಅದರಲ್ಲೂ ಈ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗುವವರಿಗೆ ವಿಶೇಷ ಅರ್ಹತೆಗಳು ಬೇಕಾಗುತ್ತವೆ. ಅಗತ್ಯವಾದ ಆ ವಿಶೇಷ ಅರ್ಹತೆಗಳಿವೆ ಅಂತಲೇ "ಸದಾನಂದ' ರನ್ನು ಆ ಜಾಗಕ್ಕೆ ಆರಿಸಿ ತರಲಾಗಿದೆ. ಈ ಆಯ್ಕೆ ವಿಧಾನದ ಬಗ್ಗೆ ಮುಂದೆ ನೋಡೋಣ.

ಈ ಹೊಸ ಮುಖ್ಯಮಂತ್ರಿ ಆಯ್ಕೆಗೆ ಜಾತಿ ಸಮೀಕರಣಗಳ ಲೆಕ್ಕಾಚಾರ, ಆರೆಸ್ಸೆಸ್‌ಗೆ, ಆರೆಸ್ಸೆಸ್ ಅಜೆಂಡಾಗಳಿಗೆ ನಿಷ್ಠೆ ಮುಂತಾದವುಗಳ ಜೊತೆಗೆ ಅಗತ್ಯವಾಗಿ ಪರಿಗಣಿಸಲಾಗಿರುವ ಅರ್ಹತೆಗಳೇನೇನಿರಬಹುದು. ನೋಡಿ ಹೀಗೊಂದು ಅಂದಾಜು.

ಯಡಿಯೂರಪ್ಪ ಮತ್ತು ಈಗ ಅವರ ಹಿಂದೆ ಅಡಗಿಕೊಂಡಿರುವವರು ಜೈಲಿಗೆ ಹೋಗುವ ಪರಿಸ್ಥಿತಿ ಬರುವುದನ್ನು ಹೇಗಾದರೂ ತಪ್ಪಿಸುವ ಸಾಮರ್ಥ್ಯ ಇರಬೇಕು. ಅಗಾಧ ಗಣಿ ಅದಿರು ಲೂಟಿಯ ಘೋರ ಅಪರಾಧಗಳ ಶಿಕ್ಷೆಯಿಂದ, ಹಾಗೂ ಕೋಟಿ ಕೋಟಿ ರೂಪಾಯಿಗಳ ಭೂಹಗರಣಗಳಿಂದ [illegible] (ಮಾಜಿ)ಮುಖ್ಯಮಂತ್ರಿ ಹಾಗೂ [illegible] ಶಾಸಕರುಗಳನ್ನು [illegible] ಲೋಕಾಯುಕ್ತ [illegible]

ಬಿಜೆಪಿ ದರ್ಬಾರ್

ಪುಟ 11 ರಿಂದ

ಅಥವಾ ನೆನೆಗುದಿಗೆ ಹಾಕುವ ಅಂದರೆ ಕೊಳೆ ಹಾಕುವ ತಂತ್ರಗಾರಿಕೆ ಬಲ್ಲವರಾಗಿರಬೇಕು. ನ್ಯಾಯಾಲಯದ ವಿವಿಧ ತನಿಖಾ ಸಂಸ್ಥೆಗಳಿಗೆಲ್ಲಾ 'ಸಮರ್ಥವಾದ ಉತ್ತರ'ಗಳನ್ನು ನೀಡುವಂತಹವ ರಾಗಿರಬೇಕು....ಸಾಕಲ್ಲವೇ ಅರ್ಹತೆ.

"(ಯಡಿಯೂರಪ್ಪನವರು ಮಾಡಿರುವ) ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮತ್ತಷ್ಟು ವೇಗ ನೀಡುವುದರ ಜೊತೆಗೆ (ಯಡಿಯೂರಪ್ಪನವರ..) ಜನಪರವಾದ ಉತ್ತಮ ಆಡಳಿತ ಮತ್ತು ... ಹಿಂದಿನ ಸರ್ಕಾರದ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗುವೆ." ಅಂತ ಸದಾನಂದ ಗೌಡರು ಹೇಳಿದ್ದಾರೆ. ಆಗಸ್ಟ್ 4 ರ ಪತ್ರಿಕಾಗೋಷ್ಠಿಯಲ್ಲಿ ಗಣಿ ಅಕ್ರಮಗಳ ಕುರಿತ ಲೋಕಾಯುಕ್ತ ವರದಿಯ ಬಗೆಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಮತ್ತೆ ಮತ್ತೆ ಕೇಳಿದರೂ ಅದೊಂದು ಪ್ರಶ್ನೆಯನ್ನು ಸದಾನಂದಗೌಡರು ಕಿವಿಯ ಮೇಲೆ ಹಾಕಿಕೊಳ್ಳದೆ, ಆ ಬಗ್ಗೆ ಒಂದು ಅಕ್ಷರವನ್ನು ಮಾತನಾಡದೇ ಹಾಗೆ ಎದ್ದು ಹೋಗಿದ್ದಾರೆ. ಮಾನ್ಯ ಯಡಿಯೂರಪ್ಪನವರು ರಾಜ್ಯದಲ್ಲಿ ಬಾರಿ ಬಾರಿ ಅಭಿವೃದ್ಧಿ ಮಾಡಿ ಗುಡ್ಡೆ ಹಾಕಿ ಕುರ್ಚಿ ಬಿಟ್ಟಿದ್ದಾರೆ. ಅದೇ 'ಅಭಿವೃದ್ಧಿ'ಯನ್ನು ಸದಾನಂದರು ಮುಂದುವರೆಸುತ್ತಾರೆ..... ಇಷ್ಟು ಹೇಳಿದ ಮೇಲೆ ಇದಕ್ಕೆ ಇನ್ನೂ ಹೆಚ್ಚಿನ ವಿವರಣೆ ಬೇಕಾಗಿಲ್ಲ ಅನಿಸುತ್ತದೆ ಅಲ್ಲವೇ ?

ಮತ್ತೊಂದು ವಿಷಯ, ಮಂತ್ರಿಮಂಡಳ ರಚನೆ ವಿಚಾರದ ಚರ್ಚೆಗೆ ಅನಂತ್ ಬಣದ ಪ್ರಮುಖರು ಹೋಗದೇ ತಮ್ಮದೇ ಪಕ್ಷದ ಅಧಿಕಾರ ಸ್ವೀಕಾರ ಸಮಾರಂಭವನ್ನು ಬಹಿಷ್ಕರಿಸಿದ್ದಾರೆ. ಅನಂತ್ ಬಣದ ಶಾಸಕರನ್ನು ಬೆದರಿಸಿ ಯಡಿಯೂರಪ್ಪ ಬಣಕ್ಕೆ ಮತ ಹಾಕಿಸಿಕೊಳ್ಳಲಾಗಿದೆಯಂತೆ. "ನೀನು ಯಾರಿಗೆ ಓಟ್ ಹಾಕಿದ್ದೀಯ ಅನ್ನುವುದು ಗೊತ್ತು. ನಿನಗೆ ನೋಡಿಕೊಳ್ಳುತ್ತೇನೆ" ಅಂತ ಯಡಿಯೂರಪ್ಪ ಬಿಜೆಪಿ ಶಾಸಕ ಈಶಣ್ಣ ಗುಳಗಣ್ಣನವರ್ ಅವರಿಗೆ ಧಮಕಿ ಹಾಕಿದರಂತೆ. ಅನಂತ್ ಬಣದವರು ಇದೇ ಕೆಲಸವನ್ನು ಮಾಡಿದ್ದಾರೆನ್ನುತ್ತವೆ ವರದಿಗಳು. ಈ ಯಾವ ಕಸರತ್ತಿನಲ್ಲೂ ಜನಹಿತ ಎಂಬುದೇನಿಲ್ಲ.

ಸದಾನಂದ ಗೌಡರ ನೇತೃತ್ವದ ಸರ್ಕಾರ ಎಂತಹ 'ಜನಪರ' ಹಾದಿಯಲ್ಲಿ ಹೋಗಬಹುದು ಅಂತ ಒಂದು ಸಣ್ಣ 'ಮುನ್ನೋಟ' ಇದರಲ್ಲಿ ಸಿಗುತ್ತಿದೆ ಅಲ್ವಾ ? ❁

ಕಾಂಗ್ರೆಸ್–ಬಿಜೆಪಿ ಒಪ್ಪಂದ !

ಪುಟ 7 ರಿಂದ

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ವಿಪರೀತ ಏರಿಕೆ. ಜೂನ್ 26, 2010ರಿಂದ ಮೇ 14, 2011ರ ನಡುವೆ ಒಂಬತ್ತು ಬಾರಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸಲಾಯಿತು. ಇದೂ ಸಾಲದೆಂಬಂತೆ ಜೂನ್ 25ರಂದು ಡೀಸೆಲ್, ಸೀಮೆ ಎಣ್ಣೆ ಮತ್ತು ಅಡುಗೆ ಅನಿಲದ ಬೆಲೆಗಳನ್ನು ಏರಿಸಲಾಯಿತು. ಇವೆಲ್ಲ ತೈಲ ಕಂಪನಿಗಳಿಗೆ ಬಾಕಿ ಬರಬೇಕಾಗಿದ್ದ ಒಟ್ಟು ಮೊತ್ತವನ್ನು ತುಂಬಿಸಲು ಅಗತ್ಯವಾಗಿತ್ತು ಎಂದು ಸರಕಾರ ಸಮರ್ಥಿಸಿಕೊಳ್ಳುತ್ತಿದೆ. ಇದೊಂದು ಸುಳ್ಳು ದಾವೆ ಎಂಬುದನ್ನು ಈ ಹಿಂದೆ ಹಲವು ಬಾರಿ ಬಯಲಿಗೆಳೆಯಲಾಗಿದೆ. ಬಾಕಿ ಬರಬೇಕಾಗಿದೆ ಎಂಬ ಮೊತ್ತ ವಾಸ್ತವವಾಗಿ ನಷ್ಟಗಳೇನಲ್ಲ, ಅವು ಪೆಟ್ರೋಲಿಯಂ ಉತ್ಪನ್ನಗಳ ಅಂತರ್ರಾಷ್ಟ್ರೀಯ ಬೆಲೆಗಳ ಆಧಾರದಲ್ಲಿ ಮಾಡಿರುವ ಕಾಲ್ಪನಿಕ ಲೆಕ್ಕಾಚಾರವೇ ಹೊರತು, ದೇಶೀ ಉತ್ಪಾದನಾ ಖರ್ಚುಗಳ ಆಧಾರದಲ್ಲಿ ಮಾಡಿರುವ ವಾಸ್ತವಿಕ ಲೆಕ್ಕಾಚಾರವಲ್ಲ.

ತಾನು ಈ ಪೆಟ್ರೋಲಿಯಂ ಉತ್ಪನ್ನಗಳಿಗೆ ಭಾರೀ ಸಬ್ಸಿಡಿಗಳನ್ನು ಕೊಡುತ್ತಿದ್ದೇನೆ, ಇಂತಹ ಒಂದು ಹೊರೆ ಹೊರುವುದು ಸಾಧ್ಯವಿಲ್ಲ ಎಂಬುದು ಸರಕಾರದ ಇನ್ನೊಂದು ತರ್ಕ. ಸರಕಾರ ಈ ವಲಯದಲ್ಲಿ ಕೊಡುತ್ತಿದ್ದೇನೆ ಎನ್ನುವ ಈ ಸಬ್ಸಿಡಿಗಳಿಗಿಂತ ಎಷ್ಟೋ ಪಾಲು ಹೆಚ್ಚು ಪ್ರಮಾಣದಲ್ಲಿ ದೇಶದ ಸಂಪನ್ಮೂಲಗಳ ಲೂಟಿ ನಡೆದಿರುವುದಂತೂ ಒತ್ತಟ್ಟಿಗಿರಲಿ, ಈ ತರ್ಕದಲ್ಲಿರುವ ಸುಳ್ಳನ್ನೂ ನಾವು ಮತ್ತೆ–ಮತ್ತೆ ಬಯಲಿಗೆಳೆದಿದ್ದೇವೆ. ಉದಾಹರಣೆಗೆ, ಕೇಂದ್ರ ಸರಕಾರೀ ಬೊಕ್ಕಸಕ್ಕೆ ಪೆಟ್ರೋಲಿಯಂ ವಲಯದ ತೆರಿಗೆಗಳಿಂದ ಬರುವ ಆದಾಯ 1,36,000 ಕೋಟಿ ರೂ.ಗಳೆಂದು ವರದಿಯಾಗಿದೆ. ಇದರ ಜೊತೆಗೇ ಈ ವಲಯ ರಾಜ್ಯ ಸರಕಾರಗಳಿಗೂ ತೆರಿಗೆಗಳ ಮೂಲಕ 80,000 ಕೋಟಿ ರೂ.ಗಳನ್ನು ನೀಡಿದೆ. ಅಂದರೆ ಕಳೆದ ಹಣಕಾಸು ವರ್ಷದಲ್ಲಿ ಪೆಟ್ರೋಲಿಯಂ ವಲಯದಿಂದ ಎರಡು ಲಕ್ಷ ಕೋಟಿ ರೂ.ಗಳಿಗೂ ಮೀರಿದ ಅಗಾಧ ಮೊತ್ತವನ್ನು ತೆರಿಗೆಗಳ ರೂಪದಲ್ಲಿ ವಸೂಲಿ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ, ಸರಕಾರ ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳ ತೈಲ ಸಾಲಪತ್ರಗಳಿಗೆ ಕೊಟ್ಟಿರುವ ಹಣವನ್ನೂ ಸೇರಿಸಿ ಒದಗಿಸಿರುವ ಒಟ್ಟು ಸಬ್ಸಿಡಿಯ ಮೊತ್ತ 40,000 ಕೋಟಿ ರೂ.ಗಳೆಂದು ಬಜೆಟ್ ದಸ್ತಾವೇಜುಗಳು ಹೇಳುತ್ತವೆ. ಅಂದರೆ ಸರಕಾರ ಕೊಡುತ್ತಿರುವ ಸಬ್ಸಿಡಿ ಅದು ಈ ವಲಯದಿಂದ ಪಡೆಯುತ್ತಿರುವ ಆದಾಯದ ಐದನೇ ಒಂದಂಶಕ್ಕಿಂತಲೂ ಕಡಿಮೆ. ಹೀಗಿರುವಾಗ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಈ ಬೆಲೆಯೇರಿಕೆಗಳನ್ನು ತಕ್ಷಣವೇ ಹಿಂದಕ್ಕೆ ಪಡೆದುಕೊಳ್ಳಬೇಕಲ್ಲವೇ?

ಹೋರಾಟ ಸಂಸತ್ತಿನ ಒಳಗೂ–ಹೊರಗೂ

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ ಕೇಂದ್ರ ಸರಕಾರ ಇಟ್ಟುಕೊಂಡಿರುವ ಹೆಚ್ಚಿನ ಆಹಾರಧಾನ್ಯಗಳ ದಾಸ್ತಾನನ್ನು ಬಿಡುಗಡೆ ಮಾಡುವುದಲ್ಲದೆ, ಅದರ ಜೊತೆಗೆ ಈ ಎರಡು ನಿರ್ದಿಷ್ಟ ಕ್ರಮಗಳು, ಅಂದರೆ ಜೂಜುಕೋರ ವ್ಯಾಪಾರದ ಮೇಲೆ ನಿಷೇಧ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಏರಿಕೆಯನ್ನು ಹಿಂದಕ್ಕೆ ಪಡೆಯುವುದು ಬೆಲೆಗಳ ನಾಗಾಲೋಟವನ್ನು ತಡೆಯಲು ಮತ್ತು ಜನತೆಗೆ ಪರಿಹಾರ ಒದಗಿಸಲು ಅತ್ಯಂತ ಅನಿವಾರ್ಯವಾಗಿರುವ ಕ್ರಮಗಳು.

ಕಾಂಗ್ರೆಸ್–ಬಿಜೆಪಿ ಒಪ್ಪಿಕೊಂಡಿರುವ ನಿರ್ಣಯಕ್ಕೆ ಈ ತಿದ್ದುಪಡಿಯನ್ನು ಮಂಡಿಸುವ ಮೂಲಕ ಎಡಪಕ್ಷಗಳು ಈ ಕ್ರಮಗಳನ್ನು ಕೈಗೊಂಡು ಹೆಚ್ಚೆಚ್ಚು ಆರ್ಥಿಕ ಹೊರೆಗಳಿಂದ ನಲುಗಿ ಹೋಗಿರುವ 'ಆಮ್ ಆದ್ಮಿ'ಯನ್ನು ಕಾಪಾಡುವಂತೆ ಯುಪಿಎ–2 ಸರಕಾರದ ಮೇಲೆ ಒತ್ತಡವನ್ನು ಹಾಕುತ್ತವೆ. ಸಂಸತ್ತಿನ ಒಳಗಿನ ಈ ಹೋರಾಟಗಳಿಗೆ, ಸಂಸತ್ತಿನ ಹೊರಗೆ ಜನತೆಯ ಹೋರಾಟಗಳ ಮೂಲಕ ಬಲಗೂಡಿಸಬೇಕಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಎಡಪಕ್ಷಗಳು ಈ ಎರಡೂ ಹೋರಾಟಗಳನ್ನು ಅವಿರತವಾಗಿ ನಡೆಸಲು ಕಟಿಬದ್ಧವಾಗಿವೆ. ❁

ರೇಷನ್ ಬೇಕಾ? ಹಾಂಗಿದ್ರೆ ಬನ್ನೀ..

ಪುಟ 16 ರಿಂದ

ಆಯುಧವಾಗಿದ್ದೂ, ಪ್ರತಿ ವರ್ಷ ಹಸಿವಿನ ಸಾವುಗಳ ಸಂಖ್ಯೆ ಏರುತ್ತಲೇ ಇರುವುದು ಕೊಲೆಗಡುಕ ನೀತಿಗಳಲ್ಲವೇ? ಇಂತಹ ನೀತಿಗಳನ್ನು ಜಾರಿ ಮಾಡುವ ಕೊಲೆಗಡುಕರ ವಿರುದ್ಧ ಯಾವ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗುವುದಿಲ್ಲ. ಯಾಕೆಂದರೆ ರಕ್ತ ಹರಿಯದಲೇ ಗಾಯಗಳಾಗದಲೇ ಉಂಟಾಗುವ ಸಾವುಗಳಿಗೆ ಅಳತೆಯೇ ಮಾನದಂಡಗಳೇ ಇಲ್ಲವಾಗಿದೆ. ಜಗತ್ತಿನ ಅತ್ಯಂತ ದೊಡ್ಡ ದೌರ್ಜನ್ಯವಾಗಿರುವ ಹಸಿವು ಹೊಸ ಆರ್ಥಿಕ ನೀತಿಗಳಿಂದ ಜಗತ್ ವ್ಯಾಪ್ತಿಯಾಗಿ ವಿಸ್ತಾರಗೊಳ್ಳುತ್ತಿದೆ ಮತ್ತು ಬಲಗೊಳ್ಳುತ್ತಿದೆ.

ದೇಶದ ಅರ್ಧಕ್ಕರ್ಧ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಶೇ.33% ತಾಯಂದಿರು ಮಾತ್ರ ತಮ್ಮ ಮಕ್ಕಳಿಗೆ ಮೊಲೆ ಹಾಲು ಕುಡಿಸಲು ಶಕ್ತರಿದ್ದಾರೆ. ಶೇ.70% ಹಿರಿಯ ಹೆಚ್ಚು ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದು, ಶೇ.30% ವಯಸ್ಕರ ತೂಕ, ಅಗತ್ಯಕ್ಕಿಂತ ಕಡಿಮೆ ಇದೆ. 2004–05 ನ್ಯಾಷನಲ್ ಸ್ಯಾಂಪಲ್ ಸರ್ವೆಯ ಪ್ರಕಾರ ಶೇ.50% ಗ್ರಾಮೀಣ ಬಡ ಜನರು ಬಿಪಿಎಲ್ ರೇಷನ್ ಕಾರ್ಡ್‌ಗಳಿಂದ ವಂಚಿತರಾಗಿದ್ದು, ನಗರ ಪ್ರದೇಶಗಳಲ್ಲೂ ಇದೇ ಸ್ಥಿತಿ ಇದೆ.

ಬೆಲೆ ಏರಿಕೆಯಿಂದ ಮಧ್ಯಮವರ್ಗದವರೇ ತತ್ತರಿಸುತ್ತಿರುವಾಗ, ದಲಿತರ, ಬಡವರ ಅಸಂಘಟಿತ ಕಾರ್ಮಿಕರ ಪಾಡೇನು, ಬೆಂಗಳೂರಿನಲ್ಲಿ ಮಾಸಿಕ 8 ರಿಂದ 10 ಸಾವಿರ ದುಡಿಯುವವರೂ ನಿರ್ಗತಿಕರಂತೆ ಬದುಕಬೇಕಿದೆ. ಮಾಸಿಕ ಸಂಬಳದಲ್ಲಿ ಮನೆ ಬಾಡಿಗೆ, ಗ್ಯಾಸ್, ಕರೆಂಟು, ನೀರು, ಸಾರಿಗೆ, ಶಿಕ್ಷಣದ ವೆಚ್ಚಗಳನ್ನು ತೆಗೆದರೆ ಉಳಿಯುವುದಾದರೂ ಏನು? ಅದರಿಂದ ಕುಟುಂಬದ ಹಸಿವು ನೀಗೀತೇ ಎಂಬಂತಾಗಿದೆ. ಇಂತಹ ಸಂದರ್ಭದಲ್ಲಿ ಬೆಲೆ ಏರಿಕೆಯನ್ನು ನಿಯಂತ್ರಿಸಿ, ಆಹಾರದ ಖಾತ್ರಿಯನ್ನಾದರೂ ನೀಡಲು ವಿಚಾರ ಮಾಡಬೇಕಿದ್ದ ಕೇಂದ್ರ ಸರ್ಕಾರ ಇಡೀ ಸಂಸತ್ತು ಅಧಿವೇಶನದಲ್ಲಿ ಮಂಡನೆಯಾಗಲಿರುವ ಆಹಾರ ಭದ್ರತಾ ಕಾನೂನಿನಡಿ ಪಡಿತರ ಧಾನ್ಯದ ಬದಲಿಗೆ ಆಯಾ ಕುಟುಂಬದ ಬ್ಯಾಂಕ್ ಖಾತೆಗೆ ಒಂದಿಷ್ಟು ಹಣ ನೀಡುವ ಪ್ರಸ್ತಾಪವಿಡುತ್ತಿದೆ. ಮಾರುಕಟ್ಟೆಯ ಬೆಲೆಗಳನ್ನು ಗಗನಕ್ಕೇರಿಸಿ, ಒಂದಿಷ್ಟು ಹಣ ನೀಡಿ ಎಟುಕದಂತೆ ಮಾಡುವ ಈ ಪ್ರಸ್ತಾಪ ಹಸಿವಿನ ಸಾವುಗಳನ್ನು ತೀವ್ರಗೊಳಿಸುವುದಲ್ಲದೆ, ಬೇರೇನೂ ಅಲ್ಲ.

ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರದ ಲೋಕಾಯುಕ್ತರಿಂದ ನೇಮಕಗೊಂಡು, ಪಡಿತರ ವ್ಯವಸ್ಥೆಗೆ ಸಂಬಂಧಿಸಿದ, ವರದಿ ನೀಡಿದ್ದ ಆರ್.ಬಾಲ ಸುಬ್ರಮಣ್ಯಂ ಕಮಿಟಿಯ ವರದಿಯು ಆಳುವ ಸರ್ಕಾರಗಳಿಂದ ಅತ್ಯಂತ ಕ್ರೂರ ನಿರ್ಲಕ್ಷ್ಯವಾಗಿದೆ. ರೇಷನ್ ಕಾರ್ಡ್‌ದಾರರಿಗೆ ಕುಟುಂಬಕ್ಕೆ ಕನಿಷ್ಠ 29 ಕೆ.ಜಿ. ಅಕ್ಕಿ, 6 ಕೆ.ಜಿ. ಗೋಧಿ ನೀಡಬೇಕೆನ್ನುವ ಸುಪ್ರೀಂಕೋರ್ಟ್ ನಿರ್ದೇಶನವನ್ನು ರಾಜ್ಯ ಸರ್ಕಾರ ಉಲ್ಲಂಘಿಸಿರುವುದು ರಾಜ್ಯದ ಜನತೆಗೆ ಮಾಡಿದ ಮಹಾನ್ ದ್ರೋಹವಾಗಿದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಜಾರಿಯಲ್ಲಿರುವ ತಲೆಗೆ 4 ಕೆ.ಜಿ. ನೀಡುವ ಯೂನಿಟ್ ಪದ್ಧತಿ ಕಾನೂನು ಬಾಹಿರ/ ಅಕ್ರಮ ಎಂದು ವರದಿ ಹೇಳುತ್ತಿದೆ. ರಾಜ್ಯ ಸರ್ಕಾರದ ಬೇಜವಾಬ್ದಾರಿತನದಿಂದ ಮತ್ತು ಪಡಿತರ ವ್ಯವಸ್ಥೆಯಲ್ಲಿನ ಅವ್ಯವಸ್ಥೆ ಮತ್ತು ಭ್ರಷ್ಟಾಚಾರದಿಂದ ವಾರ್ಷಿಕ 1737.6 ಕೋಟಿ ಬೊಕ್ಕಸಕ್ಕೆ ನಷ್ಟವಾಗುತ್ತಿದ್ದೂ, ಕರ್ನಾಟಕ ರಾಜ್ಯದ ಪಡಿತರ ವ್ಯವಸ್ಥೆ ಅಕ್ರಮ ಮತ್ತು ಅವೈಜ್ಞಾನಿಕತೆಯಿಂದ ಕೂಡಿದೆ ಎಂದು ಗುರುತಿಸಿದೆ.

ಈ ವರದಿಗಳು 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಮರೆಯುತ್ತಿರುವ ಕೇಂದ್ರ ಯುಪಿಎ ಸರ್ಕಾರಕ್ಕಾಗಲಿ, ಅಕ್ರಮ ಗಣಿ ಹಗರಣದಲ್ಲಿ ಮುಳುಗಿರುವ ರಾಜ್ಯ ಬಿಜೆಪಿ ಸರ್ಕಾರಕ್ಕಾಗಲಿ ಹೇಗೆ ತಾನೇ ಅರ್ಥವಾದೀತು?



ವೇದರಾಜ ಎನ್.ಕೆ.

ಯುಪಿಎ-2 ಸರಕಾರವನ್ನು ಆವರಿಸಿರುವ ಹಗರಣಗಳಲ್ಲಿ ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ)ಯ ಪಾತ್ರ, ಅಂದರೆ ಯುಪಿಎ-2ರ ಅತ್ಯುಚ್ಚ ಪೀಠದ ಒಂದೊಂದಾಗಿ ಅನಾವರಣಗೊಳ್ಳುತ್ತಿದೆ. ಕಾಮನ್ವೆಲ್ತ್ ಕ್ರೀಡಾಕೂಟದ ಉಪಾಧ್ಯಕ್ಷ ಸ್ಥಾನದಲ್ಲಿರಬೇಕಾದವರನ್ನು ಅಧ್ಯಕ್ಷರಾಗಿ ಮಾಡಿ ಕ್ರೀಡಾಕೂಟದ ಸಂಘಟನೆಯ 'ಖಾಸಗೀಕರಣ'ದ ಮೂಲಕ ಹಗರಣ ನಡೆಯಿತೇ ಎಂಬ ಪ್ರಶ್ನೆ ಒಂದೆಡೆ ಎದ್ದಿದ್ದರೆ, ಇನ್ನೊಂದೆಡೆ 2ಜಿ ನೀಡಿಕೆಯಲ್ಲಿ ಅಕ್ರಮಗಳು ನಡೆಯುತ್ತಿರುವುದು ಗೊತ್ತಿದ್ದರೂ ತಮಗೇನೂ ಗೊತ್ತೇ ಇಲ್ಲ ಎಂದು ನಟಿಸಿದ್ದಾರೆಯೇ ಎಂಬ ಸಂದೇಹ ಇನ್ನಷ್ಟು ಬಲಗೊಂಡಿದೆ. ನಿಜ, ಪಿಎಂಒ ಇದನ್ನು 'ಬಲವಾಗಿ' ನಿರಾಕರಿಸಿದೆ.

- 2ಜಿ ಹಗರಣದಲ್ಲಿ ಆಪಾದಿತರು ತಮ್ಮ ರಕ್ಷಣೆಯಲ್ಲಿ ಹೊರಗೆಡಹುತ್ತಿರುವ ಸಂಗತಿಗಳು ಆಳುವ ವರ್ಗಗಳ ರಾಜಕಾರಣಿಗಳ ಸುತ್ತ ಮಾತ್ರವೇ ಅಲ್ಲ, ದೊಡ್ಡ-ದೊಡ್ಡ ಉದ್ಯಮಿಗಳ ಸುತ್ತಲೂ ಸಂದೇಹಗಳ ಉರುಳು ಬಿಗಿಯುತ್ತಿವೆ. ಎ.ರಾಜ ಅವರ ಸಂಸದೀಯ ಕ್ಷೇತ್ರದಲ್ಲಿರುವ ಆಸ್ಪತ್ರೆಗೆಂದು ಟಾಟಾ ಟ್ರಸ್ಟಿನ ಮೂಲಕ 20 ಕೋಟಿ ರೂ. ಕೊಡಲಾಗಿದೆ, ಇದು ವಾಸ್ತವವಾಗಿ ಲಂಚ ಎಂದು ಹಗರಣದಲ್ಲಿ ಆಪಾದಿತರಾಗಿರುವ ಸ್ವಾನ್ ಟೆಲಿಕಾಂನ ಪ್ರಾಯೋಜಕ ಶಾಹಿದ್ ಬಲ್ವಾ ಹೇಳಿದ್ದಾರೆ. ಇಲ್ಲ, ಚಿಕ್ಕಾಸೂ ಕೊಟ್ಟಿಲ್ಲ ಎಂದಿದ್ದಾರೆ ರತನ್ ಟಾಟಾ, ಆದರೆ ಆಸ್ಪತ್ರೆಗೆ ಹಣ ಕೊಡುವ ಮಾತು ನಡೆದದ್ದು ನಿಜ ಎಂದು ಪರೋಕ್ಷವಾಗಿ ಹೇಳಿದ್ದಾರೆ. ರಾಜ ಅವರ ಮಾಜಿ ಆಪ್ತ ಕಾರ್ಯದರ್ಶಿ ಆರ್.ಕೆ.ಚಂದೋಲಿಯ ಅವರು ನಿರಾ ರಾಡಿಯ ಮತ್ತು ಹಿಂದಿನ ಅಡಿಶನಲ್ ಆಪ್ತ ಕಾರ್ಯದರ್ಶಿ ಆಶೀರ್ವಾದಂ ಆಚಾರಿ ಟಾಟಾ ಗುಂಪು ಮತ್ತು ಕಲೈನಾರ್ ಟಿವಿ ನಡುವೆ ' ಪರೋಕ್ಷ ಡೀಲ್'ನಲ್ಲಿ ಭಾಗವಹಿಸಿದ್ದರು, ತಾನು ಸರ್ಕಾರದ ಸೇವಕನಷ್ಟೇ, ಮಂತ್ರಿಗಳ ಆದೇಶ ಪಾಲಿಸಿದ್ದೇನಷ್ಟೇ ಎಂದು ಹೇಳಿದ್ದಾರೆ.
- ಎಂಡೋಸಲ್ಫನ್ ಕೀಟನಾಶಕ ಯಾವುದೇ ಸಾರ್ವಜನಿಕ ಆರೋಗ್ಯಕ್ಕೆ ಅಪಾಯಕ್ಕೆ ಕಾರಣವಾಗುವ ಸಂಭವವಿಲ್ಲ ಎಂದು ಯುಪಿಎ-2 ಸರಕಾರ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಫಿಡವಿಟ್ ಸಲ್ಲಿಸಿದೆ ಹಾಗೂ ಈ ಕೀಟನಾಶಕದ ಉತ್ಪಾದನೆ ಮತ್ತು ಮಾರಾಟದ ಮೇಲೆ ನ್ಯಾಯಾಲಯ ವಿಧಿಸಿರುವ ತಾತ್ಕಾಲಿಕ ನಿಷೇಧವನ್ನು ತೆಗೆಯಬೇಕು ಎಂದು ಕೇಳಿದೆ. ಇದಕ್ಕೆ ಕಾಂಗ್ರೆಸಿನ ನೇತೃತ್ವದಲ್ಲಿರುವ ಕೇರಳದ ಯುಡಿಎಫ್ ಸರಕಾರವೇ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿದೆ. ಕಾಸರಗೋಡು ಜಿಲ್ಲೆಯ ಕೆಲವು ಪಂಚಾಯತುಗಳಲ್ಲಿ ಜನತೆ ಪಡುತ್ತಿರುವ ಪಾಡು, ಅನುಭವಿಸುತ್ತಿರುವ ನೋವುಗಳೇ ಈ ಕೀಟನಾಶಕದ ಅಪಾಯಕಾರೀ ಪರಿಣಾಮಗಳಿಗೆ ಸಾಕಷ್ಟು ಪುರಾವೆಗಳು ಎಂದು ಸ್ವತಃ ಕೇರಳದ ಕಾಂಗ್ರೆಸ್ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ.
- ಈ ನಡುವೆ ಯುಪಿಎ-2 ಸರಕಾರದ ವಿಶ್ವಾಸಘಾತಗಳ ನಡೆ ಮುಂದುವರೆದಿದೆ. ಜತೆಗೆ ಈ ವಾರ ಇನ್ನೊಂದು ರೈಲು ಅಪಘಾತವೂ ದಾಖಲಾಗಿದೆ. ಗುವಾಹಾಟಿ-ಬೆಂಗಳೂರು ಎಕ್ಸ್‌ಪ್ರೆಸ್ ಪಶ್ಚಿಮ ಬಂಗಾಲದ ಮಾಲ್ಡಾ ಬಳಿ ಇನ್ನೊಂದು ರೈಲಿಗೆ ಮುಖಾಮುಖಿ ಡಿಕ್ಕಿ ಹೊಡೆದು ಒಬ್ಬರು ಸತ್ತಿದ್ದಾರೆ, ಇನ್ನೂ ನಾಲ್ಕೈದು ಸಾವುಗಳು ಸಂಭವಿಸಬಹುದೆಂಬ ಭೀತಿಯಿದೆ ಎಂದು ಮಾಲ್ಡಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಹೇಳಿದ್ದಾರೆಂದು ವರದಿಯಾಗಿದೆ.

ಮುಂಗಾರು ಅಧಿವೇಶನದ ಅಜೆಂಡಾದಲ್ಲೂ ಮಹಿಳಾ ಮೀಸಲಾತಿ ಪ್ರಸ್ತಾಪವಿಲ್ಲ

ಕಳೆದ ಮಾರ್ಚ್ 9ರಂದು ರಾಜ್ಯಸಭೆಯಲ್ಲಿ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯ ಮಸೂದೆ ಅಂಗೀಕಾರಗೊಂಡದ್ದು ಯುಪಿಎ ಮತ್ತು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರಿಗೊಂದು ಪ್ರಮುಖ ವಿಜಯ ಎಂದು ಹೇಳಲಾಗಿತ್ತು. ಆದರೆ ಅದರ ನಂತರ ಸಂಸತ್ತಿನ ಮೂರು ಅಧಿವೇಶನಗಳು ನಡೆದರೂ ಇದುವರೆಗೆ ಸ್ವತಃ ಸೋನಿಯಾ ಗಾಂಧಿಯವರಿರುವ ಲೋಕಸಭೆಯಲ್ಲಿ ಅದನ್ನು ಮಂಡಿಸಿಯೇ ಇಲ್ಲ. 39 ದಿನಗಳ ಮುಂಗಾರು ಅಧಿವೇಶನದ ಅಜೆಂಡಾದಲ್ಲೂ ಅದರ ಪ್ರಸ್ತಾಪವಿಲ್ಲ. ಯಥಾ ಪ್ರಕಾರ ಈ ಮಸೂದೆಯ ಬಗ್ಗೆ ಒಮ್ಮತ ಇನ್ನೂ ಮೂಡಿಲ್ಲದಿರುವುದೇ ಇದಕ್ಕೆ ಕಾರಣ ಎಂದು ಯುಪಿಎ-2 ಸಂಸದೀಯ ವ್ಯವಹಾರಗಳ ಮಂತ್ರಿಗಳು ಸಮಜಾಯಿಷಿ ಕೊಡುವ ಪ್ರಯತ್ನ ನಡೆಸಿದ್ದಾರೆ. ಸರಕಾರ ಎಲ್ಲ ಮಸೂದೆಗಳಿಗೂ ಈ ರೀತಿ ಸರ್ವಸಮ್ಮತಿಗಾಗಿ ಕಾಯುತ್ತಲೇ ಇರುತ್ತದೆಯೇ ಎಂದು ಕಳೆದ ಒಂದು ದಶಕದಿಂದ ಕೇಳುತ್ತಲೇ ಇದ್ದರೂ ಯುಪಿಎ-2 ಸರಕಾರಕ್ಕೆ ಒಂದು ದಶಕದ ನಂತರವೂ ಅದೇ ಸಬೂಬು ಕೊಡುವಲ್ಲಿ ಯಾವ ಮುಜುಗರವೂ ಅಗುವಂತೆ ಕಾಣುತ್ತಿಲ್ಲ.


ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಇತರ ಮಹಿಳಾ ಸಂಘಟನೆಗಳು ಲೋಕಸಭಾಧ್ಯಕ್ಷರಿಗೆ ಒಂದು ಮನವಿ ಪತ್ರ ಸಲ್ಲಿಸಿ, ಇದು ಯುಪಿಎ-2 ಸರಕಾರ ಮತ್ತು ರಾಷ್ಟ್ರಪತಿಗಳು ನೀಡಿದ ವಚನದಲ್ಲಿ ವಿಶ್ವಾಸಘಾತ ಮಾತ್ರವೇ ಅಲ್ಲ, ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಪ್ರಹಾರ ಎಂದು ವರ್ಣಿಸಿವೆ. ಈ ವಿಷಯದಲ್ಲಿ ಒಮ್ಮತ ಎಂಬುದೊಂದು ಮರೀಚಿಕೆಯಾಗಿರುವಾಗ ಮತ್ತೆ-ಮತ್ತೆ ಇದೇ ಸಬೂಬು ಕೊಡುತ್ತಿರುವುದು ವಾಸ್ತವವಾಗಿ ರಾಜಕೀಯ ಇಚ್ಛಾಶಕ್ತಿಯ ಅಭಾವವನ್ನು ತೋರಿಸುತ್ತದೆ ಎಂದು ಅವು ಅಭಿಪ್ರಾಯ ವ್ಯಕ್ತಪಡಿಸಿವೆ. ರಾಜ್ಯಸಭೆಯಲ್ಲಿ ಈ ಮಸೂದೆಯ ಅಂಗೀಕಾರದ ನಂತರ ನಡೆದ ಐದು ರಾಜ್ಯಗಳ ಚುನಾವಣೆಗಳಲ್ಲಿ ಮಹಿಳೆಯರು ಗಳಿಸಲು ಸಾಧ್ಯವಾಗಿರುವುದು ಕೇವಲ 9% ಸ್ಥಾನಗಳನ್ನು ಮಾತ್ರ ಎಂದು ಈ ಮಹಿಳಾ ಸಂಘಟನೆಗಳು ಲೋಕಸಭಾಧ್ಯಕ್ಷರ ಗಮನಕ್ಕೆ ತಂದಿವೆ.

★

ಲೋಕಪಾಲ ಮಸೂದೆ: ಆಳುವ ಪಕ್ಷದ ಇನ್ನೊಂದು ವಿಶ್ವಾಸಘಾತ.

ಯುಪಿಎ-2 ಸರಕಾರ ದೇಶಾದ್ಯಂತ ಕಂಡು ಬಂದ ಆಗ್ರಹದ ಹಿನ್ನೆಲೆಯಲ್ಲಿ ಒಂದು ಪರಿಣಾಮಕಾರಿ ಲೋಕಪಾಲ ಮಸೂದೆಯನ್ನು ಮಳೆಗಾಲದ ಅಧಿವೇಶನದಲ್ಲಿ ಮಂಡಿಸುವುದಾಗಿ ಭರವಸೆ ನೀಡಿತ್ತು. ಆದರೆ ಈಗ ಕೇಂದ್ರ ಸಂಪುಟ ಅಂಗೀಕರಿಸಿರುವ, ಸಂಸತ್ತಿನಲ್ಲಿ ಮಂಡಿಸುತ್ತಿರುವ ಲೋಕಪಾಲ ಮಸೂದೆ ಈ ಭರವಸೆಯನ್ನು ಸಂಪೂರ್ಣ ಹುಸಿಗೊಳಿಸಿದೆ. ಇದು ದೇಶದಲ್ಲಿ ಭ್ರಷ್ಟಾಚಾರವನ್ನು ತಡೆಯುವ ಉದ್ದೇಶವನ್ನಂತೂ ಈಡೇರಿಸುವಂತಿಲ್ಲ. ಭ್ರಷ್ಟರನ್ನು ಶಿಕ್ಷಿಸುವ ಅಧಿಕಾರವೇ ಇಲ್ಲದ ಹಲ್ಲಿಲ್ಲದ ಮಸೂದೆ ಇದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಹೇಳಿದ್ದಾರೆ.

ಪ್ರಧಾನ ಮಂತ್ರಿಗಳನ್ನೂ ಈ ಕಾನೂನಿನ ವ್ಯಾಪ್ತಿಯೊಳಗೆ ತರಬೇಕೆಂಬ ಬೇಡಿಕೆಯನ್ನು ಸರಕಾರ ಮನ್ನಿಸಿಲ್ಲ. ಅವರು ಅಧಿಕಾರ ಬಿಟ್ಟ ಮೇಲೆ ಹಾಗೆ ಮಾಡಬಹುದೆಂದು ಸೇರಿಸಿರುವುದು ವಿರೋಧ ಪಕ್ಷಗಳಿಗೆ ಕೊಟ್ಟಿರುವ



ಕೃಪೆ: ದಿ ಹಿಂದೂ

ಒಂದು ರಿಯಾಯ್ತಿ ಎಂಬಂತೆ ಯುಪಿಎ-2 ಮಂತ್ರಿಗಳು ಮಾತಾಡುತ್ತಿದ್ದಾರೆ. ಈ ಹಿಂದೆ ಈ ಮಸೂದೆಯ ನಾಲ್ಕು ಕರಡುಗಳು ತಯಾರಾಗಿದ್ದರೂ ಅವು ಕಾನೂನಾಗಿ ಪರಿವರ್ತನೆಗೊಂಡಿಲ್ಲ. ಅವು ಯಾವುವೂ ಪ್ರಧಾನ ಮಂತ್ರಿಗಳಿಗೆ ವಿನಾಯ್ತಿ ಕೊಟ್ಟಿಲ್ಲ. ಕಾಂಗ್ರೆಸು 1989ರಲ್ಲಿ ಮತ್ತು 2001ರಲ್ಲೂ ಕೂಡ ಇದಕ್ಕೆ ಒಪ್ಪಿತ್ತು. ಆದರೆ ಈಗ ತನ್ನ ಮುಖಂಡರೊಬ್ಬರು ಪ್ರಧಾನ ಮಂತ್ರಿಗಳಾಗಿರುವಾಗ ಅದು ತನ್ನ ನಿಲುವನ್ನು ತಿರುವುಮುರುವುಗೊಳಿಸಿದೆ. ಈ ಕ್ರಮ ಸಂಸದೀಯ ಪ್ರಜಾಸತ್ತೆಯನ್ನು ಅಸ್ಥಿರಗೊಳಿಸುತ್ತದೆ ಎಂದು ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಹೇಳುತ್ತಿದ್ದಾರೆ.

★

ಕಾಮನ್ವೆಲ್ತ್ ಕ್ರೀಡಾಕೂಟ-ನೂರಾರು ಕೋಟಿ ರೂ.ಗಳ ನಷ್ಟ ದಿಲ್ಲಿ ಸರಕಾರ ಕಂಡ 'ರಾಷ್ಟ್ರೀಯ ಹಿತಾಸಕ್ತಿ'ಯಿಂದಾಗಿ!

ಭಾರತದ ಮಹಾಲೆಕ್ಕ ಪರಿಶೋಧಕರ (ಸಿಎಜಿ) ಕಚೇರಿಯಿಂದ ಇನ್ನೊಂದು ವರದಿ ಸರಕಾರದಿಂದಲೇ ದೇಶಕ್ಕೆ ನೂರಾರು ಕೋಟಿ ರೂ.ಗಳ ನಷ್ಟವಾಗಿರುವ ಇನ್ನೊಂದು ಪ್ರಕರಣವನ್ನು ಬಯಲಿಗೆಳೆದಿದೆ. ಕಾಮನ್ವೆಲ್ತ್ ಕ್ರೀಡಾಕೂಟದ ನಿರ್ವಹಣೆಯ ಲೆಕ್ಕ ಪರಿಶೋಧನೆಯ ವರದಿಯದು.

"ಸರಿಯಾದ ಪರಿಕಲ್ಪನೆಯಿಲ್ಲದ, ಯೋಜನೆಯಿಲ್ಲದ" ಪ್ರಾಜೆಕ್ಟುಗಳು, "ಬೇಕಾಬಿಟ್ಟಿಯಾಗಿ ಮತ್ತು ಪಾರದರ್ಶಕತೆಯಿಲ್ಲದ ರೀತಿಯಲ್ಲಿ ಸಲಹಾಗಾರರ ಆಯ್ಕೆ" ಮತ್ತು "ವಿಪರೀತ ದರಗಳಲ್ಲಿ ಕಾಂಟ್ರಾಕ್ಟುಗಳ ನಿರ್ವಹಣೆ"ಯಿಂದಾಗಿ ಸಾರ್ವಜನಿಕ ಖಜಾನೆಗೆ ನೂರಾರು ಕೋಟಿ ರೂ.ಗಳ ನಷ್ಟವನ್ನು ದಿಲ್ಲಿಯ ಕಾಂಗ್ರೆಸ್ ಸರಕಾರ, ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಮತ್ತು ಇನ್ನು ಕೆಲವು ಮಂತ್ರಿಗಳು ಮಾಡಿದ್ದಾರೆ ಎಂದು ವರದಿ ಟೀಕಿಸಿರುವುದಾಗಿ ತಿಳಿದು ಬಂದಿದೆ. ಈ ವರದಿಯನ್ನು ಪ್ರಸಕ್ತ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸಲಾಗುವುದು.

ಸಿಎಜಿ ಗಮನಿಸಿರುವ ಕೆಲವು ಅಂಶಗಳು ಹೀಗಿವೆ:

- ಕಿ.ಮೀ.ಗೆ 4.8 ಕೋಟಿ ರೂ. ದರದಲ್ಲಿ ಕೊಟ್ಟ ಕಾಂಟ್ರಾಕ್ಟುಗಳಿಂದಾಗಿ ಸಾರ್ವಜನಿಕ ನಿಧಿಗಳಿಗೆ 101.02 ಕೋಟಿರೂ.ಗಳ ನಷ್ಟ ಸಂಭವಿಸಿದೆ.
- ಮನಬಂದಂತೆ ವಿಧಿಸಿದ ಶ್ರೀಮಂತ ತಪಸೀಲುಗಳಿಂದಾಗಿ 51.33 ಕೋಟಿ ರೂ. ಹೆಚ್ಚಿನ ಖರ್ಚು ತಗಲುವಂತಾಯಿತು. ಇದನ್ನು ತಪ್ಪಿಸಬಹುದಾಗಿತ್ತು.
- ದಿಲ್ಲಿಯ 800 ಕಿ.ಮೀ.ನಷ್ಟು ರಸ್ತೆಗಳ ದೀಪಗಳ ವ್ಯವಸ್ಥೆಯ ಆಧುನೀಕರಣದಲ್ಲಿ 31.07 ಕೋಟಿ ರೂ.ಗಳಷ್ಟು ಅಧಿಕ ಖರ್ಚು ಮಾಡಲಾಗಿದೆ. ಸ್ಥಳೀಯ ದೀಪ ವ್ಯವಸ್ಥೆಗಳಿಗಿಂತ ವಿಪರೀತ ದುಬಾರಿಯಾದ ಆಮದಾದ ವ್ಯವಸ್ಥೆಗಳನ್ನು ಬಳಸುವ ಅಗತ್ಯವಿರಲಿಲ್ಲ.
- ದಿಲ್ಲಿ ಸರಕಾರ ಕೈಗೊಂಡ 25 ರಸ್ತೆ ಮತ್ತು ಸೇತುವೆ ಪ್ರಾಜೆಕ್ಟುಗಳಲ್ಲಿ ಏಳರ ಪರಿಶೋಧನೆ ನಡೆಸಿದ ಸಿಎಜಿಗೆ ಪ್ರತಿಯೊಂದರಲ್ಲೂ ಕಾಂಟ್ರಾಕ್ಟರುಗಳ ಲಾಭ ಮತ್ತು ಮೇಲು

ಪುಟ 15ಕ್ಕೆ

ಜಗದಗಲ


ಶರತ್‌ಚಂದ್ರ

"ಭಯೋತ್ಪಾದಕರೆಲ್ಲಾ ಮುಸ್ಲಿಮರಲ್ಲ.."

"ಮುಸ್ಲಿಮರೆಲ್ಲಾ ಭಯೋತ್ಪಾದಕರಲ್ಲ. ನಿಜ. ಆದರೆ ಭಯೋತ್ಪಾದಕರೆಲ್ಲಾ ಮುಸ್ಲಿಮರು". ಇದು 9/11 (ಸೆಪ್ಟೆಂಬರ್ 11, 2001) ಎಂದು ಕರೆಯಲಾಗುವ ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ಭೀಕರ ಭಯೋತ್ಪಾದಕ ದಾಳಿ ನಂತರ ಜನಜನಿತವಾದ ಹೇಳಿಕೆ. ಬುಶ್ ರಿಂದ ಪ್ರಮೋದ್ ಮುತಾಲಿಕ್ ವರೆಗೆ ಘಂಟಾಘೋಷವಾಗಿ ಇದನ್ನು ಹೇಳುತ್ತಿದ್ದರೆ, ಒಬಾಮಾರಿಂದ ಚಿದಂಬರಂ ವರೆಗಿನ ಇನ್ನೊಂದು ವಿಭಾಗ ಹಾಗೆ ಹೇಳದಿದ್ದರೂ ಅದನ್ನೇ ನಂಬಿದವರಂತೆ ಆಡುತ್ತಿದ್ದರು. ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಯಾವ ಭಯೋತ್ಪಾದಕ ಚಟುವಟಿಕೆ ನಡೆದರೂ, ಅದು ಜಿಹಾದಿ (ಮುಸ್ಲಿಂ ಮೂಲಭೂತವಾದಿ) ಗಳ ಕೆಲಸ ಅಂತ ಪೋಲಿಸರು ಅಮಾಯಕ ಮುಸ್ಲಿಂ ಯುವಕರನ್ನು ಬಂಧಿಸಿ ಹಿಂಸಿಸುತ್ತಿದ್ದರು. ಆದರೆ ಇತ್ತೀಚೆಗೆ "ಭಯೋತ್ಪಾದಕರೆಲ್ಲಾ ಮುಸ್ಲಿಮರಲ್ಲ..." ಎಂಬ ಸತ್ಯ ಎಲ್ಲರಿಗೂ ಅರಿವಾಗ ಹತ್ತಿದೆ. ಕ್ರಿಶ್ಚಿಯನ್, ಜ್ಯೂ ಮತ್ತು ಹಿಂದೂ ಮೂಲಭೂತವಾದಿ ಭಯೋತ್ಪಾದಕರು ದೊಡ್ಡ ಪ್ರಮಾಣದಲ್ಲಿ ಘೋರ ಕೃತ್ಯಗಳನ್ನು ಎಸಗಿದ್ದಾರೆ, ಎಸಗುತ್ತಿದ್ದಾರೆ ಎಂದು ಬೆಳಕಿಗೆ ಬಂದಿದೆ.

ಇತ್ತೀಚೆಗೆ ನಾರ್ವೆಯ ರಾಜಧಾನಿ ಒಸ್ಲೋದಲ್ಲಿ ಬಾಂಬ್ ದಾಳಿ ಮತ್ತು ಗುಂಡಿನ ದಾಳಿಯಲ್ಲಿ 91 ಜನರ ನರಮೇಧ ನಡೆದಾಗಲೂ, ಪೋಲಿಸರು ಅರಬ್ ಅಥವಾ ಏಶ್ಯಾ ಚಹರೆಯ ವ್ಯಕ್ತಿಯನ್ನು ಹುಡುಕಲಾರಂಭಿಸಿದ್ದರು. ಬ್ರಿಟಿಷ್ ಅಮೆರಿಕನ್ ಪತ್ರಿಕೆ ಟಿವಿ ಚಾನೆಲುಗಳು, ಹಲವು ಅಂತರ್‍ರಾಷ್ಟ್ರೀಯ ಸುದ್ದಿ ಸಂಸ್ಥೆಗಳು ನಾರ್ವೆ ಪೋಲಿಸರು ಯಾವುದೇ ತನಿಖೆ ಮಾಡುವ, ಹೇಳಿಕೆ ಕೊಡುವ ಮೊದಲೇ, ಈ ಘೋರ ಕೃತ್ಯದಲ್ಲಿ "ಅಲ್ ಖೈದಾದ ಜಿಹಾದಿ"ಗಳ ಸ್ಟಾಂಪ್ ಇದೆ ಎಂದು ಸಾರಿದ್ದರು. ಈ ಘೋರ ಕೃತ್ಯ ಎಸಗಿದವ ಒಬ್ಬ ಹೊಂಗೂದಲಿನ ನಾರ್ವೆಯ ಮಧ್ಯಮ ವರ್ಗದ "ಸಭ್ಯ" ಬಿಳಿ ಯುವಕ ಎಂದು ತಿಳಿದಾಗ ನಾರ್ವೆಯ ಪೋಲೀಸರಿಗೂ ಶಾಕ್ ಆಗಿತ್ತು. ಆತ ನಾರ್ವೇ ಕೇಂದ್ರ ಸರ್ಕಾರದ ಕಟ್ಟಡ ಸಂಕೀರ್ಣವೊಂದರಲ್ಲಿ ಭಾರೀ ಬಾಂಬು ಸಿಡಿಸಿ, ನಾರ್ವೆಯ ಆಳುವ ಲೇಬರ್ ಪಕ್ಷದ ಯುವ ಸಂಘಟನೆ ಬೇಸಗೆ ಕ್ಯಾಂಪೊಂದು ನಡೆಯುತ್ತಿದ್ದ ದ್ವೀಪವೊಂದಕ್ಕೆ ಹೋಗಿ ಹುಚ್ಚಾಪಟ್ಟೆ ಗುಂಡು ಹಾರಿಸಿ ನರಮೇಧ ನಡೆಸಿದ್ದ. ಬಾಂಬ್ ದಾಳಿಯಲ್ಲಿ 7 ಜನ ಸತ್ತರೆ, 84 ಕ್ಕೂ ಹೆಚ್ಚು ಜನ ಬೇಸಗೆ ಕ್ಯಾಂಪಿನ ನರಮೇಧದಲ್ಲಿ ಸತ್ತಿದ್ದರು.

ಹೆಚ್ಚಿನ ತನಿಖೆ ನಂತರ ಕೊಲೆಗಡುಕ ಆಂಡರ್ಸ್ ಬೆಹ್ರಿಂಗ್ ಬ್ರೆವಿಕ್ ನ ಬಗ್ಗೆ ವಿವರಗಳು ಬರಲಾರಂಭಿಸಿದಾಗ, ಆತ ಕೆಲವು ಮಾಧ್ಯಮಗಳು ಹೇಳುವಂತೆ ಹುಚ್ಚನಲ್ಲ . ಆತ ನಡೆಸಿದ ನರಮೇಧ ಉದ್ದೇಶಪೂರ್ವಕವಾಗಿ



ನಡೆಸಿದ ರಾಜಕೀಯ ಕೃತ್ಯ. ಆತ ಹತ್ತು ವರ್ಷಗಳ ಕಾಲ ನಾರ್ವೆಯ ಬಲಪಂಥೀಯ ಜನಾಂಗವಾದಿ ಪಕ್ಷದ ಯುವ ಸಂಘಟನೆಯ ಸದಸ್ಯನಾಗಿದ್ದವ. 9/11 ರ ನಂತರ ಹಲವು ಉಗ್ರಗಾಮಿ ಬಲಪಂಥೀಯ ಸಂಘಟನೆಗಳು ಇಸ್ಲಾಮಿಕ್-ಭೀತಿಯ ರೋಗಪೀಡಿತರಾಗಿದ್ದು ಅದನ್ನು ಹರಡುತ್ತಿದ್ದರು. ಬ್ರೆವಿಕ್ ಗೂ ಇದೇ ರೋಗ. ಆತನ ಮಿತಿ ಮೀರಿದ ಇಸ್ಲಾಂ-ಭೀತಿ ಈ ಘೋರ ಕೃತ್ಯಕ್ಕೆ ಎಡೆ ಮಾಡಿದೆ. ಆತ ಬರೆದ ಸಾವಿರ ಪುಟದ ಪುಸ್ತಕವೊಂದು ಆತನ ವೆಬ್ ಸೈಟಿನಲ್ಲಿ ಸಿಕ್ಕಿದ್ದು, ಅದರಿಂದ ಆತನ ಭಯೋತ್ಪಾದಕ ಹಿಂಸಾತ್ಮಕ ಅಜೆಂಡಾ, ಉಗ್ರಗಾಮಿ ಬಲಪಂಥೀಯ ವಿಚಾರಗಳು ಸ್ಪಷ್ಟವಾಗಿವೆ. ಆತ ಅಮೆರಿಕನ್ ಟೀ ಪಾರ್ಟಿ, ಇಸ್ರೇಲಿ ಝಿಯೋನಿಸ್ಟರ ಮತ್ತು ಆರೆಸ್ಸೆಸ್ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತ ಪಡಿಸಿದ್ದಾನೆ. ಅವು ತನಗೆ ಸ್ಫೂರ್ತಿ ಎಂತಲೂ, ಅವರ ಜತೆ ತನಗೆ ಕನೆಕ್ಷನ್ ಇರುವುದಾಗಿಯೂ ಹೇಳಿದ್ದಾನೆ. ಹಲವು ಸಾಕ್ಷಿಗಳ ಪ್ರಕಾರ ಮತ್ತು ಸನ್ನಿವೇಶದ ಪುರಾವೆಗಳಿಂದ ಆತ ಒಬ್ಬನೇ ಈ ಘೋರ ಕೃತ್ಯ ಎಸಗಿರಲಿಕ್ಕಿಲ್ಲ. ಆತನಿಗೆ ಸಹಚರರು ಇದ್ದರು. ಇದು ಒಂದು ವ್ಯವಸ್ಥಿತ ಪಿತೂರಿ ಆಗಿರುವ ಎಲ್ಲಾ ಸಾಧ್ಯತೆಗಳೂ ಇವೆ. ಆಳುವ ಲೇಬರ್ ಪಕ್ಷ ಮುಸ್ಲಿಂ ವಲಸೆಗಾರರ ಮೇಲೆ ದೃಢ ಕ್ರಮ ಕೈಗೊಳ್ಳುತ್ತಿಲ್ಲ ಎಂಬ ಕಾರಣಕ್ಕಾಗಿ ಮತ್ತು ಅಂತಹ ಕ್ರಮ ಕೈಗೊಳ್ಳುವಂತೆ ಎಚ್ಚರಿಸಲು, ಅದರ ಸರ್ಕಾರದ ಕಟ್ಟಡಗಳ ಮತ್ತು ಅದರ ಯುವ ಸಂಘಟನೆಯ ಕ್ಯಾಂಪಿನ ಮೇಲೆ ಹಿಂಸಾತ್ಮಕ ದಾಳಿ ನಡೆಸಿದ್ದಾನೆ.

ಯುರೋಪಿನಲ್ಲಿ ಜನಾಂಗವಾದಿ ಉಗ್ರಗಾಮಿ ಬಲಪಂಥೀಯರು, ಜನಾಂಗೀಯ ಮತ್ತು ಪ್ರತ್ಯೇಕತಾವಾದಿ ರಾಷ್ಟ್ರೀಯವಾದಿಗಳ ಭಯೋತ್ಪಾದನೆ ಚಟುವಟಿಕೆ ಹೆಚ್ಚಾಗುತ್ತಿದ್ದು, ಆ ಬಗ್ಗೆ ಸರ್ಕಾರಗಳು ಹೆಚ್ಚು ನಿಗಾ ಇಡದ್ದರಿಂದ ಅವುಗಳ ಪ್ರಭಾವ, ಧೈರ್ಯ ಹೆಚ್ಚುತ್ತಿದೆ. 2006 ರಲ್ಲಿ ಯುರೋಪಿನಲ್ಲಿ ನಡೆದ 498 ಭಯೋತ್ಪಾದಕ ಕೃತ್ಯಗಳಲ್ಲಿ ಕೇವಲ ಒಂದು ಜಿಹಾದಿಗಳ ಕೃತ್ಯ. 2007 ರಲ್ಲಿ 583 ಭಯೋತ್ಪಾದಕ ಕೃತ್ಯಗಳಲ್ಲಿ ಕೇವಲ ನಾಲ್ಕು ಜಿಹಾದಿಗಳ ಕೃತ್ಯ. ಆದರೂ ಜಿಹಾದಿಗಳ ಬೆದರಿಕೆ ವಿಪರೀತವಾಗಿ ಹೆಚ್ಚಿದೆ ಎಂದು ಹೇಳಿ ಆ ಬಗ್ಗೆ ಹೆಚ್ಚಿನ ಗಮನ ಹರಿಸಿ, ಜನಾಂಗವಾದಿ ಮತ್ತು ಪ್ರತ್ಯೇಕತಾವಾದಿ ರಾಷ್ಟ್ರೀಯವಾದಿ ಉಗ್ರಗಾಮಿಗಳ ಚಟುವಟಿಕೆಯ ಬೆದರಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಅಮೆರಿಕದಲ್ಲೂ ಇದೇ ರೀತಿ 9/11 ಬಿಟ್ಟರೆ ಅತಿ ದೊಡ್ಡ ಭಯೋತ್ಪಾದಕ ಕೃತ್ಯ ನಡೆಸಿದ್ದು ಟಿಮೊತಿ ಮೆಕ್ವೆಗ್ ಎಂಬ ಬಲಪಂಥೀಯ ಉಗ್ರಗಾಮಿ. ಒಕ್ಲಾಹಾಮ ಸಿಟಿಯ ಕೇಂದ್ರ ಸರ್ಕಾರದ ಕಟ್ಟಡಗಳ ಸಂಕೀರ್ಣದ ಮೇಲೆ ಮಾಡಿದ ದಾಳಿಯಲ್ಲಿ 168 ಜನ ಸತ್ತು 680 ಕ್ಕೂ ಹೆಚ್ಚು ಜನ ತೀವ್ರವಾಗಿ ಗಾಯಗೊಂಡಿದ್ದರು. ಅಮೆರಿಕದ ಮಿಲಿಟರಿಯಲ್ಲಿದ್ದ ಟಿಮೊತಿ ನಡೆಸಿದ ಭಯೋತ್ಪಾದಕ ಕೃತ್ಯದಲ್ಲಿ 324 ಹತ್ತಿರದ ಕಟ್ಟಡಗಳ ನಾಶ ಮಾಡಿ 63 ಕೋಟಿ ಡಾಲರಿನಷ್ಟು ನಷ್ಟ ಆಗಿತ್ತು. ಟಿಮೊತಿ ಸಹ ಬಲಪಂಥೀಯ ಉಗ್ರಗಾಮಿ ಸಂಘಟನೆಯ ಸದಸ್ಯನಾಗಿದ್ದು, ಈ ಸಂಘಟಿತ ಪಿತೂರಿ ಬಗ್ಗೆ ತನಿಖೆ ನಡೆಯಲಿಲ್ಲ.

ಬ್ರಿಟನಿನ ಅರೆ-ಫ್ಯಾಸಿಸ್ಟ್ ನೇಶನಲ್ ಪಾರ್ಟಿಯ ಸದಸ್ಯರು ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಸಂಗ್ರಹಿಸಿದ ಬಳಸಿದ ಹಲವು ಆಪಾದನೆಗಳಿಗೆ ಗುರಿಯಾಗಿದ್ದರೂ, ನಿರ್ಣಾಯಕ ಕ್ರಮ ಕೈಗೊಂಡಿಲ್ಲ. ಹಲವು ಸಂದರ್ಭಗಳಲ್ಲಿ ಮುಸ್ಲಿಂ ನಾಗರಿಕರ ಮೇಲೆ, ಅವರ ಮಸೀದಿ ಆಸ್ತಿ-ಪಾಸ್ತಿ ಮೇಲೆ ನಿಜವಾಗಿಯೂ ದಾಳಿ ಮಾಡಿದ್ದರೂ ಅದನ್ನು ನಿರ್ಲಕ್ಷ ಮಾಡಲಾಗುತ್ತಿದೆ. ನಮ್ಮ ದೇಶದಲ್ಲೂ ಇದೇ ನಡೆಯುತ್ತಿರುವುದನ್ನು ನೋಡಬಹುದು. ಮಲೆಗಾಂವ್ ಸ್ಫೋಟ, ಇತರ ಹಲವು ಮಸೀದಿ ಸ್ಫೋಟಗಳಲ್ಲಿ ಮತ್ತು ಸಮಜೌತಾ ಎಕ್ಸಪ್ರೆಸ್ ದಾಳಿಯಲ್ಲಿ ಹಿಂದೂ ಮೂಲಭೂತವಾದಿ ಭಯೋತ್ಪಾದಕರ (ಅಭಿನವ ಭಾರತ ಮತ್ತು ಸಂಘ ಪರಿವಾರದ) ಸಂಘಟಿತ ಕೈವಾಡಕ್ಕೆ ಸಾಕಷ್ಟು ಪುರಾವೆ ಸಿಕ್ಕಿದ್ದರೂ, ಅದರ ವಿರುದ್ಧ ಕ್ರಮದಲ್ಲಿ ಧೃಢತೆ ಕಾಣುತ್ತಿಲ್ಲ. ಇಸ್ರೇಲು ಎಂಬ ದೇಶ ಹುಟ್ಟಿದ್ದೇ ಜ್ಯೂ ಮೂಲಭೂತವಾದದ ಆಧಾರದ ಮೇಲೆ. ಭಯೋತ್ಪಾದನೆ ಇಸ್ರೇಲಿ ಪ್ರಭುತ್ವದ ಅಧಿಕೃತ ನೀತಿ ಆಗಿದೆ. ಪ್ಯಾಲೆಸ್ಟನ್ನರ ಮತ್ತು ಇತರ ಅರಬ್ ದೇಶಗಳ ಜನತೆಯ ಮೇಲೆ ಭಯೋತ್ಪಾದಕ ದಾಳಿಗಳನ್ನು ಇಸ್ರೇಲಿ ಪ್ರಭುತ್ವ ಮತ್ತು ಉಗ್ರಗಾಮಿ ಸಂಘಟನೆಗಳು ನಡೆಸುತ್ತಾ ಬಂದಿವೆ. ◎

ಇಸ್ರೇಲಿಗೂ ಬಂತು "ಅರಬ್ ವಸಂತ" ?

ಯುರೋಪು ಅಮೆರಿಕಗಳಂತೆ ಇಸ್ರೇಲ್ ಪ್ರಜಾಪ್ರಭುತ್ವ ಇರುವ ಅಭಿವೃದ್ಧ ದೇಶ ಎಂಬುದು ಸಾಮಾನ್ಯ ಅನಿಸಿಕೆ. ಆದರೆ ಕಳೆದ ವಾರ ನಡೆದ ಭಾರಿ ಪ್ರತಿಭಟನೆ ಚಳುವಳಿ ತೋರಿಸಿದ್ದೇ ಬೇರೆ. ಪ್ರಜಾಪ್ರಭುತ್ವ ಬರಿಯ ಚುನಾವಣೆಗಳಿಗೆ ಸೀಮಿತವಾಗಿದೆ. ಸಾಮಾನ್ಯ ನಾಗರಿಕರು ತಮ್ಮ ಅಹವಾಲು ಯಾರು ಕೇಳುತ್ತಿಲ್ಲ ಎಂದು ಬೀದಿಗಿಳಿಯುವಂತೆ ಆಗಿದೆ. ಟುನಿಶಿಯಾದಿಂದ ಈಜಿಪ್ಟ್ ವರೆಗೆ ಕಂಡು ಬಂದ "ಅರಬ್ ವಸಂತ" ಎಂದು ಕರೆಯಲಾಗುವ ಚಳುವಳಿ ನಮಗೆ ಸ್ಫೂರ್ತಿ ಎಂದು ಪ್ರತಿಭಟನಾಕಾರರ ವಕ್ತಾರರು ಹೇಳಿದ್ದಾರೆ. ರಾಜಧಾನಿ ಟೆಲ್ ಅವಿವ್ ಸೇರಿದಂತೆ ಇಸ್ರೇಲಿನ ನಗರಗಳಲ್ಲಿ "ಟೆಂಟ್ ಪ್ರತಿಭಟನೆ" ಎಂಬ ವಿಶಿಷ್ಟ ಪ್ರತಿಭಟನೆ ವ್ಯಾಪಕವಾಗಿ ಕಂಡು ಬಂದಿದೆ. ವಗರಗಳ ಪ್ರಮುಖ ಚೌಕಗಳಲ್ಲಿ (ಹಲವು ಕಡೆ ರೋಡು ಬ್ಲಾಕು ಆಗುವಂತೆ) ಟೆಂಟುಗಳನ್ನು ಹಾಕಿ ಅಲ್ಲಿ ವಾಸಿಸಿ ವಿಶಿಷ್ಟ ಪ್ರತಿಭಟನೆ ತೋರಿದರು. ಇಂತಹ ಸಾವಿರಾರು ಟೆಂಟುಗಳು ಇಸ್ರೇಲಿನ ಆದ್ಯಂತ ಕಾಣಿಸಿಕೊಂಡಿವೆ. "ಟೆಂಟ್ ನಗರ"ಗಳೇ ಕಾಣಿಸಿಕೊಂಡಿವೆ. ಸುಮಾರು ಒಂದು ವರೆ ಲಕ್ಷ ಜನ ಮನೆ ಬಾಡಿಗೆಯ ತೀವ್ರ ಏರಿಕೆ ವಿರುದ್ಧ ಪ್ರತಿಭಟಿಸಿದರು. "ನಮಗೆ ಸಾಮಾಜಿಕ ನ್ಯಾಯ ಬೇಕು", "ಮನೆಬಾಡಿಗೆ ಇಳಿಯಲಿ", "ಬಿಬಿ ಮನೆಗೆ ಹೋಗು" (ಬಿಬಿ ಪ್ರಧಾನಿ ನೆತನ್ಯಾಹುಗೆ ಅಡ್ಡ ಹೆಸರು) - ಪ್ರತಿಭಟನಾ ಪ್ರದರ್ಶನಗಳಲ್ಲಿ ಕೇಳಿ ಬಂದ ಕೆಲವು ಘೋಷಣೆಗಳು.

ಇಸ್ರೇಲಿನಲ್ಲಿ ಕಂಡು ಬಂದ ಅತಿ ದೊಡ್ಡ

ಪುಟ 15ಕ್ಕೆ

ಇರಾನ್ ತೈಲ ನಿರಾಕರಣೆ

ಪುಟ 5 ರಿಂದ

ವುಣೆದಿದ್ದರೂ, ಆ ಯೋಜನೆಯನ್ನು ಕೈಬಿಟ್ಟಿರುವ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿಲ್ಲ. ಎರಡು ವರ್ಷಕ್ಕೂ ಹೆಚ್ಚು ಕಾದ ಪಾಕಿಸ್ತಾನ ಹಾಗೂ ಇರಾನ್, ಆ ಯೋಜನೆಯನ್ನು ಮುಂದುವರಿಸಲು ಮುಂದಾಗಿವೆ. ಪಾಕಿಸ್ತಾನದ ಗಡಿಯವರೆಗೂ ಇರಾನ್ ಅನಿಲ ಕೊಳವೆಯನ್ನು ಜೋಡಿಸಿದೆ. ಅಮೆರಿಕಾದ ಮಾತು ಕೇಳಿಕೊಂಡು ಭಾರತವೀಗ ತುರ್ಕ್‌ಮೆನಿಸ್ತಾನ-ಆಫಘಾನಿಸ್ತಾನ-ಪಾಕಿಸ್ತಾನ-ಭಾರತ(ಟಿಎಪಿಐ-ಟಾಪಿ) ಅನಿಲ ಕೊಳವೆಮಾರ್ಗ ಯೋಜನೆಗೆ ಒಪ್ಪಿಗೆ ನೀಡಿದೆ. ಐಎಇಎ ನಲ್ಲಿ ಮತ ಹಾಕಿದ್ದರ ಪರಿಣಾಮವಾಗಿ ಇರಾನಿನೊಡನೆ ದ್ರವೀಕೃತ ನೈಸರ್ಗಿಕ ಅನಿಲ ಖರೀದಿಸುವ 25 ವರ್ಷಗಳ ಒಪ್ಪಂದ ಮುರಿದು ಬಿತ್ತು. ಇರಾನಿನಲ್ಲಿನ ಭಾರತೀಯ ವಾಣಿಜ್ಯ ಯೋಜನೆಗಳು ಒಂದೊಂದಾಗಿ ಕೈಬಿಡುತ್ತಾ ಬಂದವು. ಅಮೆರಿಕದ ಬೆದರಿಕೆಯಿಂದಾಗಿ ಇರಾನಿಗೆ ಕಳಿಸಬೇಕಾಗಿದ್ದ 280 ಮಿಲಿಯನ್ ಡಾಲರ್ ಮೌಲ್ಯದ ಪೆಟ್ರೋಲ್ ರಫ್ತನ್ನು ರಿಲಯನ್ಸ್ ಕಂಪನಿಯು ನಿಲ್ಲಿಸಿತು.

ಅಂತಿಮವಾಗಿ, ಇರಾನ್ ಜತೆಗಿನ ಬಹು ದೊಡ್ಡ ವಾಣಿಜ್ಯ ಅಂಶವಾದ ತೈಲ ಆಮದು ನಿಂತೇ ಹೋಗುವ ಹಂತ ತಲುಪಿದೆ.

ಅಮೆರಿಕಾಕ್ಕೆ ಮೊರೆ ಹೋದ ಭಾರತ

ಪ್ರಾಸಂಗಿಕವಾಗಿ, ಕಳೆದ ವಾರದ ಪತ್ರಿಕೆಗಳಲ್ಲಿ ಒಂದು ಕುತೂಹಲಕಾರಿ ಸುದ್ದಿಯೊಂದು ಅಮೆರಿಕದ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಣಿಸಿಕೊಂಡಿತ್ತು. ಭಾರತ-ಇರಾನ್ ನಡುವಿನ ಕಚ್ಚಾ ತೈಲ ಆಮದು ಕುರಿತ ಏಳು ತಿಂಗಳ ಹಿಂದಿನ ಹಣ ಸಂದಾಯ ವಿವಾದ 'ಇತ್ಯರ್ಥವಾಗಲಿದೆ' ಎಂದು ಹಿಲರಿ ಚನ್ನೈನಲ್ಲಿ ತಂಗಿದ್ದಾಗ ಹಿಲರಿ ಅವರ ಜತೆ ಬಂದಿದ್ದ ಅಮೆರಿಕದ ಅಧಿಕಾರಿಯೊಬ್ಬ ಹೇಳಿದ ಎಂದು ವರದಿಯಾಗಿತ್ತು. 'ಅಮೆರಿಕ ಸರ್ಕಾರದ ಖಜಾನೆ ಇಲಾಖೆಯು ಭಾರತದ ಅಧಿಕಾರಿಗಳೊಂದಿಗೆ ಈ ಕುರಿತು ಮಾತುಕತೆ ನಡೆಸುತ್ತಿದೆ' ಎಂದು ಅವನು ಹೇಳಿದ. ಈ ವಿವಾದ ಇತ್ಯರ್ಥಪಡಿಸಲು ದೊಡ್ಡಣ್ಣನ ಸಹಾಯವನ್ನು ಭಾರತ ಕೇಳಿದೆ ಎಂಬ ಸತ್ಯ ಇದರಿಂದ ಹೊರಗೆ ಬಿತ್ತು. ಇರಾನಿನಿಂದ ತೈಲ ಪೂರೈಕೆಯನ್ನು ಹಾಳುಗೆಡವಿದ ಹೊಣೆ ಅಮೆರಿಕದ ಮೇಲಿದೆ. ಯಾವುದೇ ಕಾರಣದಿಂದಲೂ ದಿಗ್ಬಂಧನದ ವ್ಯಾಪ್ತಿಯಲ್ಲಿ ತೈಲ ಪೂರೈಕೆ ಇರಲಿಲ್ಲ. ಆದರೂ ಭಾರತ ಅಮೆರಿಕದ ಇಂತಹ ಅನೈತಿಕ ಕ್ರಮಗಳ ವಿರುದ್ಧ-ಸೆಟೆದು ನಿಲ್ಲುವ ಬದಲು ಇರಾನಿನಿಂದ ತೈಲ ಆಮದು ಮಾಡಿಕೊಳ್ಳಲು ಅಮೆರಿಕಾದ ಅನುಮತಿಗಾಗಿ ಮೊರೆಯಿಡುತ್ತಿದೆ.

ಬಲಿಪೀಠ

ಪಶ್ಚಿಮ ಏಶಿಯಾದಲ್ಲಿ ತನ್ನ ಅಧಿಪತ್ಯವನ್ನು ಸಾಧಿಸುವ ಸಲುವಾಗಿ ಇರಾನನ್ನು ಬದಿಗೊತ್ತುವ ಅಮೆರಿಕಾದ ಬಲಿಪೀಠಕ್ಕೆ ಭಾರತ ತನಗೆ ಹೆಚ್ಚು ಅನುಕೂಲಕರವಾದ ಇರಾನ್ ತೈಲ ಮತ್ತು ಅನಿಲ ಆಮದನ್ನು ಬಲಿ ಕೊಡುತ್ತಿದೆ. ಅಮೆರಿಕದ ತೀರ ಹತ್ತಿರದ ಮಿತ್ರ ರಾಷ್ಟ್ರಗಳಾದ ಜಪಾನ್ ಮತ್ತು ದಕ್ಷಿಣ ಕೊರಿಯಾಗಳು ಇರಾನಿನಿಂದ ಆಮದನ್ನು ಮುಂದುವರಿಸುತ್ತಿವೆ ಹಾಗೂ ಅಮೆರಿಕ ಮತ್ತು ಯುರೋಪಿಯನ್ ಯೂನಿಯನ್ನಿನ ದಿಗ್ಬಂಧನಗಳಿದ್ದಾಗ್ಯೂ ಹಣ ಸಂದಾಯ ವ್ಯವಸ್ಥೆ ಮಾಡಿಕೊಂಡಿವೆ. ಆದರೆ ಭಾರತ ತನ್ನ ರಾಷ್ಟ್ರೀಯ ಹಿತವನ್ನು ಬಲಿಕೊಟ್ಟು ಅಮೆರಿಕಾದ ಬಾಲ ಬಡಿಯುತ್ತಿರುವುದು ದಿಗ್ಭ್ರಮೆ ಹುಟ್ಟಿಸಿದೆ. ನ್ಯಾಟೋ ಕೂಟದಲ್ಲಿರುವ ಮತ್ತೊಂದು ದೇಶವಾದ ಟರ್ಕಿಯೂ ಇರಾನಿನಿಂದ ತೈಲ ಪೂರೈಕೆಯ ಹೊಸ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ. ಚೀನಾವು ಇರಾನ್ ಜತೆಗಿನ ತೈಲ ಪೂರೈಕೆಯನ್ನು ಹೆಚ್ಚು ಮಾಡಿಕೊಂಡಿದೆ. ಅದರ ಆಮದು ಜೂನ್ ತಿಂಗಳಲ್ಲಿ ಶೇಕಡಾ 53.2 ರಷ್ಟು ಹೆಚ್ಚಾಗಿದೆ ಮತ್ತು ವರ್ಷ ವರ್ಷ ಹೆಚ್ಚಾಗುತ್ತಲೇ ಇದೆ.

ಪರಮಾಣು ಒಪ್ಪಂದದ ಸಂಕೋಲೆ

ಪರಮಾಣು ಒಪ್ಪಂದದ ಕಬ್ಬಿಣದ ಸಂಕೋಲೆಗಳ 'ಬಂಧ'ನದಲ್ಲಿರುವ ಮನಮೋಹನ್ ಸಿಂಗ್ ಸರ್ಕಾರ, ಅಮೆರಿಕದ ತಾಳಕ್ಕೆ ತಕ್ಕಂತೆ ಕುಣಿಯಲು ಎಲ್ಲಾ ರೀತಿಯ ಸಿದ್ಧತೆಯನ್ನು ನಡೆಸಿದೆ. ಅಮೆರಿಕದ ಕಾಂಗ್ರೆಸ್ ಅಂಗೀಕರಿಸಿದ ಹೈಡ್ ಕಾಯಿದೆಗೆ ಅನುಸಾರವಾಗಿ ಇರಾನ್ ವಿರುದ್ಧ ಅಮೆರಿಕದ ಎಲ್ಲಾ ಕ್ರಮಗಳನ್ನು ಬೆಂಬಲಿಸಲು ಭಾರತ ಸರ್ಕಾರ ತುದಿಗಾಲಲ್ಲಿ ನಿಂತಿದೆ. ಯುರೇನಿಯಂನ್ನು ಪುಷ್ಟೀಕರಿಸುವ ಅಥವಾ ಅಣು ಇಂಧನವನ್ನು ಪುನರ್‌ಸಂಸ್ಕರಿಸುವ ಸಾಮರ್ಥ್ಯವನ್ನೂ ಒಳಗೊಂಡಂತೆ ತನ್ನ **ಪರಮಾಣು ತಂತ್ರಜ್ಞಾನ ಅಭಿವೃದ್ಧಿಪಡಿಸಲು ಸಾಧ್ಯವಾಗದಂತೆ ಇರಾನಿನ ಮೇಲೆ ದಿಗ್ಬಂಧನ ವಿಧಿಸುವ ಮತ್ತು ಮೂಲೆಗುಂಪು ಮಾಡುವ ಅಮೆರಿಕಾದ ಪ್ರಯತ್ನಕ್ಕೆ ಭಾರತ ಸಂಪೂರ್ಣವಾಗಿ ಸಹಕರಿಸುತ್ತಿದೆ.** ಅದೇ ಹೈಡ್ ಕಾಯಿದೆಯ ಪ್ರಕಾರ ಇರಾನ್ ವಿರುದ್ಧ ಅಮೆರಿಕಾದ ದಿಗ್ಬಂಧನ ಮತ್ತು ನಿಗ್ರಹದ ಪ್ರಯತ್ನದಲ್ಲಿ ಭಾರತ ಎಷ್ಟರ ಮಟ್ಟಿಗೆ ಸಹಕರಿಸುತ್ತಿದೆ ಎಂಬ ಅಂದಾಜು ಮಾಡಿ ಪ್ರತಿ ವರ್ಷ ಅಮೆರಿಕಾದ ಅಧ್ಯಕ್ಷರು ಕಾಂಗ್ರೆಸ್‌ಗೆ ವರದಿ ನೀಡಬೇಕಾಗುತ್ತದೆ. **ಭಾರತದ ವರ್ತನೆಯನ್ನು ಅಮೆರಿಕಾದ ಅಧ್ಯಕ್ಷರು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಇದ್ದಾರೆ ! ಎಚ್ಚರ !!**

ಭಾರತ ತನ್ನ ತೈಲ ಪೂರೈಕೆಯನ್ನು ಬೇರಾವುದೇ ದೇಶದಿಂದ ಮಾಡಿಕೊಳ್ಳಬಹುದು. ಅಮೆರಿಕಾಕ್ಕೆ ಶರಣಾಗಿ ಗುಲಾಮನಂತೆ ವರ್ತಿಸುವ ದಯನೀಯ ಪರಿಸ್ಥಿತಿಯನ್ನು ಹೇಗೆ ಸರಿಮಾಡುವುದು? 'ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು' ಎನ್ನುವ ಗಾದೆಯಂತೆ ದೇಶದ ಸ್ವಾಭಿಮಾನ ಮತ್ತು ದೇಶದ ಹಿತಾಸಕ್ತಿಗೆ ಆದ ಧಕ್ಕೆಯನ್ನು ಸರಿಪಡಿಸುವುದು ಹೇಗೆ?

ಕನ್ನಡಕ್ಕೆ: ತಡಗಳಲೆ ಸುರೇಂದ್ರ

ಯುಪಿಎ ದರ್ಬಾರ್

ಪುಟ 13 ರಿಂದ

ಖರ್ಚುಗಳು 37.5% ಇತ್ತು. ಕೇಂದ್ರೀಯ ಸಾರ್ವಜನಿಕ ಕಾಮಗಾರಿ ಇಲಾಖೆಯ (ಸಿಪಿಡಬ್ಲ್ಯುಡಿ) ವಿಧಿ-ನಿಯಮಗಳ ಪ್ರಕಾರ ಇದು 15% ಮೀರಬಾರದು. ಅಂದರೆ ಈ ಬಾಬ್ತಿನಲ್ಲಿ 352.47 ಕೋಟಿರೂ.ಗಳಷ್ಟು ಖರ್ಚು ಹೆಚ್ಚಾಗಿದೆ.

□ ಕನಾಟ್ ಪ್ಲೇಸಿನ ನವೀಕರಣಕ್ಕೆ ಮೇ 2005ರಲ್ಲಿ ಇಟ್ಟ ಬಜೆಟ್ ಹಣ ರೂ. 76 ಕೋಟಿ; ಜುಲೈ 2007ರ ವೇಳೆಗೆ ಅದು ರೂ.671 ಕೋಟಿಗೇರಿತ್ತು. ಅಂದರೆ ಸುಮಾರು 9ಪಟ್ಟು ಹೆಚ್ಚಳ!

ತಾವು, ತಮ್ಮ ಸರಕಾರ ಏನೂ ತಪ್ಪು ಮಾಡಿಲ್ಲ, ಎಲ್ಲವನ್ನೂ ಮಾಡಿರುವುದು 'ರಾಷ್ಟ್ರೀಯ ಹಿತಾಸಕ್ತಿ'ಯಿಂದ ಎಂದು ದಿಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಈ ನಡುವೆ ಸುರೇಶ ಕಲ್ಮಾಡಿಯವರನ್ನು ಕ್ರೀಡಾಕೂಟದ ಸಂಘಟನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ ಹೊಣೆ ಪ್ರಧಾನ ಮಂತ್ರಿಗಳ ಕಚೇರಿಯದು ಎಂದೂ ಸಿಎಜಿ ಹೇಳಿರುವುದಾಗಿ ವರದಿಯಾಗಿದೆ. ಈ ಮೂಲಕ ಭಾರತ ಸರಕಾರವೇ, ಮೂಲತಃ ಸರಕಾರದ ಒಡೆತನದಲ್ಲಿರಬೇಕು ಎಂದು ಯೋಜಿಸಿದ್ದ ಕ್ರೀಡಾಕೂಟದ ಸಂಘಟನೆ ಯಾರಿಗೂ ಉತ್ತರದಾಯಿಯಲ್ಲದ, ಸರಕಾರದ ಹತೋಟಿಯ ಹೊರಗಿರುವವರ ಪಾಲಾಯಿತು. ಅಂದರೆ ಇದೂ 'ಖಾಸಗೀಕರಣ'ದ ಕಾಯಿಲೆಗೆ ತುತ್ತಾಯಿತು, ಸಹಜವಾಗಿಯೇ ಹಗರಣಗಳ ಬಾಗಿಲು ತೆರೆಯಿತು. ಈ ಬಾಗಿಲು ತೆರೆದದ್ದು ಯಾರು ಎಂಬ ಬಗ್ಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ನಡುವೆ ವಾಗ್ವಾದ ನಡೆದಿದೆ- ಇದೂ ಸ್ವಾಭಾವಿಕವೇ, ಇಬ್ಬರೂ ನವ-ಉದಾರವಾದಕ್ಕೆ ಬದ್ಧರಾಗಿರುವವರು ತಾನೇ! ◎

→

ಸಾಮಾಜಿಕ ಪ್ರತಿಭಟನೆ ಎನ್ನಲಾದ ಈ ಪ್ರತಿಭಟನೆಗೆ ಪ್ರಮುಖ ಕಾರಣ ಗಗನಕ್ಕೇರಿದ ಮನೆ ಬಾಡಿಗೆ ಮತ್ತು ಮನೆಗಳೇ ಸಿಗದಿರುವುದು. ಎರಡು ವರ್ಷಗಳ ಹಿಂದೆ ಸರಾಸರಿ ಕುಟುಂಬದ ಆದಾಯದ ಸುಮಾರು ಕಾಲು ಭಾಗ ಮನೆ ಬಾಡಿಗೆಗೆ ಖರ್ಚಾಗುತ್ತಿದ್ದರೆ, ಈಗ ಅದು ಅರ್ಧಕ್ಕೆ ಏರಿದೆ. ಅಂದರೆ ಎರಡು ಪಟ್ಟು ಆಗಿದೆ. ನಗರಗಳಲ್ಲಿ ಸರ್ಕಾರಿ ಮಿತವ್ಯಯ ಮನೆಗಳ ಯೋಜನೆ ನಿಲುಗಡೆ ಮತ್ತು ವಿದೇಶೀ ಜ್ಯೂಗಳ ಮನೆ (ರಜಾ ಕಾಲದಲ್ಲಿ ಮಾತ್ರ ಬಳಸುವ) ಖರೀದಿಯಿಂದ ಇಂತಹ ತೀವ್ರ ಪರಿಸ್ಥಿತಿ ಉಂಟಾಗಿದೆ. ಇದು ಕಾರ್ಮಿಕ ವರ್ಗ ಮಾತ್ರವಲ್ಲ, ಮಧ್ಯಮ ವರ್ಗದವರನ್ನೂ ರೊಚ್ಚಿಗೆಬ್ಬಿಸಿದೆ. ಅದರಿಂದಾಗಿ ಈ ಚಳುವಳಿಯಲ್ಲಿ ವ್ಯಾಪಕ ಪಾಲ್ಗೊಳ್ಳುವಿಕೆ ಕಂಡು ಬಂದಿದೆ. ಆಹಾರ ಬೆಲೆಗಳ ತೀವ್ರ ಏರಿಕೆ ಸಹ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಹಲವು ಅಭಿವೃದ್ಧ ದೇಶಗಳಲ್ಲಿ ಆಗಿರುವಂತೆ 60-70 ರ ದಶಕದಲ್ಲಿ ವ್ಯಾಪಕವಾಗಿ ಜಾರಿಯಾಗಿದ್ದ ಸಾಮಾಜಿಕ ಭದ್ರತಾ ಕ್ರಮಗಳನ್ನು ಇಸ್ರೇಲಿನಲ್ಲೂ ಕಳಚಿ ಹಾಕಲಾಗುತ್ತಿದೆ. ಮಿತವ್ಯಯದ ಸರ್ಕಾರಿ ಮನೆಗಳ ನಿರ್ಮಾಣ ನಿಲ್ಲಿಸಿದ್ದು ಇದರ ಭಾಗವಾಗಿಯೇ. ಅದರ ತೀವ್ರ ಪರಿಣಾಮ ಎಲ್ಲಾ ಜನವಿಭಾಗಗಳ ಮೇಲೆ ಆಗಲಾರಂಭಿಸಿದೆ. ಪ್ರಧಾನಿ ನೆತನ್ಯಾಹು ಅವರ ಜನ ಬೆಂಬಲ ಒಂದು ಸಮೀಕ್ಷೆ ಪ್ರಕಾರ ಬೇಸಗೆಯ ಮೊದಲು ಶೇ. 50 ಇದ್ದಿದ್ದು, ಈಗ ಈ ಚಳುವಳಿಯ ನಂತರ ಶೇ. 32 ಕ್ಕೆ ಕುಸಿದಿದೆ.

ಭಯೋತ್ಪಾದಕ ದಾಳಿಯ ಬೆದರಿಕೆಯ ಬಗ್ಗೆ ಭೀತಿ, ಧಾರ್ಮಿಕ ಭಾವನೆ ಕೆರಳಿಸಿ ದೇಶದೊಳಗಿನ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹದ್ದುಬಸ್ತಿನಲ್ಲಿ ಇಟ್ಟಿದ್ದ ಇಸ್ರೇಲಿ ಆಳುವ ವರ್ಗಕ್ಕೆ ಈ ಬೆಳವಣಿಗೆ ತೀವ್ರ ಆಘಾತ ತಂದಿದೆ. ಗಾಜಾ ಪಟ್ಟಿಯ ಪ್ಯಾಲೆಸ್ಟೈನ್ನರ ವಿರುದ್ಧ ಕಾರ್ಯಾಚರಣೆಯಲ್ಲಿ ಯುದ್ಧ ಅಪರಾಧ ಮತ್ತು ಮಾನವ ಹಕ್ಕು ಉಲ್ಲಂಘನೆಯ ತೀವ್ರ ಅಂತರ್‌ರಾಷ್ಟ್ರೀಯ ಆರೋಪ, ಅದರ ವಿರುದ್ಧ "ಪ್ರತಿಭಟನಾ ಹಡಗು" - ಮುಂತಾದ ಘಟನೆಗಳು ಸಾಮಾನ್ಯ ಇಸ್ರೇಲಿ ನಾಗರಿಕರಿಗೆ ಇಸ್ರೇಲಿ ಪ್ರಭುತ್ವದ ನಿಜ ಸ್ವರೂಪ ಕ್ಕೆ ಕಣ್ಣು ತೆರೆಸಿವೆ. ಎರಡನೇ ದರ್ಜೆಯ ನಾಗರಿಕರಂತೆ ನಡೆಸಿಕೊಳ್ಳಲ್ಪಡುತ್ತಿರುವ ಪ್ಯಾಲೆಸ್ತೈನ್ನರು, ಸಾಮಾನ್ಯ ಇಸ್ರೇಲಿ ನಾಗರಿಕರ ಬಗ್ಗೆ ಪ್ರಭುತ್ವದ ಧೋರಣೆಯಲ್ಲಿ ಭಾರೀ ವ್ಯತ್ಯಾಸ ಏನಿಲ್ಲ. ಅದೇ ರೀತಿ ಇತರ ಅರಬ್ ಸರ್ವಾಧಿಕಾರಿಗಳಿಗೂ, ಚುನಾಯಿತ ಇಸ್ರೇಲಿ ನಾಯಕರಿಗೂ ಧೋರಣೆಯಲ್ಲಿ ಭಾರೀ ವ್ಯತ್ಯಾಸ ಏನಿಲ್ಲ ಎಂದು ಅರಿವಾಗ ಹತ್ತಿದೆ. ನವ-ಉದಾರವಾದಿ ನೀತಿಗಳಿಂದ ಇಸ್ರೇಲಿನ ವರ್ಗ ವಿಭಜನೆ ತೀವ್ರವಾಗುತ್ತಿದ್ದು, ಮೊದಲ ಬಾರಿಗೆ ಆಂತರಿಕ ಬಿಕ್ಕಟ್ಟು ಮತ್ತು ಬಾಹ್ಯ ಬಿಕ್ಕಟ್ಟು ಎರಡೂ ಜತೆಗೆ ಆಳುವ ವರ್ಗಗಳನ್ನು ತೀವ್ರ ವಾಗಿ ತಟ್ಟಿದೆ. ಪ್ಯಾಲೆಸ್ತೀನ್ ಪ್ರಭುತ್ವದ ಸ್ಥಾಪನೆಗೆ ವಿಶ್ವ ಸಂಸ್ಥೆಯ ಮಾನ್ಯತೆಗೆ ಪ್ಯಾಲೆಸ್ತೈನ್ನರ ತೀವ್ರ ಪ್ರಚಾರ ಮತ್ತು "ಪ್ರತಿಭಟನಾ ಹಡಗು" ಆಳುವ ವರ್ಗ ಎದುರಿಸುತ್ತಿರುವ ಬಾಹ್ಯ ಸವಾಲು. ಈ ಹಿನ್ನೆಲೆಯಲ್ಲಿ ಇಸ್ರೇಲಿನ ಈ "ಟೆಂಟ್ ಚಳುವಳಿ" ಅತ್ಯಂತ ಗಮನಾರ್ಹವಾದದ್ದು.



ನಮಗೆ ಹಸಿವು, ಸಂಕಟ ತಪ್ಪಿದ್ದಲ್ಲ. ನನಗೆ ಏನಾರ ಮಾಡಿ ರೇಷನ್ ಕಾರ್ಡ್ ಕೊಡ್ಸಿರೀ... ಎಂದೆಲ್ಲಾ ಕೇಳುವ ರಾಧಾ ಬಾಯಿಯಂತಹವರಿಗೆ ಉತ್ತರವೇನು? ಅದು ಎಲ್ಲಿ ಸಿಗುತ್ತದೆ?

ರೇಷನ್ ಬೇಕಾ? ಹಾಂಗಿದ್ರೆ ಬನ್ನೀ...

ಕೆ.ಎಸ್.ಲಕ್ಷ್ಮಿ

ಅಕ್ಕವ್ರೆ, ಮೊದಲು ಗಂಡನಿಗೆ ಊಟ ನೀಡಿ, ಮಕ್ಕಳಿಗೆ ಊಟ ನೀಡಿ ನಾನು ಉಣ್ತಿದ್ದೆ, ಕೆಲವು ವೇಳೆ ರೊಟ್ಟಿ ಪಲ್ಯ ಸಿಕ್ತಿತ್ತು. ಕೆಲವು ವೇಳೆ ಕಮ್ಮಿ ಬೀಳ್ತಿತ್ತು. ಆದ್ರೀಗ ನನ್ನ ಹೊಟ್ಟೆ ನನ್ನ ಗಂಡನ ಹೊಟ್ಟೆ ಒಂದ್ ಕಡೆ ಇರಲಿ, ಮಕ್ಕಳ ಹೊಟ್ಟೇನೂ ನೋಡಾಕಾಗ್ತಿಲ್ಲ.. ಊಟಕ್ಕೆ ಕುಂತರೆ ಎದೆ ಡವ ಡವ ಹೊಡ್ಕೋತಾದಾ... ಮಕ್ಕಳು ಇನ್ ಸ್ವಲ್ಪ ನೀಡವ್ವಾ ಅಂದ್ರೆ ಪಾತ್ರೆಯೊಳಗೆ ಏನೂ ಇರಾಕ್ಕಿಲ್ಲ..ಉದ್ಯೋಗ ಖಾತ್ರಿ ಇತರೆ ಕೂಲಿ ಕೆಲ್ಸ ಇದ್ರೆ ನಮ್ಮ ಹಸಿವು ಸ್ವಲ್ಪ ನೀಗ್ತದೆ... ಇಲ್ಲಾಂದ್ರೆ... ಈ ಸಂಕಟ ತಪ್ಪಿದ್ದಲ್ಲ. ನನಗೆ ಏನಾರ ಮಾಡಿ ರೇಷನ್ ಕಾರ್ಡ್ ಕೊಡ್ಸಿರಿ ಎಂದು ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಸಂಘಟನೆಯ ಸಭೆಯಲ್ಲಿ ರಾಧಾಬಾಯಿ ಹೇಳಿದ್ರೆ...



ಬೆಂಗಳೂರಿನಲ್ಲಿ ಒಬ್ಬರು ಆಟೋ ಡ್ರೈವರ್ ಹೃದಯಘಾತದಿಂದ ಜಯದೇವದಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಿದೆ. ಚಿಕಿತ್ಸೆಯ ಅಂದಾಜು ವೆಚ್ಚ ರೂ.1,92,000–00 ವೆಚ್ಚ ಭರಿಸಲು ಸಾಲ ಮಾಡಬೇಕು. ಇಲ್ಲವೇ ಆಟೋ ಮಾರಬೇಕು ಇಲ್ಲವೇ ಮನೆಯೊಡತಿಯ ಒಡವೆಗಳನ್ನು ಮಾರಬೇಕು. ಬಿಪಿಎಲ್ ಕಾರ್ಡ್‌ದಾರರ ಅಥವಾ ಯಶಸ್ವಿನಿ ಇದ್ದಿದ್ದರೆ ನಮಗೆ ಈ ಸ್ಥಿತಿ ಬರ್ತಿರಲಿಲ್ಲ. ಅಲ್ಪಸ್ವಲ್ಪ ಸಹಾಯ ಹಾಕ್ತಿತ್ತು. ಏನಾರ ಮಾಡಿ ನಮಗೆ ಬಿಪಿಎಲ್ ಕಾರ್ಡ್ ಕೊಡ್ಸಿ ಮೇಡಂ ಎಂದು ಕೇಳ್ತಿದ್ರೆ... ಕುಮಾರಸ್ವಾಮಿ ಲೇಔಟ್‌ನಲ್ಲಿ ಅರ್ಧ ಸೈಟಿನ ಸ್ವಂತ ಮನೆ ಇರುವಾಕೆ 'ಲಕ್ಷ್ಮೀಯವರೆ... ಏನಾರ ಮಾಡಿ ಬಿಪಿಎಲ್ ರೇಷನ್ ಕಾರ್ಡ್ ಕೊಡ್ಸಿ 2 ಹೆಣ್ಣು ಮಕ್ಕಳು. ಓದ್ಸೋದು ತುಂಬಾ ಕಷ್ಟ. ಬಿಪಿಎಲ್ ಕಾರ್ಡ್ ಇದ್ದವರಿಗೆ ಮಾತ್ರ ಭಾಗ್ಯಲಕ್ಷ್ಮಿ ಬಾಂಡ್ ಕೊಡ್ತಾರಂತೆ ಏನಾದ್ರು ಮಾಡಿ ಕೊಡ್ಸಿ ಅಂತ ಕೇಳ್ತಿದ್ರು.'

ಸುಬ್ರಮಣ್ಯಪುರ ಸ್ಥಳೀಯ ನಿವಾಸಿ 8ನೇ ತರಗತಿಯಲ್ಲಿ ಓದುತ್ತಿರುವ ನಿತ್ಯ.. ಸಂಘಟನೆಯ ಕಛೇರಿಗೆ ಬಂದು 'ಆಂಟಿ.. ಶಾಲೆಯಲ್ಲಿ ಸೈಕಲ್ ಕಾರ್ಡ್ ಕೊಡ್ತಾರಂತೆ. ಬಿಪಿಎಲ್ ಕಾರ್ಡ್ ಬೇಕಂತೆ.. ನಮ್ಮ ಹತ್ರ ಇಲ್ಲ. ಏನು ಮಾಡೋದು' ಎಂದು ಆಸೆ ಕಣ್ಣಿನಿಂದ ಕೇಳುವಾಗ ಕಣ್ತುಂಬಿ ಬಂತು.

ಹೀಗೆ ಆಹಾರ–ಆರೋಗ್ಯ–ಶಿಕ್ಷಣದಂತಹ ಸಾಮಾಜಿಕ ಸೌಲಭ್ಯಗಳನ್ನು ಬಿಪಿಎಲ್ ಕಾರ್ಡುದಾರರಿಗೆ ಸೀಮಿತಗೊಳಿಸಿ ಅದನ್ನು ವೈಭವೀಕರಿಸಿ.. ಜನತೆಯ ಅಭದ್ರತೆಯನ್ನು ರಾಜಕೀಯ ಪ್ರಚಾರಕ್ಕೆ ಬಳಸಿಕೊಳ್ಳುವುದು ಒಂದೆಡೆಯಾದರೇ, ಬಿಪಿಎಲ್ ಕಾರ್ಡ್‌ದಾರರ (ಬಡವರ ಸಂಖ್ಯೆ) ಸಂಖ್ಯೆ ಕಡಿಮೆ ತೋರಿಸಿ, ಹೊಸ ಆರ್ಥಿಕ ನೀತಿಗಳಿಂದ ಬಡತನವೇ ಕಾಣೆಯಾಗಿದೆ ಎಂಬುದನ್ನು ನಂಬಿಸಲು ಮಾಡುತ್ತಿರುವ ಹುನ್ನಾರದ ನೀತಿಗಳ ನಡುವೆ ಈ ಜನರಿಗೆ ಹೇಗೆ ರೇಷನ್ ಕಾರ್ಡ್ ಕೊಡಿಸಬಹುದು? ಇದಕ್ಕೊಂದೇ ಉತ್ತರ ಹೋರಾಟ ಮತ್ತು ಚಳುವಳಿ. ಆ ಮೂಲಕ ಜನರ ಪರವಾದಂತಹ ಬದಲಾವಣೆ.

ಇಂದು ಹಸಿವು ನೀಗಿಸುವಿಕೆ ಆಳುವ ಕೇಂದ್ರ–ರಾಜ್ಯ ಸರ್ಕಾರಗಳ ಆದ್ಯತೆಯಾಗುತ್ತಿಲ್ಲ. ಬೆಲೆ ಏರಿಕೆಯು ಜೀವ ತೆಗೆಯುವ ಅವ್ಯಕ್ತ

ಪುಟ 12 ಕ್ಕೆ

ಆಗಸ್ಟ್ 10 ರಾಜ್ಯದ ಆಹಾರ ಗೋದಾಮುಗಳ ಮುತ್ತಿಗೆ

ಈ ಹಿನ್ನೆಲೆಯಲ್ಲಿ ಬೆಲೆ ಏರಿಕೆಯನ್ನು ವಿರೋಧಿಸಿ, ಪಡಿತರ ವ್ಯವಸ್ಥೆ ಸಾರ್ವತ್ರೀಕರಣಗೊಳಿಸಿ ಎಲ್ಲ ಕುಟುಂಬ ಗಳಿಗೂ 2 ರೂ.ನಂತೆ, 35 ಕೆ.ಜಿ. ಅಕ್ಕಿ/ಗೋಧಿ ನೀಡುವಂತೆ ಒತ್ತಾಯಿಸಿ, ಅವೈಜ್ಞಾನಿಕ/ಅಮಾನವೀಯ ಹೊಸ ಬಿಪಿಎಲ್ ಸಮೀಕ್ಷೆಗಳನ್ನು ತಿರಸ್ಕರಿಸಲು, ಇದೇ ಆಗಸ್ಟ್ 10 ರಂದು ರಾಷ್ಟ್ರ ವ್ಯಾಪಿಯಾಗಿ ಮಹಿಳೆಯರ ನೇತೃತ್ವದಲ್ಲಿ ಹೋರಾಟಗಳು ನಡೆಯಲಿವೆ. ಇದರ ಅಂಗವಾಗಿ, ರಾಜ್ಯ ವ್ಯಾಪಿಯಾಗಿ ಜಿಲ್ಲಾ ಕೇಂದ್ರಗಳಲ್ಲಿರುವ ಆಹಾರದ ಗೋದಾಮುಗಳ ಮುಂದೆ ಹೋರಾಟಗಳನ್ನು ಹಮ್ಮಿಕೊಳ್ಳಲಾಗಿದೆ. ಜಗದ ಹಸಿವಿನ ವಿರುದ್ಧದ ಹೋರಾಟವನ್ನು ಬೆಂಬಲಿಸಿ ಪಾಲ್ಗೊಳ್ಳಲು ಸಂಘಟನೆಯು ಮನವಿ ಮಾಡುತ್ತದೆ.

ಎಚ್ಚರಿಕೆ

ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಿಸಿ ಮುಂದೆ ಬರಲಿರುವ ಬಿಪಿಎಲ್ ಸಮೀಕ್ಷೆಗಳ ಸ್ಯಾಂಪಲ್

1.	ಸ್ಥಿರ ದೂರವಾಣಿ ಇದ್ದರೆ ನಿಮಗೆ ಒಂದೊಮ್ಮೆ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್‌ಸಿ/ ಎಸ್‌ಟಿ ಅಂಗವಿಕಲರಿಗೆ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಸ್ಥಿರ ದೂರವಾಣಿ (ಎಸ್‌ಟಿಡಿ ಬೂತ್ ಮಂಜೂರಾಗಿದ್ದು, ಅವು ನಷ್ಟದಲ್ಲಿರುವುದನ್ನು ಪರಿಗಣಿಸದೇ ಅವರಿಗೆ ನೀಡುವ	ಅಂಕ 0 ಅಂಕ 0
2.	ಭಿಕ್ಷುಕರಾಗಿ ಭಿಕ್ಷೆ ಬೇಡುತ್ತಿದ್ದರೆ ಅವರಿಗೆ ಒಂದೊಮ್ಮೆ ಒಂದು ಕುಟುಂಬದಲ್ಲಿ ಹಿರಿಯ ನಾಗರಿಕರಿದ್ದು, ದುಡಿಯಲೇಬೇಕಾದ ಸಂದರ್ಭದವಿದ್ದಲ್ಲಿ ಅವರಿಗೆ	ಅಂಕ 1 ಅಂಕ 0
3.	ಕಾನೂನಿನ ಮೂಲಕ ಬಿಡುಗಡೆಯಾದ ಜೀತದಾಳಾಗಿದ್ದರೆ ಒಂದೊಮ್ಮೆ ಓಡಿ ಬಂದಿರುವ ಜೀತದಾಳಾಗಿದ್ದರೆ	ಅಂಕ 1 ಅಂಕ 0
4.	ಒಂದು ಕೊಠಡಿ ಇರುವ ಕಚ್ಚಾ ಮನೆಗೆ ಒಂದೊಮ್ಮೆ ಎರಡು ಸಣ್ಣ ಕೊಠಡಿ ಇರುವ ಕಚ್ಚಾ ಮನೆಯಾದರೆ	ಅಂಕ 1 ಅಂಕ 0
5.	ಯಾವುದೇ ಕುಟುಂಬ ಕೃಷಿಯೇತರ (ಸರ್ಕಾರದಿಂದ ನೊಂದಾಯಿಸಲ್ಪಟ್ಟ ಸಣ್ಣ ವ್ಯಾಪಾರ) ಚಟುವಟಿಕೆ ಹೊಂದಿದ್ದರೆ ಅವರಿಗೆ ಒಂದೊಮ್ಮೆ ಸ್ತ್ರೀ ಶಕ್ತಿ, ಸ್ವಸಹಾಯ ಗುಂಪಿನ ಮಹಿಳೆಯರು ನೋಂದಾಯಿತ ಆರ್ಥಿಕ ಚಟುವಟಿಕೆಯಲ್ಲಿದ್ದರೆ ಅವರಿಗೆ	ಅಂಕ 0 ಅಂಕ 0
6.	ಆ ಕುಟುಂಬದ ಎಲ್ಲರೂ ಅಂಗವಿಕಲರಾಗಿದ್ದರೆ ಅವರ ಒಂದೊಮ್ಮೆ ಮನೆಯಲ್ಲಿ ಯಾರಾದರೂ ಅಂಗವಿಕಲರಿದ್ದು, 16 ರಿಂದ 59 ವರ್ಷದೊಳಗಿನ ವಯಸ್ಕರಿದ್ದರೆ ಅವರ	ಅಂಕ 1 ಅಂಕ 0
7.	16 ರಿಂದ 59 ರನಡುವಿನ ವಯಸ್ಕ ಗಂಡಸರಿಲ್ಲದ, ಮಹಿಳೆಯರೇ ನಿರ್ವಹಿಸುತ್ತಿರುವ ಕುಟುಂಬಕ್ಕೆ ಒಂದೊಮ್ಮೆ ನೀವು ಮಹಿಳೆ, ನೀವು ಮನೆ ನಿರ್ವಹಿಸುತ್ತಿದ್ದೀರಿ, ನಿಮಗೆ 17 ವರ್ಷದ ಮಗ ಇದ್ದಲ್ಲಿ ನಿಮ್ಮ	ಅಂಕ 1 ಅಂಕ 0
8.	ಎಸ್‌ಸಿ/ಎಸ್‌ಟಿ ಕುಟುಂಬಗಳಿಗೆ ಎಸ್‌ಸಿ/ಎಸ್‌ಟಿ ಕುಟುಂಬಗಳು ಬುಡಕಟ್ಟಿಗೆ ಸೇರಿದ್ದರೆ ಅವರ ಅಂಕ	ಅಂಕ 0 ಅಂಕ 1
9.	ಯಾವುದೇ ಕುಟುಂಬದಲ್ಲಿ 16 ರಿಂದ 59 ರೊಳಗಿನ ವಯಸ್ಸಿನವರಿದ್ದರೆ ಅವರ ಒಂದೊಮ್ಮೆ ನಿಮಗೆ 35 ವರ್ಷ ಇದ್ದಲ್ಲಿ ನೀವು ವಯಸ್ಕರು ಹಾಗಾಗಿ ನಿಮ್ಮ	ಅಂಕ 0 ಅಂಕ 0
10.	25 ವರ್ಷ ಮೇಲ್ಪಟ್ಟು ಸಾಕ್ಷರರಿಲ್ಲದ ಕುಟುಂಬಕ್ಕೆ ಒಂದೊಮ್ಮೆ ನಿಮಗೆ 35 ವರ್ಷ, 4ನೇ ತರಗತಿ ಓದಿದ್ದೀರಿ ಹಾಗಾಗಿ ನಿಮ್ಮ	ಅಂಕ 1 ಅಂಕ 0
11.	ಭೂಹೀನರಾಗಿದ್ದು ಕುಟುಂಬದ ಬಹುತೇಕ ಆದಾಯ ಹಂಗಾಮಿ ದೈಹಿಕ ಕೆಲಸದಿಂದ ಬರುತ್ತಿದ್ದರೆ ಅವರಿಗೆ ಒಂದೊಮ್ಮೆ ನಿಮಗೆ ತುಂಡು ಭೂಮಿ ಇದ್ದು, ಒಣ ಮತ್ತು ಅನುತ್ಪಾದಕವಾಗಿದ್ದರೂ ನೀವು ಬೆಳಗಿನಿಂದ ಸಂಜೆವರೆಗೆ ದುಡಿಯುವ ಹಾಗಿದ್ದರೂ ನಿಮ್ಮ	ಅಂಕ 1 ಅಂಕ 0

ಒಂದೊಂದು ರಾಜ್ಯಕ್ಕೆ ಒಂದೊದು ರೀತಿಯ ಗರಿಷ್ಟ ಅಂಕ ನಿಗದಿಯಾಗಲಿದ್ದು, ಅದರ ಆಧಾರದಲ್ಲಿ ಬಿಪಿಎಲ್ ರೇಷನ್ ಕಾರ್ಡ್ ನೀಡಲಾಗುವುದು. ಬಂಧುಗಳೇ, ಈ ಬಿಪಿಎಲ್ ಸಮೀಕ್ಷೆಗಳ ಪ್ರಶ್ನೆಗಳು ಮತ್ತು ಅಂಕಗಳಿಂದ ರೇಷನ್ ಕಾರ್ಡ್ ಪಡೆದುಕೊಳ್ಳುವಿರಾ / ಕಳೆದುಕೊಳ್ಳುವಿರಾ ಎಂಬುದರ ಕುರಿತು ಒಂದು ಕ್ಷಣ ಯೋಚಿಸಿ.

ಜಗದ ಹಸಿವಿನ ವಿರುದ್ಧದ ಹೋರಾಟವನ್ನು ಬೆಂಬಲಿಸಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH